# ಟಿ.ವಿ.ಅನಂತರಾಮನ್

# ಗ್ರೇಟೆಸ್ಟ್ ಎನಿಮಿ



894.81430872
ANA N92
ಗ್ರಂಥ ಸ್ವಾಮ್ಯ ವಿಭಾಗ

(11,590) 1992

# ಗ್ರೇಟೆಸ್ಟ್ ಎನಿಮಿ

DEPARTMENT OF PUBLIC LIBRARIES, STATE OF MYSORE
COPY RIGHT
BUREAU

ಬಿ. ವಿ. ಅನಂತರಾಮ್

ವಿಜಯ್ ಪಬ್ಲಿಕೇಷನ್ಸ್
43, ಸುಬ್ಬಣ್ಣಾಚಾರ್ ಗಲ್ಲಿ
ಅರಳೇಪೇಟೆ : : ಬೆಂಗಳೂರು-53

META ENTERED

'GRETEST ENIMI' - a Thriller Spy Novel Written By B. V. Anantharam. Published by Vijay Publications, 43, Subbannachar Lane, Cottonpet, Bangalore-53.

ಪ್ರಥಮ ಮುದ್ರಣ : 1982

ಹಕ್ಕುಗಳು : ಲೇಖಕರದು

ಕಲೆ : ಮಾಯಾ

ಬೆಲೆ : ರೂ. 15-00

894.814 308 72

ANA N92

META ENTERED

ಪ್ರಧಾನ್ ಪ್ರಿಂಟರ್ಸ್
43, ಸುಬ್ಬಣ್ಣಾಚಾರ್ ಗಲ್ಲಿ,
ಅರಳೇಪೇಟೆ, ಬೆಂಗಳೂರು-53.

# ಮುನ್ನುಡಿ

ಆತ್ಮೀಯ ಓದುಗ ಗೆಳೆಯ/ಗೆಳತಿಯರೇ,

'ಚಿಂಕೆ'ಯ ಹೊಸದೊಂದು ಅಸೈನ್‌ಮೆಂಟ್ ಇದೀಗ ನಿಮ್ಮ ಕೈನಲ್ಲಿದೆ. ಹೇಗಿದೆ ಎಂಬುದನ್ನು ತಿಳಿಸುವಿರೆಂದು ಭಾವಿಸುವೆ.

ಈ ಕೃತಿ ಪ್ರಕಟಿಸುತ್ತಿರುವ ವಿಜಯ್ ಪಬ್ಲಿಕೇಷನ್ಸ್‌ನ ಗೆಳೆಯರಿಗೆ ವಂದನೆ.

ಮುಖಪುಟ ಕಲಾವಿದರಿಗೆ, ಅಚ್ಚುಕೂಟದ ಗೆಳೆಯರಿಗೆ ನಮನ.

ವಿಶ್ವಾಸವಿರಲಿ.

ಬಿ. ವಿ. ಅನಂತರಾವ್

1652, ಪ್ರಕಾಶನಗರ
3ನೇ ಹಂತ
ಬೆಂಗಳೂರು-21

DEPARTMENT OF PUBLIC LIBRARIES
COPY RIGHT
BUREAU
No.
STATE CENTRAL LIBRARY BANGALORE

## ನಮ್ಮಲ್ಲಿ ಮಾರಾಟವಾಗುತ್ತಿರುವ ಕೃತಿಗಳು

ಬಿ ವಿ. ಅನಂತರಾಮ್‌ರವರ

# ಏಂಜಲ್ ಆಫ್ ಡೆತ್

# ಶತ್ರುವಿಗೆ ವರುಷ

# 'ಜಿಂಕೆ'ಗೆ ನಿಮಿಷ

ಜಿ. ಪ್ರಕಾಶ್‌ರವರ

# ಬೆಂಕಿಯ ಜ್ವಾಲೆ

ಶೈಲಜಾ ಪ್ರಕಾಶ್‌ರವರ

# ಕೂಡಿ ಬಂದಿದೆ ಕಂಕಣ

# 1

ಚೈನಾ ಮಿಲಿಟರಿ ಇಂಟಲಿಜೆನ್ಸ್ ರೀಜನಲ್ ಡೈರೆಕ್ಟರ್ ಮೇಜರ್ ತ್ಯಾಂಗ್ ಚೀನ್ ತನ್ನ ಕಾರ್ಯಾಲಯದ ಮುಂದೆ ಕಪ್ಪನೆಯ ಫೋರ್ಡ್ ಕಾರಿನಿಂದ ಕೆಳಗಿಳಿದ

ಎರಡೇ ಹೆಜ್ಜೆಯಲ್ಲಿ ವರಾಂಡಾಗೆ ಬಂದು ಅಲ್ಲಿನ ಮೆಟ್ಟಿಲುಗಳನ್ನು ಚಕಚಕನೆ ಹತ್ತಿ, ಎರಡನೇ ಅಂತಸ್ತಿನಲ್ಲಿರುವ ತನ್ನ ಆಫೀಸ್ ರೂಮನ್ನು ಸೇರಿಕೊಂಡ.

ಆರಡಿ ಎತ್ತರವಿರುವ ಆತನಿಗೆ ಸರಿಹೊಂದುವಂತೆ ಮಂಡಿಯ ಕೆಳಭಾಗದವರೆವಿಗೂ ಜೋಲಾಡುತ್ತಿರುವ ಓವರ್ ಕೋಟನ್ನು ಬಿಚ್ಚದೇನೆ, ತಲೆಯ ಮೇಲಿರುವ ಹ್ಯಾಟನ್ನು ಮಾತ್ರ ತೆಗೆದು ಹ್ಯಾಂಗರ್‌ನಲ್ಲಿ ಸಿಕ್ಕಿಸಿ ತನ್ನ ಟೇಬಲ್ಲಿನ ಕಡೆ ನೋಡಿದ.

ಟೇಬಲ್ಲಿನ ಮೇಲಿರುವ ಫ್ಲಾಸ್ಕ್‌ನಲ್ಲಿ ಟೀ ಇದೆಯೆಂದು ಆತನಿಗೆ ಗೊತ್ತು. ಆ ಫ್ಲಾಸ್ಕ್‌ನಲ್ಲಿರುವ ಟೀಯನ್ನು ಕಪ್‌ನಲ್ಲಿ ಸುರಿದುಕೊಂಡು ಸಿಪ್ ಮಾಡುತ್ತಾ ಆ ರೂಮನ್ನು ಒಮ್ಮೆ ಅವಲೋಕಿಸಿದ.

ಬಹಳ ನೀಟಾಗಿದೆ ಆ ರೂಮ್.

ತನ್ನಲ್ಲಿರುವ ಕಪ್ಪಿನೊಂದಿಗೆ ವಿಂಡೋ ಹತ್ತಿರ ಬಂದು ಡೋರನ್ನು ಓಪನ್ ಮಾಡಿ ತನ್ನ ದೃಷ್ಟಿಯನ್ನು ಹೊರಗಡೆಗೆ ಚೆಲ್ಲಿದ.

ಹೊರಗೆ ಮಂಜಿನ ಹನಿ ದಟ್ಟವಾಗಿ ದ್ರವಿಸುತ್ತಿದೆ. ಮಂಜಿನ ಬಿಂದುಗಳು ಆ ಕಿಟಕಿಯ ಗ್ಲಾಸ್ ಡೋರ್‌ನ ಮೇಲೆ ಬಿದ್ದು ಜಾರುತ್ತಿದೆ.

ಛಳಿ ಗಾಳಿ ಆತನ ಮುಖಕ್ಕೆ ಗಪ್ಪನೆ ಬಡಿಯಿತು. ಆದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ತನ್ನ ತಲೆಯನ್ನು ಕಿಟಕಿಯಿಂದ ಹೊರಗಿಟ್ಟು ನೋಡಿದ.

ದೂರದಲ್ಲಿ ಬೆಳ್ಳಗೆ ಅಸ್ಪಷ್ಟವಾಗಿ ತೋರುತ್ತಿದೆ ಹಿಮಾಲಯನ್ ರೇಂಜರ್. ಅಲ್ಲಿನ ರೋಡಿನಲ್ಲಿ ಸಿವಿಲಿಯನ್ಸ್ ಅಷ್ಟಾಗಿ ತಿರುಗುತ್ತಿಲ್ಲ.

ನಂತರ ವಿಂಡೋವನ್ನು ಕ್ಲೋಸ್ ಮಾಡಿ, ಕೈಗಳೆರಡನ್ನೂ ಉಜ್ಜಿಕೊಳ್ಳುತ್ತಾ ತನ್ನ ಛೇಂಬರ್‌ನಲ್ಲಿ ಕುಳಿತುಕೊಳ್ಳಲು ಹೋದನಾತ.

ಅದೇ ಕ್ಷಣದಲ್ಲಿ ಟೇಬಲ್ ಮೇಲಿರುವ ಫೋನ್ ಅರಚತೊಡಗಿತು

ತಕ್ಷಣವೇ ರಿಸೀವರನ್ನೆತ್ತಿಕೊಂಡು ತನ್ನ ಕಿವಿಗಾನಿಸಿಕೊಂಡು-

"ಯೆಸ್, ಮೇಜರ್ ತ್ಯಾಂಗ್ ಚೀನ್ !

ಗರ್ವದಿಂದಲೇ ಹೇಳಿಕೊಂಡ.

ಆ ಬದಿಯಿಂದ ಮಾತುಗಳು ಕೇಳಿ ಬರುತ್ತಿರುವಂತೆಯೇ ಆ ಕೊಠಡಿಯ ಬಾಗಿಲನ್ನು ತೆರೆದುಕೊಂಡು ಒಳಗಡಿಯಿರಿಸಿದ ಡೆಪ್ಯೂಟಿ ಡೈರೆಕ್ಟರ್ ನ್ಯಂಗ್ ಸುವಾ ವಾಂಗ್.

ಆತನಿಗೆ ಸುಮಾರು ನಲವತ್ತೈದು ವಯಸಿರಬಹುದು.

ತಿಂದು ಕೊಬ್ಬಿದ ದೇಹ, ಕ್ರೂರವಾದ ಮನಸ್ಸತ್ವ.

ತ್ಯಾಂಗ್ ಚೀನ್ ಏನೋ ಮಾತನಾಡುತ್ತಿರುವುದನ್ನು ಗಮನಿಸಿ ನಿಶ್ಶಬ್ದವಾಗಿ ಅಲ್ಲೇ ಇದ್ದ ಕುರ್ಚಿಯಲ್ಲಿ ಆತನ ಎದುರಿನಲ್ಲಿಯೇ ಕುಳಿತ ವಾಂಗ್.

ಎರಡು ನಿಮಿಷಗಳ ಕಾಲ ಫೋನಿನಲ್ಲಿ ಮಾತನಾಡಿ ನಂತರ ಫೋನನ್ನು ಕ್ರೆಡಿಲ್ ಮಾಡಿದ ಚೀನ್, ಗಡ್ಡದ ಮೇಲೆ ಬೆರಳಾಡಿಸುತ್ತಾ ಎರಡು ಕ್ಷಣ ಸುಮ್ಮನಾಗಿ-

"ಲೆಫ್ಟಿನೆಂಟ್, ಗೊತ್ತು ಗುರಿಯಿಲ್ಲದ ಕಾರೊಂದು 'ಸ್ಪಾಟ್ ಒನ್'ಗೆ ಹತ್ತಿರದಲ್ಲಿ ಕಂಡು ಬಂತೆಂದು ರಿಪೋರ್ಟ್ ಬಂದಿದೆ. ಅವನ್ನು ಅಲ್ಲಿಗೆ ಬಿಡಿ. ಅಂದ ಹಾಗೆ 'ಕೈಖಾ' ಬಗ್ಗೆ ರಿಪೋರ್ಟ್ ಏನು ?"

"ಆ ವಿಷಯವನ್ನೇ ಹೇಳೋಣವೆಂದು ಬಂದೆ ಸಾರ್. ಆ ಕೈಖಾ ಈ ದಿನ ಬೆಳಗಿನಿಂದ ಕಾಣಿಸುತ್ತಿಲ್ಲ"

ಪ್ಪಷ್ಟ ದನಿಯಲ್ಲಿ ಹೇಳಿದ ವಾಂಗ್.

"ವ್ಹಾಟ್ ?"

ಅದುರಿಬಿದ್ದ ತ್ಯಾಂಗ್ ಚೀನ್.

"ಕಾಣಿಸುತ್ತಿಲ್ಲವೇ ? ಏನಾಯ ? ಅತನನ್ನು ನಿರಂತರ ವಾಚ್ ಮಾಡು ತ್ತಿರಬೇಕೆಂದು ಹೇಳಿದ್ದೆ ?"

"ನಮ್ಮವರು ಅತನನ್ನು ಒಂದು ಕ್ಷಣ ಸಹ ಬಿಟ್ಟಿರುತ್ತಿರಲಿಲ್ಲ. ಆದರೆ ಅತ ಸಮಯ ಸಾಧಿಸಿ ನಮ್ಮಲ್ಲೊಬ್ಬನಿಗೆ ಮಣ್ಣು ಮುಕ್ಕಿಸಿ ತಪ್ಪಿಸಿಕೊಂಡು ಓಡಿಹೋದ. ಆ ಸೈನಿಕನ ಶವ ನಮ್ಮ ಕಣ್ಣಿಗೆ ಬಿತ್ತು"

"ಹಾಗಾ...."

ಎಂದು ಏನನ್ನೊ ಆಲೋಚಿಸಿ–

"ಆ ಕಾರು ಮಾಯವಾಗಿರುವುದಕ್ಕೂ, ಕೈಥಾ ತಪ್ಪಿಸಿಕೊಂಡಿರುವು ದಕ್ಕೂ ಏನಾದರೂ ಕನೆಕ್ಷನ್ ಇದೆಯೋನೋ ! ಅಂದರೆ ಆ ಕೈಥಾನ ವಿಷಯ ದಲ್ಲಿ ನಾವು ಊಹಿಸಿರುವುದು ನಿಜವೇ ಇರಬೇಕು. ಹಾಗಾದರೆ ಇದು ಬಹಳ ಸೀರಿಯಸ್ ವಿಷಯ. ನೀವು ಪರ್ಸನಲ್ಲಾಗಿ ಇದನ್ನು ಪರಿಶೀಲಿಸಬೇಕು"

"ಈಗಿಂದೀಗಲೇ 'ಸ್ಪಾಟ್ ಒಸ್' ಹತ್ತಿರ ಹೋಗೋಣ"

ಹೇಳುತ್ತಲೇ ಮೇಲೇಳತೊಡಗಿದ ವಾಂಗ್.

"ಮತ್ತೆ ಆ ಕೈಥಾ ಸ್ನೇಹಿತರ ಬಗ್ಗೆಯೇನಾದರೂ ವಿಷಯ ತಿಳಿದಿದೆಯಾ ?"

ಯೋಚಿಸುತ್ತಲೇ ಕೈಥಾ ಸ್ನೇಹಿತರ ಬಗ್ಗೆ ಪ್ರಶ್ನಿಸಿದ ಚೀನ್.

"ಈಗ ನಾವು ಆ ಪ್ರಯತ್ನದಲ್ಲೇ ಇದ್ದೇವೆ. ಅಂದ್ಹಾಗೆ ಅತ ಇಲ್ಲಿಗೆ ಹೇಗೆ ಬಂದ ಎಂಬುವುದೇ ತಿಳಿಯುತ್ತಿಲ್ಲ. ಅತನಿಗೆ ಸ್ನೇಹಿತರ್‍ಯಾರೂ ಇಲ್ಲ ವೆಂದು ತಿಳಿದು ಬಂದಿದೆ. ಏನೇ ಆದರೂ ಇನ್ನೂ ವಿವರವಾಗಿ ಪರಿಶೋಧಿಸ ಬೇಕಾಗಿದೆ"

"ಕ್ವಿಕ್ ! ಮೊದಲು ಆ ವಿಷಯದ ಬಗ್ಗೆ ಆಲೋಚಿಸಿ. ಅಪರೇಷನ್ ಡೇ ಹತ್ತಿರ ಬರತೊಡಗಿದೆ"

ತಲೆಯಲ್ಲಾಡಿಸುತ್ತಾ ಹೊರಟುಹೋದ ವಾಂಗ್

ಅತ ಹೋದ ನಂತರ ಆಲೋಚನೆಯಲ್ಲಿ ಮುಳುಗಿದ ತ್ಯಾಂಗ್ ಚೀನ್.

"ಕೈಫಾ....!"

ಆತನ ನಿಜ ನಾಮಧೇಯ ಏನೆಂದು ಗೊತ್ತಿಲ್ಲ. ಆತ ಇಂಡಿಯನ್ ಏಜೆಂಟ್ ಎಂದು ಅವರುಗಳು ಸಸ್ಪೆಕ್ಟ್ ಮಾಡಿದಾರೆ. ಆದರೆ ಅದಕ್ಕೆ ತಕ್ಕ ಆಧಾರ ಸಿಗಲಿಲ್ಲ.

ಆತ ಹೇಗೆ ಅದೃಶ್ಯನಾದ ?

ಆ ಕಾರು ಯಾರದು ?

ಅಲ್ಲಿಗೆ ಹೇಗೆ ಬಂದಿತು ?

ತಲೆಯನ್ನೊಮ್ಮೆ ಕೊಡವಿಕೊಂಡು ಟೇಬಲ್ ಮೇಲಿರುವ ಫೋನನ್ನು ತೆಗೆದುಕೊಂಡ ತ್ಯಾಂಗ್ ಚೀನ್.

• • ० •

ತ್ಯಾಂಗ್ ಚೀನ್ ಕಾರ್ಯಾಲಯದಿಂದ ಹೊರಬಿದ್ದ ಡೆಪ್ಯುಟಿ ಡೈರೆಕ್ಟರ್ ವಾಂಗ್. ವರಾಂಡದಲ್ಲಿ ನಿಂತುಕೊಂಡು ಮೇಲಿನಿಂದ ಸುರಿಯುತ್ತಿರುವ ಮಂಜಿನ ಕಡೆಯೇ ನೋಡುತ್ತಾ ಉಳಿದ.

ಆತನಿಗೆ ಆ ಸಮಯದಲ್ಲಿ 'ನ್ಯಾತಾ' ನೆನಪಿಗೆ ಬಂದಳು.

ಆತನ ತುಟಿಗಳ ಮೇಲೆ ಹುಸಿನಗೆ ಹರಿದಾಡಿತು.

ನ್ಯಾತಾಳಿಗೆ ಸುಮಾರು ಇಪ್ಪತ್ತೇಳು ವಯಸ್ಸಿರಬಹುದು.

ಆಕೆಯಲ್ಲಿ ಅದಕ್ಕಿಂತ ಆಕರ್ಷಣೆ ಅಧಿಕ.

ಬಹಳ ಚೂಟಿಯ ಹುಡುಗಿ.

ಅಷ್ಟೆ ಅಲ್ಲ, ಆಕೆ ತನಗೆ ಬೇಕಾದ ಸುಖವನ್ನು ಸಹ ಮುಲಾಜಿಲ್ಲದೆ ಕೊಡಬಲ್ಲಳು.

ಹಾಗೆ ನ್ಯಾತಾಳ ಬಗ್ಗೆ ಆಲೋಚಿಸುತ್ತಿರುವಂತೆಯೇ ಬುರ್ರನೆ ಶಬ್ದ ಹೊರಡಿಸುತ್ತ ಆತನ ಮುಂದೆ ಮಿಲಿಟರಿ ಜೀಪೊಂದು ಬಂದು ನಿಂತಿತು.

ತನ್ನ ಆಲೋಚನೆಗಳಿಂದ ಹೊರಬಿದ್ದು ಆ ಮಿಲಿಟರಿ ಜೀಪಿನಲ್ಲಿ ಕುಳಿತ.

"ಸ್ಟಾರ್ಟ್ ಒನ್"

ಎಂದು ಹೋಗಬೇಕಾಗಿರುವ ದಾರಿ ತಿಳಿಸಿದ.

ಜೀಪ್ ನಿಧಾನವಾಗಿ ಅಲ್ಲಿಂದ ಕದಲಿತು.

ಆ ಜೀಪಿನ ಹಿಂಭಾಗದಲ್ಲೇ ಮತ್ತೊಂದು ಜೀಪ್ ಹೊರಟಿತು.

ಅದರಲ್ಲಿ ನಾಲ್ವರು ಮಿಲಿಟರಿ ಸೈನಿಕರಿದ್ದಾರೆ.

ಡೆಪ್ಯುಟಿ ಡೈರೆಕ್ಟರಿಗೆ ಅವರುಗಳು ಸೆಕ್ಯುರಿಟಿ ಗಾರ್ಡ್ಸ್.

ಅಲ್ಲೇ ಹತ್ತಿರದಲ್ಲೇ ಇರುವ 'ಚೆಕಿಂಗ್ ಸ್ಕ್ವಾಡ್' ದೂರದಿಂದಲೇ ಜೀಪುಗಳನ್ನು ಗಮನಿಸಿ ಆ ರೋಡಿಗೆ ಅಡ್ಡಲಾಗಿ ಕಬ್ಬಿಣದ ರಾಡನ್ನು ಇಳಿಸ ತೊಡಗಿದರು.

ಆದರೆ ಆ ಗ್ಯಾಂಗ್ ಲೀಡರ್ ಜೀಪಿನ ನಂಬರನ್ನು ಗಮನಿಸಿ ರಾಡನ್ನು ಮೇಲಕ್ಕೆತ್ತುವಂತೆ ಸನ್ನೆ ಮಾಡಿ 'ಲೆಫ್ಟಿನೆಂಟ್ ವಾಂಗ್' ಎಂದು ಹೇಳಿದ ದೊಡ್ಡ ದನಿಯಲ್ಲಿ.

ಚಕ್ಕನೆ ಮೇಲಕ್ಕೆ ಹೋಯಿತು ಕಬ್ಬಿಣದ ರಾಡ್.

ಆ ಜೀಪ್ ಅವರನ್ನು ದಾಟುತ್ತಿದ್ದಂತೆಯೇ ಚೆಕಿಂಗ್ ಸ್ಕ್ವಾಡ್‌ಗಳೆಲ್ಲರೂ ಅಟೆನ್‌ಷನ್‌ನಲ್ಲಿ ನಿಂತು ಸೆಲ್ಯೂಟ್ ಮಾಡುವುದನ್ನು ತನ್ನ ಕಣ್ಣಂಚಿನಲ್ಲೇ ಗಮನಿಸಿದ ವಾಂಗ್.

ಆ ಗ್ರಾಮದ ಹೊರಗೆ ಮೈದಾನದಂತಿದೆ.

ಇನ್ನು ಅಲ್ಲಿಂದ ಹಿಮಾಲಯನ್ ರೇಂಜಸ್‌ವರೆವಿಗೆ ಚಿಕ್ಕ ಚಿಕ್ಕ ಪೊದೆಗಳು, ಅಲ್ಲಲ್ಲಿ ಕೋನಿಫರ್ ಮರಗಳನ್ನು ಬಿಟ್ಟರೆ ಬೇರೇನಿಲ್ಲ.

ಅಲ್ಲಿನ ಟಾರ್ ರೋಡಿನ ಮೇಲೆ ಮಂಜು ದಟ್ಟವಾಗಿ ಬಿದ್ದುದರಿಂದ ರೋಡ್ ಯಾವುದು, ಮಂಜಿನ ಗುಡ್ಡೆ ಯಾವುದೆಂದು ತಿಳಿಯುತ್ತಿಲ್ಲ.

ಆದರೆ ಕೊಂಚ ದೂರ ಹೋಗುವಷ್ಟರಲ್ಲಿ ಕಪ್ಪಗೆ ತೋರಿಬರುತ್ತಿರುವ ಟಾರ್ ರೋಡ್ ದರ್ಶನವಿಟ್ಟಿತು.

ಆ ರೋಡಿನ ಮೇಲೆ ಬೀಳುತ್ತಿರುವ ಮಂಜನ್ನು ಕ್ಲೀನ್ ಮಾಡುತ್ತಿರುವ ಕೆಲ ಜನರು ಕಂಡು ಬಂದರು.

ಮತ್ತೆ ನ್ಯಾಶಾ ನೆನಪಿಗೆ ಬಂದಳು. ವಾಂಗ್ ಆಲೋಚನೆಯಲ್ಲಿ ಮುಳುಗಿದ.

ತನಗೆ ಈ ಕೆಲಸ ಇಲ್ಲದಿದ್ದರೆ ಬಹಳ ಹೊತ್ತು ಆಕೆಯೊಂದಿಗೇ ಟ್ರಿಪ್

ಪಾಸ್ ಮಾಡುತ್ತಿದ್ದ. ಆದರೆ ಗೊತ್ತು ಗುರಿಯಿಲ್ಲದ ಕೈಫಾ ಎಂಬ ಮನುಷ್ಯ ಈ ಕಸ ಕೆಲಸವನ್ನು ಹಾಳು ಮಾಡಿದ.

ಈ ಕೈಫಾ ವಿಷಯದಲ್ಲಿ ಡೈರೆಕ್ಟರ್ ಏಕೆ ಅಷ್ಟೊಂದು ತಲೆ ಕೆಡಿಸಿ ಕೊಳ್ಳುತ್ತಿದ್ದಾರೆಂದು ತಿಳಿದುಬರುತ್ತಿಲ್ಲ.

ತಮ್ಮಲ್ಲಿ ಗೂಢಚಾರರು ಇಲ್ಲವೆಂದಲ್ಲ....

ಅವರಿಗೆ ಸ್ವಲ್ಪ ಮಾತ್ರವೂ ಅನುಮಾನ ಬಂದರೆ ಸಾಕು ವೈರಿಗಳಿಗೆ ಮಣ್ಣು ಮುಕ್ಕಿಸಿ ಅವರನ್ನು ಮಂಗಮಾಯ ಮಾಡುತ್ತಿದ್ದರು.

ಆದರೆ ಈ ಕೈಫಾನನ್ನೇಕೆ ಸುಮ್ಮನೆ ಬಿಟ್ಟರು ?

ಬರೀ ವಾಚ್ ಮಾಡೆಂದು ಏಕೆ ಹೇಳಿದರು ?

ಆ ಜೀಪುಗಳು ಹಿಮಾಲಯನ್ ರೇಂಜನ್ನು ಸಮೀಪಿಸಿದವು.

ಎತ್ತರವಾದ ಪರ್ವತದ ಸುತ್ತಲೂ ಪ್ರದಕ್ಷಿಣೆ ಹಾಕುತ್ತಿವೆ. ಕ್ರಮೇಣ ಮೇಲಕ್ಕೇರುತ್ತಿವೆ.

ಮತ್ತೆ ಕೆಲವು ನಿಮಿಷಗಳಲ್ಲಿ ಆ ಜೀಪ್‌ಗಳು ನಿಂತವು.

ಜೀಪಿನಲ್ಲಿ ಕುಳಿತುಕೊಂಡೇ ಸುತ್ತಲೂ ನೋಡಿದ ವಾಂಗ್.

ಒಂದು ಬದಿಯಲ್ಲಿ ಎತ್ತರವಾದ ಪರ್ವತ ಶಿಖರ ತೋರಿಬರುತ್ತಿದೆ.

ಮತ್ತೊಂದು ಕಡೆ ಅಗಾಧ !

ಆ ಅಗಾಧದ ಅಂಚಿನಲ್ಲಿ ಕೊನಿಫರ್ ವೃಕ್ಷಗಳು ಎತ್ತರವಾಗಿ ಬೆಳೆದು ಮಂಜಿನಿಂದ ತುಂಬಿ ಸೊಗಸಾಗಿ ಕಾಣುತ್ತಿದೆ

ಅಲ್ಲಿನ ರೋಡಿನ ಪಕ್ಕದಲ್ಲೇ ಹಳ್ಳದ ಬದಿಯಲ್ಲಿ ಚಿಕ್ಕ ಕಲ್ಲಿನ ಗೋಡೆ ಯೊಂದಿದೆ

ಮಂಜು ಸುರಿಯುವುದು ಕೊಂಚವಾಗಿ ತಗ್ಗಿದೆ.

ಮಳೆ ಹನಿ ಸುರಿಯುವಂತೆ ಮೆಲ್ಲನೆ ಸುರಿಯುತ್ತಿದೆ.

ಜೀಪಿನಿಂದ ಕೆಳಗಿಳಿದ ಲೆಫ್ಟಿನೆಂಟ್ ವಾಂಗ್.

"ಕಾರು ಎಲ್ಲಿ ಕಂಡು ಬಂತು ?"

ಹಿಂದೆಯೇ ಜೀಪಿನಿಂದ ಕೆಳಗಿಳಿದ ಆತನ ಅಸಿಸ್ಟೆಂಟ್‌ನನ್ನು ಪ್ರಶ್ನಿಸಿದ.

"ಈ ಸ್ಥಳದಲ್ಲಿ !"

ಎನ್ನುತ್ತಾ ಅಂಚಿನವರೆವಿಗೂ ಆತನನ್ನು ಕರೆದುಕೊಂಡು ಹೋದ.

"ಇಲ್ಲಿಂದ ಕೆಳಗಿಳಿಯಲು ಸಾಧ್ಯತೆಗಳೇನಾದರೂ ಇವೆಯೆ ?"

"ಇದೆ ಲೆಫ್ಟಿನೆಂಟ್ ! ಹೀಗೆ ಬನ್ನಿ "

ದಾರಿ ತೋರಿಸುತ್ತಾ ಅಗಾಧದ ಅಂಚಿನಲ್ಲಿರುವ ಚಿಕ್ಕ ತಪ್ಪಲಿನವರೆಗೂ ಹೋದರು.

ಮೆಲ್ಲನೆ ಇಳಿಯುವುದರಿಂದ ಸ್ಪಾಟ್ ಸೇರುವಷ್ಟರಲ್ಲಿ ಹದಿನೈದು ನಿಮಿಷ ಹಿಡಿದಿದೆ.

ತನ್ನ ಹಿಂದೆ ಬಂದಂತಹ ಸೈನಿಕರಿಗೆ ಸನ್ನೆ ಮಾಡಿದ

ಅವರುಗಳು ಅದನ್ನು ಅರ್ಥಮಾಡಿಕೊಂಡು ಚಕಚಕನೆ ಮುಂದೆ ಬಂದು ಆ ಕಾರಿನ ಮೇಲಿರುವ ಮಂಜನ್ನು ಒರೆಸಲು ಮುಂದಾದರು.

ಬೂದಿ ಕಲರಿನ 'ಕೆಲ್ಮೆಟ್' ಅದು. ಚೈನಾ ಮೇಡ್. ಆ ಕಾರಿಗೆ ನಂಬರ್ ಪ್ಲೇಟ್ಸ್ ಇಲ್ಲ. ಪರ್ವತದ ಮೇಲಿಂದ ಅಗಾಧಕ್ಕೆ ತಳ್ಳಿರುವಂತಿದೆ. ಅದನ್ನು ಮಿಲಿಟರಿ ಜನರು ಆಕ್ಸಿಡೆಂಟ್ ಎಂದು ಭಾವಿಸಿದ್ದಾರೆ.

ಆ ಕಾರನ್ನು ಎಷ್ಟು ಪರೀಕ್ಷಿಸಿದರೂ ಉಪಯೋಗಕ್ಕೆ ಬರುವ ಆಧಾರಗಳ್ಯಾವುದೂ ಆತನಿಗೆ ತೋರುತ್ತಿಲ್ಲ.

ಅಲ್ಲಿ ಸುತ್ತಮುತ್ತಲಿನಲ್ಲೂ ಹುಡುಕಾಡಿದರೂ ಏನೊಂದೂ ಗೋಚರಿಸಲಿಲ್ಲ.

ಅಲ್ಲಿನ ಪರಿಶೋಧನೆಯನ್ನು ಮುಗಿಸಿ ಹಿಂತಿರುಗಿ ಬರುತ್ತಿರುವಂತೆಯೇ ಸಿಡಿಲು ಬಡಿದವನಂತೆ ನಿಂತುಬಿಟ್ಟ ಲೆಫ್ಟಿನೆಂಟ್ ವಾಂಗ್.

ಆತನ ಕಣ್ಣುಗಳು ಕಿರಿದಾದವು.

ತನ್ನನ್ನು ಆಕರ್ಷಿಸಿದ ಆ ಹೆಜ್ಜೆ ಗುರುತುಗಳೆಡೆಗೆ ಪರಿಶೀಲನದಿಂದ ಬಗ್ಗಿ ನೋಡಿದ

"ಕಮಾನ್, ನಿಮ್ಮಗಳ ಬೂಟುಗಳನ್ನು ತೋರಿಸಿ"

ತನ್ನ ಅನುಮಾನವನ್ನು ತೀರಿಸಿಕೊಳ್ಳಲು ತನ್ನ ಮನುಷ್ಯರಿಗೆ ಆಜ್ಞಾಪಿಸಿದ.

ಆತನ ಪ್ರವರ್ತನೆಗೆ ಆಶ್ಚರ್ಯ ಪಡುತ್ತಾ ತಮ್ಮ ಬೂಟುಗಳನ್ನು ತೋರಿಸಿದರು.

"ನೋ ! ಇದಲ್ಲ, ಇಲ್ಲಿ ಬೇರೆ ಯಾರೋ ತಿರುಗಾಡಿದ್ದಾರೆ. ...."

ತಿರುಗಾಡುತ್ತಿದ್ದಾರೆ. ಹರಿಯಪ್... ಹುಡುಕಿ ಅವರು ಬಹಳ ದೂರ ಹೋಗಿರಲಿಕ್ಕಿಲ್ಲ. ಬಿ ಕ್ವಿಕ್"

ಅರಚತೊಡಗಿದ ವಾಂಗ್.

ಆತನ ಅರಚುವಿಕೆಗೆ ಅದುರಿಬಿದ್ದು ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹೋಗಿ ಹುಡುಕಲು ಆರಂಭಿಸಿದರು ವಾಂಗ್‌ನ ಅನುಚರರು.

ಅಲ್ಲಿರುವ ಕೋನಿಫರ್ ವೃಕ್ಷದ ಮೇಲೆ ಯಾವುದೋ ಚಲನೆ ಆದಂತಾಗಿ ವಾಂಗ್ ಚಕ್ಕನೆ ತಲೆಯೆತ್ತಿ ಮೇಲೆ ನೋಡಿದ.

ಆ ಕ್ಷಣದಲ್ಲೇ ಹೋಲ್‌ಸ್ಟರ್‌ನಲ್ಲಿರುವ ರಿವಾಲ್ವರನ್ನು ತನ್ನ ಕೈಗೆ ತೆಗೆದುಕೊಂಡ.

ಮೇಲಿರುವ ವೃಕ್ಷದ ಮೇಲೆ ಏನೂ ತೋರುತ್ತಿಲ್ಲ. ಆದರೆ ಆತನ ಹಿಂಬದಿಯಲ್ಲಿ ಏನೋ ಶಬ್ದವಾಯಿತು.

ಗಿರಕ್ಕನೆ ಹಿಂತಿರುಗಲು ನೋಡಿದ.

ಆದರೆ ಆಗಲೇ ವೇಳೆ ಮೀರಿತ್ತು.

ಆತನ ತಲೆಯ ಮೇಲೆ ಬಲವಾದ ವಸ್ತುವೊಂದು ಮುತ್ತಿಕ್ಕಿತು.

ಅದರ ಹಿಂದೆಯೇ ಬಲವಾದ ಹಸ್ತವೊಂದು ಆತನ ಬಾಯನ್ನು ಮುಚ್ಚಿತು.

ಜ್ಞಾನ ತಪ್ಪುತ್ತಿರುವಂತೆಯೇ ತನ್ನನ್ಯಾರೋ ಎತ್ತಿಕೊಂಡು ಹೋಗುತ್ತಿರುವುದು ಮಾತ್ರ ವಾಂಗ್‌ಗೆ ಗೊತ್ತು.

ಆದಾದ ನಂತರ ಏನಾಯಿತೆಂಬ ಪರಿವೆಯೇ ಇಲ್ಲ ಆತನಿಗೆ.

# 2

ಲೆಫ್ಟಿನೆಂಟ್ ವಾಂಗ್ ಅದೃಶ್ಯವಾದನೆಂದು ತಿಳಿದ ತ್ಯಾಂಗ್‌ಚೀನ್ ಬಹಳವಾಗಿ ವ್ಯಥೆಪಟ್ಟ.

ಆ ವಿಷಯವನ್ನು ತಾನು ನಂಬಲಾಗದೆ ವಾಂಗ್‌ನ ಹಿಂದೆ ಹೋದಂತಹ ಸೈನಿಕರನ್ನು ಪದೇ ಪದೇ ಕೇಳತೊಡಗಿದ.

ಅವರುಗಳ ಉತ್ತರ ಆತನನ್ನು ಸಂತೃಪ್ತಿ ಪಡಿಸಲಿಲ್ಲ.

ತಕ್ಷಣವೇ ಟೆಲಿಫೋನಿನಲ್ಲಿ ತನ್ನ ಅಸಿಸ್ಟೆಂಟ್‌ಗೆ ಆರ್ಡರ್ ಪಾಸ್ ಮಾಡಿ ವಾಂಗ್‌ನ ಹಿಂದೆ ಹೋದಂತಹ ಸೈನಿಕರನ್ನು ಬಂಧಿಸಿದ.

ವಾಂಗ್‌ಗಾಗಿ ಹಿಮಾಲಯನ್ ರೇಂಜಸ್‌ನಲ್ಲಿ ಇರುವ ತಮ್ಮ ಸ್ಥಾವರಕ್ಕೆ ವೈರ್‌ಲೆಸ್ ಮೆಸೇಜ್ ಹೋಯಿತು.

ಇವೆಲ್ಲವನ್ನೂ ಮುಗಿಸಿ ತನ್ನ ಕುರ್ಚಿಯಲ್ಲಿ ಕುಳಿತುಕೊಂಡ ತ್ಯಾಂಗ್ ಚೀನ್.

ಆತನ ಕಣ್ಣ ಮುಂದೆ ಸುಮಾರು ಇಪ್ಪತ್ತು ದಿನಗಳ ಕೆಳಗೆ ಚೈನಾದ ರಾಜಧಾನಿಯಾದ ಪೀಸಿಂಗ್ ನಗರದಲ್ಲಿ ಡಿಫೆನ್ಸ್ ಸೆಕ್ರೆಟರಿ ಮತ್ತು ಹೆಡ್ ಆಫ್ ದಿ ಎಕ್ಸ್‌ಟರ್ನಲ್ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ನ ಕ್ಯಾಪ್ಟನ್ ಸುವಾಂಗ್ ಹೌ ನೊಂದಿಗೆ ನಡೆಸಿದ ಸಮಾವೇಶ ನೆನಪಿಗೆ ಬಂತು.

ಆ ದಿನ—

"ಈ ಸಮಾವೇಶವನ್ನು ಯಾಕಿಷ್ಟು ಸೀಕ್ರೇಟಾಗಿ ಏರ್ಪಡಿಸಿರುವಿರಿ ?"

ಎಂದವರು ತ್ಯಾಂಗ್ ಚೀನ್‌ನನ್ನು ಪ್ರಶ್ನಿಸಿದರು.

"ಕಾಮ್ರೇಡ್ ! ನಮ್ಮ ಡಿಫೆನ್ಸ್ ಮಿನಿಸ್ಟರ್‌ನಿಂದ ಮಿಲಿಟರಿ ಎಸ್ಪಿನೇಜ್

ಡಿಪಾರ್ಟ್‌ಮೆಂಟ್ ಸೀಕ್ರೆಟ್ಸ್ ಲೀಕಾಗುತ್ತಿರುವ ವಿಷಯ ನಿಮಗೆ ಗೊತ್ತು. ಇದರಲ್ಲಿ ಹೈ ರ್‍ಯಾಂಕ್ ಆಫೀಸರ್‌ಗಳಿಗಿಂತ ಮುಖ್ಯವಾದ ಕಾರಣ ಕೈಫಾ ಎಂಬ ವ್ಯಕ್ತಿಯೆಂದು ನನಗೆ ತಿಳಿದು ಬಂದಿದೆ. ಈ ಕೈಫಾನನ್ನೇ ಆಗಲಿ ಅಥವಾ ಆತನಿಗೆ ಸಹಾಯ ಮಾಡುತ್ತಿರುವ ಆಫೀಸರ್ಸ್‌ಗಳೇ ಆಗಲಿ ಅವರನ್ನು ಬಂಧಿಸುವುದರಲ್ಲಿ ನಾವೇನೂ ಸಾಧಿಸಿದಂತೆ ತೋರುವುದಿಲ್ಲ. ಆ ಕೈಫಾ ಎಂಬ ವ್ಯಕ್ತಿಯೊಂದಿಗೆ ಬೇರೆ ಯಾರದೋ ಟಚ್ ಇದೆ. ತನಗೆ ಒದಗಿದ ಇನ್‌ಫರ್‌ಮೇಷನನ್ನು ಆ ಲಿಂಕ್ ಮುಖಾಂತರ ಹೊರಗಡೆಗೆ ಅಂದರೆ ಇಂಡಿಯಾಗೆ ತಿಳಿಸುತ್ತಿದ್ದಾನೆಂದು ನನ್ನ ಅನುಮಾನ"

ಎಂದು ಕೊಂಚ ಹೊತ್ತು ನಿಲ್ಲಿಸಿ ಅವರಿಬ್ಬರ ಮುಖವನ್ನು ಅವಲೋಕಿಸಿದ ತ್ಯಾಂಗ್ ಚೀನ್.

"ಗೋ ಎಹೆಡ್ !"

ಬಹಳ ಆಸಕ್ತಿಯಿಂದ ಹೇಳಿದವನು–

"ಆದುದರಿಂದ ಕೈಫಾನನ್ನು, ಆತನಿಗಿರುವ ಲಿಂಕನ್ನು ತಿಳಿದುಕೊಳ್ಳಲು ನಾನೊಂದು ಪ್ಲಾನ್ ಹಾಕಿದ್ದೇನೆ. ಆ ಪ್ಲಾನಿನ ಪ್ರಕಾರ ನಾವು ಯಾವುದೋ ಒಂದು ಪ್ರಮಾದಕರವಾದ ಕೆಲಸವನ್ನು ನಿರ್ವಹಿಸುತ್ತಿರುವಂತೆ ಕೈಫಾಗೆ ಫಾಲ್ಸ್ ಇನ್‌ಫರ್‌ಮೇಷನ್ ತಿಳಿಯುವ ಹಾಗೆ ಮಾಡಬೇಕು. ಅದನ್ನು ಆತ ಯಾರಿಗೆ ತಿಳಿಸುತ್ತಾನೆಂದು ತಿಳಿದುಕೊಳ್ಳಬೇಕು. ಇದರಿಂದ ಈ ರಿಂಗನ್ನು ಶಾಶ್ವತವಾಗಿ ಹೊಡೆದುಹಾಕಬಹುದು"

"ಅದಕ್ಕಾಗಿ ಇಷ್ಟೊಂದು ಶ್ರಮವೇಕೆ ? ಆ ಕೈಫಾನನ್ನು ಕೊಂದರಾಯಿತು !"

ಕ್ಯಾಪ್ಟನ್ ಸುನಾಂಗ್ ಹಾಗೆ ಹೇಳಿದ.

ಅದಕ್ಕೆ ತನ್ನ ತಲೆಯನ್ನು ಅಡ್ಡವಾಗಿ ಅಡಿಸಿದ ತ್ಯಾಂಗ್‌ಚೀನ್.

"ಇದರಿಂದ ಲಾಭವಿಲ್ಲ. ಆತನಿಗೆ ಸಹಾಯ ಮಾಡುತ್ತಿರುವ ಆಫೀಷಿಯುಲ್ಸನ್ನು ಸ್ಪಾಟ್ ಮಾಡದೆ ಹೋದರೆ ತುಂಬ ತೊಂದರೆ ಆಗುತ್ತೆ. ಅಹಲ್ಲದೆ ನಮಗೆ ಅದರಿಂದ ಲಾಭವೂ ಇದೆ"

ಎಂದು ಮುಂದಕ್ಕೆ ಬಾಗಿದ.

"ಏನದು ?"

"ಆ ಕೈಥಾ ಇಂಡಿಯನ್ ಏಜೆಂಟ್ ಎಂದು ತಿಳಿದೇ ಆತನಿಗೆ ಸಹಾಯ ಮಾಡುತ್ತಿರುವ ಆಫೀಸರ್ಸ್ ಮುಖಾಂತರ ಆತನಿಗೆ ಫಾಲ್ಸ್ ಇನ್‌ಫರ್ಮೇಷನ್ ತಲುಪುವ ಹಾಗೆ ಜಾಗ್ರತೆವಹಿಸಬಹುದು. ಆದುದರಿಂದ ಮೂವ್ ಆಗುತ್ತಿರುವ ಇಂಡಿಯನ್ ಏಜೆಂಟನ್ನು ಕ್ಯಾಪ್ಚರ್ ಮಾಡಲು ನಮಗೆ ಒಳ್ಳೆಯ ಅವಕಾಶ ದೊರಕುತ್ತದೆ. ಇಲ್ಲವೇ ಅವರು ನಮಗೆ ಶರಣಾದರೆ ಸರಿಯಾದ ಇನ್‌ಫರ್ಮೇಷನ್‌ನನ್ನು ತಿಳಿಸಬಹುದು"

ಆ ಇಬ್ಬರೂ ಎರಡು ನಿಮಿಷಗಳ ಕಾಲ ಆಲೋಚಿಸುತ್ತಲೇ ಉಳಿದರು.

"ಗುಡ್! ನಿಮ್ಮ ಪ್ಲಾನ್ ಚೆನ್ನಾಗಿದೆ. ಇನ್ನೂ ಕೊಂಚ ವಿವರಿಸುತ್ತೀರಾ?"

ಡಿಫೆನ್ಸ್ ಸೆಕ್ರೆಟರಿ ಕೇಳಿದ.

ಉತ್ಸಾಹದಿಂದ ಮುಂದಕ್ಕೆ ವಾಲಿದ ತ್ಯಾಂಗ್ ಚೀನ್ ವಿವರಿಸಿದ.

• • • •

ಹೀಗೆ ಜರುಗಿದಂತಹ ವಿಷಯಗಳು ಒಂದೊಂದೇ ನೆನಪಿಗೆ ಬರತೊಡಗಿತು ತ್ಯಾಂಗ್ ಚೀನ್‌ಗೆ

ಆ ಕೈಥಾ ಇಂಡಿಯನ್ ಏಜೆಂಟೆನ್ನುವುದು ನಿಸ್ಸಂದೇಹ.

ಆದರೆ ಆತ ತನಗೆ ತಿಳಿದಂತಹ ವಿಷಯಗಳನ್ನು ಹೇಗೆ ತಾನೇ ತಿಳಿದುಕೊಳ್ಳುತ್ತಾನೆಂದು ತನಗೆ ತಿಳಿಯುತ್ತಿಲ್ಲ.

ವೈರ್‌ಲೆಸ್ ಟ್ರಾನ್ಸ್‌ಮೀಟರ್‌ಗಾಗಿ ಬಹಳವಾಗಿ ಜಾಲಾಡಿದರು.

ಆದರೆ ಹೈಫ್ರೀಕ್ವೆನ್ಸಿಯಲ್ಲೂ ಸಹ ಅಹರ ಜಾಲ ತಿಳಿಯಲಿಲ್ಲ.

ಹಾಗಾದ್ರೆ ಆ ಕೈಥಾನೇ ಸ್ವಯಂ ವಿಷಯವನ್ನು ಹೊರಗೆ ಅರುಹುತ್ತಿರಬಹುದು. ಅಂತಹ ವಿಷಯಗಳು ಸೇರಲಿರುವ ಜಾಗವನ್ನು ಸೇರುತ್ತಿವೆ

ಆದರೆ ಆ ಕೈಥಾ ಸಾಮಾನ್ಯನಲ್ಲವೆಂದು ವಾಂಗ್‌ನನ್ನು ಮಾಯ ಮಾಡಿದುದರಿಂದ ಅರ್ಥವಾಗಿದೆ.

ತಾನೊಂದು ಬಾರಿ ಆತನ ಮನೆಯನ್ನು ಚೆಕ್ ಮಾಡಬೇಕು.

ಹೀಗೆಂದುಕೊಳ್ಳುತ್ತಾ ಎದ್ದು ನಿಂತನು ತ್ಯಾಂಗ್ ಚೀನ್

# 3

ಕೈಥಾ ವಾಸಿಸುತ್ತಿರುವ ಮನೆಗೆ ಸ್ವಲ್ಪ ದೂರದಲ್ಲಿ ತನ್ನ ಫೋರ್ಡ್ ಕಾರನ್ನು ನಿಲ್ಲಿಸಿದ ತ್ಯಾಂಗ್ ಚೀನ್. ಆ ಕಾರಿನಲ್ಲಿ ಕುಳಿತೇ ಸುತ್ತಮುತ್ತಲಿನ ಪರಿಸರವನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಿದ

ಆ ಬೀದಿ ನಿರ್ಮಾನುಷ್ಯವಾಗಿದ್ದರೂ ಅಲ್ಲಲ್ಲಿ ಮನೆ ಕಿಟಕಿಯ ಪರದೆಯ ಹಿಂದಿನಿಂದ ತ್ಯಾಂಗ್ ಚೀನನ್ನು ಪರಿಶೀಲಿಸುತ್ತಿರುವ ಸಿವಿಲಿಯನ್ಸ್ ಅತನ ಕಂಗಳಿಂದ ತಪ್ಪಿಸಿಕೊಳ್ಳಲಾರದೆ ಹೋದರು

ಕಾರಿನ ಡೋರನ್ನು ತೆರೆದು ಹೊರಗಡಿಯಿಟ್ಟು ತನ್ನ ಓವರ್‌ಕೋಟನ್ನು ಸರಿಮಾಡಿಕೊಂಡು ತನ್ನ ಜೇಬಿನಲ್ಲಿ ಕೈಗಳೆರಡನ್ನೂ ಇರಿಸಿಕೊಂಡು ನಿಧಾನವಾಗಿ ತನ್ನ ಹೆಜ್ಜೆಗಳನ್ನು ಮುಂದಿರಿಸಲು ಅನುವಾದ ಲೀಜನಲ್ ಪೈರೆಕ್ಟರ್ ತ್ಯಾಂಗ್ ಚೀನ್.

ಅತನ ಕೈಯಲ್ಲಿ ರಿವಾಲ್ವರಿನ ಬಟ್ಸ್ ಇದೆ

ನಾಲ್ಕೈದು ಗಜಗಳ ತರುವಾಯ ಎಡಗಡೆಗೆ ದಾರಿಯಿದೆ. ಅದೊಂದು ಸಂದು ಆ ಸಂದಿನಲ್ಲಿ ಅಷ್ಟಾಗಿ ಮನೆಗಳಿಲ್ಲ. ಆ ಸಂದಿಯಲ್ಲಿನ ನಾಲ್ಕನೆ ಮನೆಯೇ ಅತನಿಗೆ ಬೇಕಾಗಿರುವುದು.

ಆ ಮನೆಯನ್ನು ಸಮೀಪಿಸಬೇಕೆಂಬ ಉತ್ಸುಕತೆ ಅತನಲ್ಲಿ ಹೆಚ್ಚಾಯಿತು. ಯಾವುದೋ ಭಯದ ಸೂಚನೆಗಳು ತೋರಿಬರುತ್ತಿವೆ. ನೋಡಬಾರದನ್ನು ನೋಡಹೋಗುತ್ತಿದ್ದೇನೆಂಬ ಭಾವನೆ ಅತನನ್ನು ಅವರಿಸಿಕೊಂಡಿದೆ.

ಅದೊಂದು ಹೆಂಚಿನ ಮನೆ. ಬಹಳ ಕಾಲದಿಂದ ಶುಭ್ರವಾಡದೆ ಇರುವುದರಿಂದ ಮಂಜು ದಟ್ಟವಾಗಿ ಆವರಿಸಿದೆ

ತನ್ನ ಬಲಗೈಯನ್ನು ರಿವಾಲ್ವರಿನ ಮೇಲಿರಿಸಿ ಎಡಗೈಯಿಂದ ಬಾಗಿಲನ್ನು ಮುಂದಕ್ಕೆ ತಳ್ಳಿದ ತ್ಯಾಂಗ್‌ಚೀನ್.

ಒಂದಿನಿತೂ ಶಬ್ದ ಬಾರದ ಹಾಗೆ ಬಾಗಿಲು ತೆರೆದುಕೊಂಡಿತು.

ಆ ಮನೆಯ ಹೊಸ್ತಿಲಲ್ಲೇ ನಿಂತು ಒಳಗೆ ತನ್ನ ಕಣ್ಣನ್ನು ಹಾಯಿಸಿದ.

ಮನೆಯೊಳಗೆ ನಿಶ್ಶಬ್ದತೆ ಆವರಿಸಿಕೊಂಡಿದೆ

ಒಳಗೆ ಯಾರೂ ಇದ್ದಂತೆ ತೋರಲಿಲ್ಲ.

ಅತ್ತ ಇತ್ತ ಎರಡು ಕೊಠಡಿಗಳಿವೆ.

ಆ ಎರಡೂ ಕೊಠಡಿಗಳ ಬಾಗಿಲು ಮುಚ್ಚಿವೆ.

ಎಡಗಡೆಯ ಮಲಗುವ ಕೋಣೆಯಲ್ಲಿ ಏನೂ ಇಲ್ಲ.

ಬಲಗಡೆಯ ಕೊಠಡಿಯ ಬಾಗಿಲನ್ನು ತೆರೆದು ಷಾಕ್ ಹೊಡೆಸಿಕೊಂಡವನಂತೆ ನಿಂತ.

ಆತನ ಎದುರಿಗೇ ನೆಲದ ಮೇಲೆ ಕೈಕಾಲು, ಬಾಯನ್ನು ಬಂಧಿಸಲ್ಪಟ್ಟ ವಾಂಗ್ ಬಿದ್ದಿದ್ದಾನೆ.

ಆತನ ನೋಟ ಪಕ್ಕಕ್ಕೆ ಹರಿದಾಡುವಷ್ಟರಲ್ಲಿ....

"ಡೋಂಟ್ ಮೂವ್ ಮೇಜರ್ !"

ಎಂಬ ಕಂಠ ಪ್ರತಿಧ್ವನಿಸಿತು.

ಮುಂದಿನ ಕ್ಷಣದಲ್ಲೇ ಆತನ ಬೆನ್ನಿಗೆ ರಿವಾಲ್ವರಿನ ನಳಿಗೆ ಅತುಕೊಂಡಿರುವುದನ್ನು ಸ್ಪರ್ಶ ಮಾತ್ರದಿಂದಲೇ ಅರಿತನು.

ಅದರುತ್ತಲೇ ಕೈಗಳೆರಡನ್ನೂ ಮೇಲೆತ್ತಿದ.

ಆತನನ್ನ ಒಳಗೆಳೆದು ಬಾಗಿಲನ್ನು ಮುಚ್ಚಿದ ಅಪರಿಚಿತ ವ್ಯಕ್ತಿ.

ತ್ಯಾಂಗ್ ಚೀನ್‌ನ ನೋಟ ಅವನ ಮೇಲೆ ಕೇಂದ್ರೀಕರಿಸಿತು.

ಬಲವಾದ ದೇಹ, ಆರಡಿ ಎತ್ತರವಿದ್ದಾನೆ ಆ ವ್ಯಕ್ತಿ.

ಚೈನೀಸ್ ಪೌರರ ಹೋಲಿಕೆ ಕೊಂಚ ಮಾತ್ರವೂ ಆತನಲ್ಲಿ ಇಲ್ಲ.

ಸಣ್ಣಗೆ ತೋರುತ್ತಿದ್ದರೂ ದೃಢವಾದ ಶರೀರ ಆತನದು.

"ಆ ಕೈ ಡಾ ಪೀನೇಡಾ ?"

ಮುಖವನ್ನು ಮುದುರಿಕೊಂಡು ತ್ಯಾಂಗ್‌ಚೀನ್ ಪ್ರಶ್ನಿಸಿದ.

"ನೋ ! ಐಯಾಮ್ ಮಹೇಶ್....ಏಜೆಂಟ್ ಮಹೇಶ್ !"

ಎಂದು ಉತ್ತರಿಸಿದ ಮಹೇಶ.

ತ್ಯಾಂಗ್ ಚೀನ್ ಆ ಹೆಸರನ್ನು ಕೇಳುತ್ತಲೇ ಇರುವೆ ಕಡಿದ ಹಾಗೆ ಮಿಸುಕಾಡಿದ.

ಆ ಹೆಸರು ಅವನಿಗೆ ಸುಪರಿಚಿತ.

"ಬ್ರಿಗೇಡಿಯರ್ ವಿಶ್ವನಾಥ್...."

ತ್ಯಾಂಗ್ ಚೀನ್ ತನ್ನ ಮಾತನ್ನು ಮುಗಿಸುವಷ್ಟರಲ್ಲೇ ಆ ಮನೆಯ ಮುಂದೆ ಬರ್ರನೆ ಶಬ್ದ ಮಾಡುತ್ತಾ ಕಾರೊಂದು ಬಂದು ನಿಂತಂತೆ ಶಬ್ದವಾಯಿತು.

"ನಿಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ನಿಧಾನವಾಗಿ ಹೇಳುತ್ತೇನೆ, ಮೊದಲು ಇಲ್ಲಿಂದ ಹೊರಗೆ ನಡೆಯಿರಿ"

ಎಚ್ಚರಿಸಿದ ಮಹೇಶ.

"ವಾಂಗ್...."

ಏನನ್ನೋ ಹೇಳಹೋದ ತ್ಯಾಂಗ್ ಚೀನ್.

"ಆತನ ವಿಷಯ ನಿಮಗೆ ಬೇಕಿಲ್ಲ....ನಡೆಯಿರಿ"

ಎನ್ನುತ್ತಾ ಮುಂದಕ್ಕೆ ತಳ್ಳಿದ ಮಹೇಶ.

ಇದರಿಂದ ಅಯೋಮಯವಾಯಿತು ತ್ಯಾಂಗ್‌ಚೀನ್‌ಗೆ.

ಈತ ಇಲ್ಲಿಗೆ ಹೇಗೆ ಬಂದ ?

ಏತಕ್ಕಾಗಿ ಬಂದ ?

ಈತನ ಅನುಚರರೂ ಬಂದಿರುವರೇ ?

ಹೊರಗಿನ ಕಾರಿನ ಶಬ್ದ ತನ್ನ ಕಾರಿನ ಶಬ್ದದಂತಿದೆ.

ಅದನ್ನು ಇವರುಗಳು ಹೇಗೆ ವಶಪಡಿಸಿಕೊಂಡರು ?

ತ್ಯಾಂಗ್‌ಚೀನ್ ಕಾರಿನಲ್ಲಿನ ಹಿಂಬದಿಯ ಸೀಟನ್ನು ಹತ್ತಿದ ನಂತರ ಮಹೇಶ್ ಸಹ ಹತ್ತಿ ಕುಳಿತುಕೊಂಡ.

ತ್ಯಾಂಗ್ ಚೀನ್‌ನ ಕಂಗಳೂ ಸುತ್ತಲೂ ಹರಿದಾಡಿದವು.

ಒಬ್ಬ ನರಪಿಳ್ಳೆಯೂ ಸಹ ಆತನ ಕಂಗಳಿಗೆ ತೋರಿಬರಲಿಲ್ಲ.

ತನಗೆ ಸಹಾಯಕ್ಕಾಗಿ ಬರುವವರ್‍ಯಾರೂ ಕಾಣರು.

ಇವರುಗಳು ಇಲ್ಲಿಗೆ ಹೇಗೆ ತಾನೇ ಬಂದರು ?

ಏತಕ್ಕಾಗಿ ಬಂದರು ?

ಇವರುಗಳು ಬಂದು ಎಷ್ಟು ಕಾಲವಾಯಿತು ?

ತಾಂಗ್ ಚೀನ್‌ನ ಮನಸ್ಸಿನಲ್ಲಿ ಯಾವುದೋ ಒಂದು ಥರದ ಭಯ ಹೊರ ಇಣುಕಿತು.

ಏಜೆಂಟ್ ಮಹೇಶ್, ಬ್ರಿಗೇಡಿಯರ್ ವಿಶ್ವನಾಥ್‌ರ ಬಗ್ಗೆ ಅವರಿಗೆ ಇನ್‌ಫರ್‌ಮೇಷನ್ ಮೊದಲೇ ಸಿಕ್ಕಿದೆ. ಅವರುಗಳಿಬ್ಬರೂ ಫೀಲ್ಡ್‌ಗೆ ಇಳಿದ ರೆಂದರೆ ಯಾವುದೋ ಅನಾಹುತ ಆಗುವುದು ಗ್ಯಾರಂಟಿ.

ಆ ವಿಷಯ ಯಾವುದು ?

ಯಾವ ರೀತಿ ಅನಾಹುತ ಆಗುತ್ತೆ ?

ತ್ಯಾಂಗ್ ಚೀನ್‌ನ ತಲೆಗೆ ಎಷ್ಟು ಆಲೋಚಿಸಿದರೂ ಏನೊಂದೂ ಹೊಳೆಯಲಿಲ್ಲ

ಕಣ್ಣಂಚಿನಿಂದ ಪಕ್ಕದಲ್ಲಿ ದೃಷ್ಟಿ ಹಾಯಿಸಿದ.

ಕಾರು ಆ ಗ್ರಾಮವನ್ನು ಬಿಟ್ಟು ಹಿಮಾಲಯನ್ ರೇಂಜಿನ ಕಡೆಗೆ ಹೋಗುತ್ತಿದೆ

ಸ್ವಲ್ಪ ದೂರದಲ್ಲಿ ತೋರಿ ಬರುತ್ತಿರುವ ಚೆಕಿಂಗ್ ಸ್ಕ್ವಾಡನ್ನು ನೋಡು ತ್ತಲೇ ತ್ಯಾಂಗ್ ಚೀನ್‌ನಲ್ಲಿ ಉತ್ಸಾಹದ ಪೂರೆ ಒಡೆಯಿತು.

"ಮಹೇಶ್, ನೀವು ತಪ್ಪಿಸಿಕೊಳ್ಳಲು ಇನ್ನು ಸಾಧ್ಯವಾಗದು ? ಆದುದ ರಿಂದ ಮರ್ಯಾದೆಯಿಂದ ನಮಗೆ ಶರಣಾಗಿ"

ಬಿಂಕದಿಂದ ಹೇಳಿದ.

ಅದಕ್ಕೆ ಉತ್ತರವೆಂಬಂತೆ ಅತನ ಸೊಂಟದ ಹತ್ತಿರ ರಿವಾಲ್ವರಿನ ನಳಿಗೆ ಬಲವಾಗಿ ಒತ್ತಿತ್ತು. ಅದರೊಂದಿಗೇನೇ ಮಹೇಶನ ಸ್ವರ ಪ್ರಶಾಂತವಾಗಿ ಕೇಳಿಬಂತು

"ಮೇಜರ್, ನಮ್ಮ ವಿಷಯ ನಿಮಗೆ ಗೊತ್ತು ನಾನು ಹೇಳಿದ ಹಾಗೆ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಿ. ಇಲ್ಲದಿದ್ದರೆ ಏನಾಗುತ್ತದೆಂದು ನಿಮಗೆ ಚೆನ್ನಾಗಿ ಅರಿವಿರುವುದೆಂದು ತಿಳಿದಿದ್ದೇನೆ. ನಿಮ್ಮ ಸೈನಿಕರನ್ನು

ಎಚ್ಚರಿಸಬೇಕೆಂದು ನೋಡಿದಿರೋ ಮರುಕ್ಷಣವೇ ಈ ರಿವಾಲ್ವರ್‌ನೊಳಗಿರುವ ಗುಂಡು ನಿಮ್ಮ ಶರೀರದೊಳಗೆ ಪ್ರವೇಶಿಸುತ್ತೆ !"

ಸೊಂಟದ ಹತ್ತಿರ ಕದಲುತ್ತಿರುವ ರಿವಾಲ್ವರನ್ನು ಅರಿತರೇನೇ ಆತನ ಮಾತಿನಲ್ಲಿರುವ ನಿಜಾಂಶ ತ್ಯಾಂಗ್‌ಚೀನ್‌ಗೆ ಗೋಚರಿಸುತ್ತೆ.

"ಹಿಂದಕ್ಕೆ ಬಾಗಿ ಕುಳಿತುಕೊಳ್ಳಿ"

ಎಂದನು ಕಾರನ್ನು ನಡೆಸುತ್ತಿದ್ದ ವ್ಯಕ್ತಿ.

ಬುದ್ಧಿವಂತನಂತೆ ಅವರುಗಳು ಹೇಳಿದಂತೆ ಕೇಳಿದ ತ್ಯಾಂಗ್ ಚೀನ್.

ಚೆಕ್ ಪೋಸ್ಟ್ ಹತ್ತಿರ ಕಾರು ಸ್ಲೋ ಆಯಿತು.

ಕಾರನ್ನು ನಿಲ್ಲಿಸುವ ಗೋಜಿಲ್ಲ ಎಂದು ಇಬ್ಬರಿಗೂ ಗೊತ್ತು.

ಅವರಂದುಕೊಂಡಂತೆಯೇ ಕಾರನ್ನು ಗುರುತಿಸುತ್ತಲೇ ಆಟೋಮೆಟಿಕ್ ಆಗಿ ಆ ಕಬ್ಬಿಣದ ರಾಡನ್ನು ಮೇಲಕ್ಕೆತ್ತಿದರು ಗಾರ್ಡ್ಸ್.

ಆ ಕಾರು ಗಾರ್ಡ್ಸ್‌ನ್ನು ದಾಟುತ್ತಿರುವಂತೆಯೇ ಚಕ್ಕನೆ ಬಾಗಿಲ ಚಿಲಕದ ಮೇಲೆ ಕೈ ಹಾಕ ಹೋದ ತ್ಯಾಂಗ್‌ಚೀನ್.

ಮರುಕ್ಷಣವೇ ಮಹೇಶನ ಕೈಯಿ ಬಲವಾಗಿ ಆತನ ಕುತ್ತಿಗೆಯನ್ನು ತಾಕಿತು.

ಕುತ್ತಿಗೆ ಮುರಿದಂತೆ ಭಾಸವಾಯಿತು ತ್ಯಾಂಗ್‌ಚೀನ್‌ಗೆ
ಅಚೇತನತ್ವದೊಳಗೆ ಸರ್ರನೆ ಜಾರಿಹೋದ ತ್ಯಾಂಗ್‌ಚೀನ್
ನೆಮ್ಮದಿಯ ನಿಟ್ಟುಸಿರನ್ನಿಟ್ಟರು ಆ ಇಬ್ಬರೂ.

# 4

ಎಲ್ಲಿಂದಲೋ ಮಾತುಗಳು ಕೇಳಿ ಬರುತ್ತಿವೆ.

ತಣ್ಣನೆಯ ಗಾಳಿ ಶರೀರಕ್ಕೆ ಸೋಕುತ್ತಿದೆ.

ತನ್ನ ಕಣ್ಣುಗಳೆರಡನ್ನು ಮುಚ್ಚಿಕೊಂಡೇ ಆ ಮಾತುಗಳನ್ನು ಕೇಳಿಸಿಕೊಳ್ಳಲು ಪ್ರಯತ್ನಿಸಿದ ಮೇಜರ್ ತ್ಯಾಂಗ್ ಚೀನ್

ಆದರೆ ಆತನ ಪ್ರಯತ್ನ ಸಫಲವಾಗಲಿಲ್ಲ. ಅವರು ಮಾತನಾಡಿಕೊಳ್ಳುತ್ತಿದ್ದ ಭಾಷೆ ಆತನಿಗೆ ಅರ್ಥವಾಗಲಿಲ್ಲ.

ಕೆಲವೊಂದು ಪದಗಳ ಮುಖಾಂತರ ಅದು ಹಿಂದಿ ಭಾಷೆ ಎಂದು ಅರಿತುಕೊಂಡ.

"ಮೇಜರ್‌ಗೆ ಪ್ರಜ್ಞೆ ಬಂದ ಹಾಗಿದೆ, ಗೆಟಪ್ ಮ್ಯಾನ್"

ಮಹೇಶ ಹೇಳಿದ.

ಇನ್ನು ಏನೂ ಪ್ರಯೋಜನವಿಲ್ಲವೆಂದುಕೊಂಡು ನಿಧಾನವಾಗಿ ಕಣ್ಣು ತೆರೆದ ತ್ಯಾಂಗ್ ಚೀನ್ ಸುತ್ತಲೂ ಒಮ್ಮೆ ಅವಲೋಕಿಸಿದ. ಆತನೆಂದುಕೊಂಡಂತೆ ಅದು ಮಂಜಿನಿಂದ ಕೂಡಿದ ಬೆಟ್ಟದ ಗುಹೆಯಲ್ಲ, ವಾಸಕ್ಕೆ ಯೋಗ್ಯವಾದ ಚಿಕ್ಕ ಕೊಠಡಿ.

ಮೇಜರ್ ! ನಿಮ್ಮಿಂದ ನಮಗೊಂದು ಉಪಕಾರವಾಗಬೇಕಿದೆ !"

ಎಂದು ಹೇಳಿದ ಬ್ರಿಗೇಡಿಯರ್ ವಿಶ್ವನಾಥ್‌ನ ಮಾತುಗಳನ್ನು ಆಲಿಸಿ ಆತನೆಡೆಗೆ ತನ್ನ ದೃಷ್ಟಿಯನ್ನು ಹರಿಸಿದ ತ್ಯಾಂಗ್‌ಚೀನ್.

"ನನ್ನ ಹೆಸರು ವಿಶ್ವನಾಥ್ !"

ಎಂದು ತನ್ನನ್ನು ಪರಿಚಯಿಸಿಕೊಂಡ.

ಅದಕ್ಕೆ ಪ್ರತ್ಯುತ್ತರವಾಗಿ ತನ್ನ ತಲೆಯಲ್ಲಾಡಿಸಿದ ತ್ಯಾಂಗ್ ಚೀನ್

ಆತನಲ್ಲದೆ ಮತ್ತೊಬ್ಬನು ಇದ್ದಾನೆ ಅವನೇ ಮಹೇಶ್ !

"ನೀವಿಬ್ಬರೇ ಇದ್ದೀರಲ್ಲ. ಮಿಕ್ಕ ಮೂವರು ಏನಾದರು ? ಆ ಕೈಥಾ ಎಲ್ಲಿ ?"

ಅವಸರವಸರವಾಗಿ ಪ್ರಶ್ನಿಸಿದ ತ್ಯಾಂಗ್ ಚೀನ್.

"ಅಂದ ಹಾಗೆ ನಮ್ಮ ಬಗ್ಗೆ ನಿಮಗೆ ಚೆನ್ನಾಗಿ ಗೊತ್ತೆಂದು ತೋರುತ್ತೆ"

"ನಿಮ್ಮಗಳ ನಿಜ ಸ್ವರೂಪ ನೋಡದೇ ಹೋದರೂ ನಿಮ್ಮ ಐವರ ಚರಿತ್ರೆ ನನಗೆ ಚೆನ್ನಾಗಿ ಗೊತ್ತು. ಯಾವ ಕೆಲಸದ ಮೇಲೆ ಹೊರಟು ಬಂದಿರೆಂದು ತಿಳಿದುಕೊಳ್ಳಬಹುದಾ ?"

ತ್ಯಾಂಗ್ ಚೀನ್ ಪ್ರಶ್ನಿಸಿದ.

"ಬಹುಶಃ ಸ್ಪೈಸ್ ಬಗ್ಗೆ ನಿಮಗೆ ತಿಳಿದಿದೆಯೆಂದುಕೊಳ್ಳುತ್ತೇನೆ ನಾವು ಈಗ ಸ್ಪೈಸ್ !"

ಎಂದು ಹೇಳಿದ ವಿಶ್ವನಾಥ್.

ಅವರುಗಳ ಮಾತಿನಲ್ಲಿರುವ ಅರ್ಥವನ್ನು ಗ್ರಹಿಸಲಾರದವನಲ್ಲ ಈ ತ್ಯಾಂಗ್ ಚೀನ್

"ನನ್ನಿಂದ ಆಗುವ ಉಪಕಾರವೇ ? ಅದೇನದು ?"

ಮುಖವನ್ನು ಸಿಂಡರಿಸಿಕೊಂಡೇ ಕೇಳಿದ ತ್ಯಾಂಗ್ ಚೀನ್.

"ನಿಮ್ಮ ಹತ್ತಿರ ವ್ಯಕ್ತಿಗತವಾಗಿ ನಮಗೆ ಯಾವ ರೀತಿಯ ಸೇಡು, ಹಗೆಯಂತವು ಯಾವುದೂ ಇಲ್ಲ. ಆದರೆ ಕೆಲವು ಸಮಯದಲ್ಲಿ ನಾವು ನಮ್ಮ ಪರಿಧಿಯನ್ನು ಅತಿಕ್ರಮಿಸಬೇಕಾಗಿ ಬರುತ್ತೆ"

"ಯು ಮೀನ್....ನನ್ನನ್ನು ಕೊಲ್ಲುತ್ತೀರಾ ?"

"ಅದಕ್ಕೆ ಅವಕಾಶ ನೀವು ಮಾಡಿಕೊಡುವುದಿಲ್ಲವೆಂದು ನಮ್ಮ ನಂಬಿಕೆ. ಸದ್ಯಕ್ಕೆ ನಿಮ್ಮ ಐಡೆಂಟಿಟಿ ಕಾರ್ಡ್ ನಮಗೆ ಬೇಕು"

ವಿಶ್ವನಾಥ್ ಹೇಳಿದ.

ಇದನ್ನು ಕೇಳಿದ ತಕ್ಷಣ ತ್ಯಾಂಗ್ ಚೀನ್ ಅದುರಿ ಬಿದ್ದ.

"ನನ್ನ ಐಡೆಂಟಿಟಿ ಕಾರ್ಡ್....! ಏಕೆ ?"

"ಅದಕ್ಕೆ ಸರಿಯಾದ ಉತ್ತರ ನಾವು ಕೊಡಲಾರೆವೆಂದು ನಿಮಗೆ ಗೊತ್ತು. ಅಷ್ಟೆ ಅಲ್ಲ, ಸ್ವಲ್ಪ ದಿನಗಳವರೆವಿಗೆ ನೀವು ಇಲ್ಲಿ ಬಂಧಿತರಾಗ ಬೇಕಾಗುತ್ತೆ"

ತ್ಯಾಂಗ್ ಚೀನ್‌ಗೆ ಕೊಂಚ ಅರ್ಥವಾಯಿತು.

"ಏನು ಮಾಡತೊಡಗುತ್ತೀರಿ ?"

"ಅದೆಲ್ಲ ನಿಧಾನವಾಗಿ ನಿಮಗೇ ಗೊತ್ತಾಗುತ್ತೆ ಮೇಜರ್"

ಎನ್ನುತ್ತಾ ವಿಶ್ವನಾಥ್ ಮಹೇಶನೆಡೆಗೆ ನೋಡಿದ.

ಮಹೇಶ ಎದ್ದು ತ್ಯಾಂಗ್ ಚೀನನ್ನು ಸಮೀಪಿಸಿದ.

"ನಿಮ್ಮ ಹತ್ತಿರ ಆ ಕಾರ್ಡ್ ಇಲ್ಲವೆಂದು ನಮಗೆ ಗೊತು ಆದರೆ ಅದು ಎಲ್ಲಿದೆಯೆಂದು ನಮಗೆ ತಿಳಿಸಿದರೆ ನಿಮ್ಮ ಆರೋಗ್ಯಕ್ಕೆ ಬಹಳ ಒಳ್ಳೆಯದು"

"ಯೂ ಬ್ರೂಟ್ ! ನನ್ನಿಂದ ನೀವು ಆ ವಿವರವನ್ನು ತಿಳಿದುಕೊಳ್ಳಲಾರಿರಿ"

ಮುಷ್ಠಿಯನ್ನು ಬಿಗಿದು ತ್ಯಾಂಗ್ ಚೀನ್‌ನ ಮುಖಕ್ಕೆ ಗುದ್ದಿದ ಮಹೇಶ.

"ಪ್ಚ್ ! ನೀವು ನನ್ನ ಕೊಲೀಗ್ ಅಂತ ಸ್ಯಾಂಪಲ್ ಕೊಟ್ಟೆ. ನೀವು ಸಮಯಾನುಕೂಲವಾಗಿ ಪ್ರವರ್ತಿಸದೆ ಹೋದರೆ ನಿಮ್ಮನ್ನು ಹಿಂಸಿಸಲು ನನಗಿಷ್ಟವಿರುವುದಿಲ್ಲ"

ಖಡಾಖಂಡಿತವಾಗಿ ನುಡಿದನು ಮಹೇಶ.

ಕೆಳಗೆ ಬಿದ್ದಂತಹ ತ್ಯಾಂಗ್ ಚೀನ್‌ನ ತುಟಿಗಳಿಂದ ಕೆಂಪು ರಕ್ತ ಜಿನುಗಿತು. ಬಾಯಿ ಪೂರಾ ರಕ್ತವಾಯಿತು.

"ನನ್ನ ಲಿಮಿಟ್ ನಿಮಗೆ ಚೆನ್ನಾಗಿ ಗೊತ್ತಿರಬೇಕೆಂದುಕೊಳ್ತೀನೆ ಮೇಜರ್"

ಮಹೇಶ ವಿಶ್ವನಾಥನೆಡೆಗೆ ನೋಡಿದ.

ತುಟಿಗಳೆರಡನ್ನೂ ಬಿಗಿ ಹಿಡಿದು ಆಲೋಚನೆಯೊಳಗೆ ಮುಳುಗಿದ ನಾಥ.

"ಓ.ಕೆ. ಲೀವ್ ಹಿಮ್ ! ಮೇಜರ್ ತ್ಯಾಂಗ್ ಚೀನ್, ನೀವು ತಕ್ಷಣವೆ

ತಪ್ಪಿಸಿಕೊಳ್ಳಲು ಅಸಾಧ್ಯದ ಮಾತು. ಒಂದು ವೇಳೆ ಹಾಗೇನಾದರೂ ಹೊರಗೆ ಬಿದ್ದಿತೆಂದರೆ ಈ ರೇಂಜ್‌ನಲ್ಲಿ ಎಲ್ಲಿರುವೆನೆಂದು ತಿಳಿದುಕೊಳ್ಳಲು ಬಹಳ ಕಷ್ಟಕರವಾಗುತ್ತೆ. ಡೋಂಟ್ ಡೇರ್ ! ಮಹೇಶ್ ಕಮಾನ್"

ಎಂದು ಮಹೇಶನ ಹತ್ತಿರಕ್ಕೆ ನಡೆದು ಬಂದು ಆತನ ಕಿವಿಯಲ್ಲಿ ಏನನ್ನೋ ಹೇಳಿದ.

ಮಹೇಶ ತ್ಯಾಂಗ್ ಚೇನ್‌ನ ಬಟ್ಟೆಗಳನ್ನು ಕಳಚಿ, ಅವುಗಳನ್ನು ತಾನು ಧರಿಸಿದ. ಆತನ ಆಳತೆಗೆ ತಕ್ಕಂತೆ ಇತ್ತು ಆ ಯೂನಿಫಾರಂ. ಅಪ್ಪಿತಪ್ಪಿ ಯಾರಾದರೂ ನೋಡಿದರೆಂದರೆ ಮಹೇಶನನ್ನೇ ತ್ಯಾಂಗ್‌ಚೇನ್ ಎಂದು ಭ್ರಮೆಪಡುವಷ್ಟು ರೀತಿಯಲ್ಲಿತ್ತು ಆತನ ವೇಷ.

ಎರಡು ನಿಮಿಷಗಳ ತರುವಾಯ ಅವರಿಬ್ಬರೂ ಹೊರಗಡೆಯಿಂದ ಚಿಲಕ ಹಾಕಿದಂತೆ ಶಬ್ದ ಕೇಳಿಬಂತು.

• • • •

ಮೇಜರ್ ತ್ಯಾಂಗ್‌ಚೇನ್‌ನ ವೇಷದಲ್ಲಿದ್ದ ಮಹೇಶ ತ್ಯಾಂಗ್ ಚೇನ್‌ನ ಕಾರಿನಲ್ಲಿ ಕುಳಿತು ಹ್ಯಾಟನ್ನ ಮುಖಕ್ಕೆ ಅಡ್ಡಲಾಗಿರಿಸಿಕೊಂಡನು.

ಬ್ರಿಗೇಡಿಯರ್ ವಿಶ್ವನಾಥ್ ಡ್ರೈವಿಂಗ್ ಸೀಟಿನಲ್ಲಿ ಕುಳಿತುಕೊಂಡು ಕಾರನ್ನು ಸ್ಟಾರ್ಟ್ ಮಾಡಿದ.

ತ್ಯಾಂಗ್ ಚೇನ್ ಊಹಿಸಿದ ಹಾಗೆಯೇ ಅವರಿರುವುದು ಹಿಮಾಲಯನ್ ರೇಂಜಸ್‌ನಲ್ಲೇ.

ಅವರಿಬ್ಬರೂ ತಮ್ಮನ್ನು ಬಂಧಿಸಲ್ಪಟ್ಟ ಆ ಪ್ರದೇಶದ ಬಗ್ಗೆ ತಿಳಿದುಕೊಳ್ಳಲು ಅಸಾಧ್ಯ.

ಎತ್ತ ನೋಡಿದರೂ ಬೆಳ್ಳನೆಯ ಮಂಜು, ಕೊರೆಯುವ ಛಳಿ ಬೇರೆ. ಎಲ್ಲವೂ ಒಂದೇ ವಿಧವಾಗಿ ತೋರುವ ಬೆಟ್ಟಗಳ ಮಧ್ಯೆ ಉಳಿದಿದ್ದಾರವರು.

ಮಂಜು ಕೊಂಚ ಕೊಂಚವಾಗಿ ದ್ರವಿಸಲು ಪ್ರಾರಂಭವಾಯಿತು.

ಕಾರು ಆ ಮಂಜಿನಲ್ಲಿ ಸಿಲುಕದಂತೆ ಬಹಳ ಜಾಗ್ರತೆ ವಹಿಸುತ್ತಾ ತನ್ನ ದೃಷ್ಟಿಯೆಲ್ಲವನ್ನೂ ಡ್ರೈವಿಂಗ್‌ನಲ್ಲೇ ಕಾನ್‌ಸನ್‌ಟ್ರೇಷನ್ ಮಾಡಿಕೊಂಡಿದ್ದಾನೆ ವಿಶ್ವನಾಥ್

ಮಹೇಶ ಆತನನ್ನು ಮಾತನಾಡಿಸದೆ ಮೌನದಿಂದ ಉಳಿದಿದ್ದಾನೆ

ಕಾರು ನಿಧಾನವಾಗಿ ಸಾಗತೊಡಗಿದೆ

ಸುಮಾರು ಅರ್ಧಗಂಟೆಯ ಪ್ರಯಾಣದ ನಂತರ ಒಂದು ಚಿಕ್ಕ ಎತ್ತರವಾದ ಗುಡ್ಡದ ಪಕ್ಕಕ್ಕೆ ಬಂದು ನಿಂತಿತು ಆ ಕಾರು

ವಿಶ್ವನಾಥ್‌ನ ಸನ್ನೆಯನ್ನು ಅರಿತು ಮಹೇಶ ಕೆಳಗಿಳಿದು ರೋಡಿನೆಡೆಗೆ ತನ್ನ ಸೂಕ್ಷ್ಮ ದೃಷ್ಟಿಯನ್ನು ಹರಿಸಿದ.

ಗ್ರಾಮದಿಂದ ಬರುವ ರೋಡ್ ಅದ.

ಬರೀ ಗ್ರಾಮದ ಕಡೆಯೂ ಅಲ್ಲದೆ ಹಿಮಾಲಯದ ಕಡೆಗೂ ಹೋಗುವ ರೋಡನ್ನು ಶುಭ್ರ ಪಡಿಸುತ್ತಾ ಸಾಗುತ್ತಿದ್ದಾರೆ ಕೆಲವು ಕಾರ್ಪೋರೇಷನ್ ಜನರು.

ಈ ಕಾರು ಗುಡ್ಡವನ್ನು ದಾಟಿ ರೋಡಿನ ಮೇಲೆ ಬಂದರೆ ಇವರ ದೃಷ್ಟಿಯನ್ನು ಸೆಳೆಯುವ ಅವಕಾಶವಿರುತ್ತೆ.

ಹಿಂದಕ್ಕೆ ನಡೆದು ಬಂದು ಪರಿಸ್ಥಿತಿಯನ್ನು ವಿವರಿಸಿದ ಮಹೇಶ.

"ಓ ಕೆ. ಸ್ವಲ್ಪ ಹೊತ್ತು ವೈಟ್ ಮಾಡೋಣ"

ಎಂದನು ವಿಶ್ವನಾಥ್.

ಮಹೇಶ ಮರು ಮಾತನಾಡದೆ ಕಾರಿನಲ್ಲಿ ಹತ್ತಿ ಕುಳಿತ.

ಇಬ್ಬರೂ ಗ್ಲಾಸ್ ವಿಂಡೋ ಮೇಲೆ ಬೀಳುತ್ತಿರುವ ಮಂಜಿನ ಕಡೆ ವೀಕ್ಷಿಸುತ್ತಿದ್ದಾರೆ.

"ನಮ್ಮ ಬಗ್ಗೆ ಅವರುಗಳಿಗೆ ತಿಳಿದುಹೋಗಿದೆ. ನಾವು ಬಂದದ್ದು ಇಬ್ಬರೇ ಆದರೂ ಐವರೆಂದು ಏಕೆ ಹೇಳಿದರು ?"

ತನ್ನ ಪ್ರಶ್ನೆಯನ್ನು ಹೊರಗಿಟ್ಟ ಮಹೇಶ.

"ಅವರನ್ನು ಆ ಭ್ರಮೆಯಲ್ಲೇ ಇರಿಸುವುದು ಒಳ್ಳೆಯದು. ಆದರೂ ಈ ತ್ಯಾಂಗ್ ಚೀನ್ ಅಕಳಿಸಿದರೆ ಹಲ್ಲುಗಳನ್ನು ಎಣಿಸುವ ಜಾತಿಗೆ ಸೇರಿದವ. ಆದುದರಿಂದಲೇ ನಮ್ಮನ್ನು ನೋಡುತ್ತಲೇ ಗುರುತಿಸಿದ ಬಹಳ ದಿನಗಳ ಕಾಲ ಆತನನ್ನು ಬಂಧಿಸಿ ಇರಿಸುವುದು ಅಸಾಧ್ಯ. ಆದಷ್ಟು ಬೇಗ ನಮ್ಮ ಕೆಲಸಗಳನ್ನು ಮುಗಿಸಿಕೊಳ್ಳಬೇಕು"

"ಅಂದರೆ....ಆತ ತಪ್ಪಿಸಿಕೊಳ್ಳುತ್ತಾನೆಂದು ನಿಮ್ಮ ಭಯವೆ ?"

"ಭಯವಲ್ಲ ಇಟ್ಸ್ ಫ್ಯಾಕ್ಟ್. ಮೇಜರ್ ತ್ಯಾಂಗ್ ಚೇನ್‌ನ ಬಗ್ಗೆ ನಮಗೆ ಪೂರ್ತಿಯಾಗಿ ಗೊತ್ತಿಲ್ಲ ಇಲ್ಲಿವರೆವಿಗೂ ಆತನ ಹಾವ ಭಾವಗಳನ್ನು ನೋಡಿದರೆ ಆತ ಬಹಳ ಕನ್ನಿಂಗ್ ಫೆಲೋ ಎಂದು ತಿಳಿಯುತ್ತೆ"

ಎಂದು ತನ್ನ ಎಡಗೈಯ ರಿಸ್ಟ್ ಹತ್ತಿರ ಷರ್ಟನ್ನು ಮಡಚಿ ವಾಚಿನಲ್ಲಿ ಟೈಮನ್ನು ನೋಡಿಕೊಂಡನು ವಿಶ್ವನಾಥ್.

ಮಹೇಶ ಕೆಳಗಿಳಿದು ರೋಡಿನ ಮೇಲೆ ಕೆಲಸ ಮಾಡುತ್ತಿರುವ ಮನುಷ್ಯರ ಕಡೆಗೆ ನೋಡಿದ.

ಬೆಟ್ಟದೆಡೆಗೆ ಸಾಗಿ ಹೋಗುತ್ತಿದ್ದಾರೆ ಅವರುಗಳು.

ತನ್ನ ಕೈಯ್ಯೆತ್ತಿ ಓ ಕೆ ಎಂಬಂತೆ ಸನ್ನೆ ಮಾಡಿದ ಮಹೇಶ.

ಅದನ್ನು ಅರಿತ ತಕ್ಷಣವೇ ಕಾರನ್ನು ಸ್ಟಾರ್ಟ್ ಮಾಡಿದನು ವಿಶ್ವನಾಥ್.

# 5

ಜಿಗ್‌ಜಾಗ್‌ನ ರೀತಿಯಲ್ಲಿ ಹೋಗುತ್ತಿರುವ ತನ್ನ ಆಲೋಚನೆಗಳಿಂದ ತಪ್ಪಿಸಿಕೊಳ್ಳಲು ಎದ್ದು ಶತಪಥ ತಿರುಗಲು ಪ್ರಾರಂಭಿಸಿದ ತ್ಯಾಂಗ್ ಚೀನ್.

ಬ್ರಿಗೇಡಿಯರ್ ವಿಶ್ವನಾಥ್, ಏಜೆಂಟ್ ಮಹೇಶ್ ಚೈನಾದೊಳಗೆ ಅಡಿಯಿಟ್ಟರೆಂದು ತಿಳಿದೊಡನೆಯೇ ಆತನ ಅಂತರಂಗವೆಲ್ಲಾ ಅಲ್ಲೋಲ ಕಲ್ಲೋಲವಾಯಿತು.

ಅವರೇಕೆ ಬಂದರೆಂದು, ಹೇಗೆ ಬಂದರೆಂದು ತಲೆಯಲ್ಲಿ ಜಾಲಾಡಿದರೂ ಒಂದು ಚೂರೂ ಅರ್ಥವಾಗುತ್ತಿಲ್ಲ.

ಆದರೆ ಏನಾದರೊಂದು ಅನಾಹುತ ತಂದೇ ತರುತ್ತಾರೆಂದು ಆತನಿಗೆ ಚೆನ್ನಾಗಿ ಗೊತ್ತು.

ತನ್ನ ಐಡೆಂಟಿಟಿ ಕಾರ್ಡಿನ ಸಹಾಯದಿಂದ ಅವರುಗಳು ಏನು ಮಾಡತೊಡಗುತ್ತಾರೆಂದು ಸ್ಪಷ್ಟವಾಗುತ್ತಿಲ್ಲ.

ಎಷ್ಟು ಬೇಗನೆ ಇಲ್ಲಿಂದ ತಪ್ಪಿಸಿಕೊಂಡು ದೊಡ್ಡ ಅಧಿಕಾರಿಗಳಿಗೆ ಈ ವಿಷಯ ತಿಳಿಸುತ್ತೇನೋ ಎಂಬ ಆತುರತೆಯಲ್ಲಿ ಉಳಿದುಬಿಟ್ಟಿದ್ದಾನೆ ತ್ಯಾಂಗ್ ಚೀನ್.

ತನ್ನ ಆಲೋಚನೆಗಳನ್ನು ಕೊಂಚ ನಿಲ್ಲಿಸಿ ಆ ಕೊಠಡಿಯನ್ನೊಮ್ಮೆ ಪರಿಶೀಲಿಸಿದ. ಆ ಕೊಠಡಿಯ ಒಂದು ಬದಿಯಲ್ಲಿ ಚಿಕ್ಕ ಮಂಚವಿದೆ. ಒಂದ ಹೂಜಿಯಲ್ಲಿ ಕುಡಿಯುವ ನೀರು. ಆ ಮಂಚದ ಪಕ್ಕದಲ್ಲೇ ಗೋಡೆಗೆ ರಾಕ್ ಹಾಕಿದೆ. ಆ ರಾಕ್‌ನ ಪಕ್ಕದಲ್ಲೇ ಚಿಕ್ಕ ಬಾಗಿಲು. ಆ ಬಾಗಿಲಿಗೆ ಚಿಲಕವಿಲ್ಲ

ತ್ಯಾಂಗ್ ಚೀನ್ ಬಾಗಿಲು ತೆರೆದು ನೋಡಿದ

ಲಾವೆಟರಿ !

ಅದನ್ನು ಟಕ್ಕನೆ ಮುಚ್ಚಿಬಿಟ್ಟ ತ್ಯಾಂಗ್ ಚೀನ್.

ಅಲ್ಲಿರುವ ರಾಕನ್ನು ತೆರೆದು ನೋಡಿದ.

ಟಿನ್ಡ್ ಫುಡ್ಸ್ !

ಸಾಲಾಗಿ ಶೇಖರಿಸಲ್ಪಟ್ಟಿದೆ.

ಅದರಲ್ಲಿನ ಒಂದನ್ನು ತೆಗೆದು ಅದರ ವಾಸನೆಯನ್ನು ನೋಡಿದನಾತ.

ಅದು ಫ್ರೆಷಾಗಿರುವಂತೆ ತೋರುತ್ತದೆ.

"ಮೈ ಗಾಡ್, ಸ್ಟಾಕ್ ಬಹಳವಿದೆ...."

ಎಂದುಕೊಳ್ಳುತ್ತಾ ಅವುಗಳ ಮೇಲಿರುವ ಗುರುತುಗಳನ್ನು ನೋಡಿದ.

"ಚೈನಾ ಮೇಡ್"

ಎಂದಿದೆ.

ಹಲ್ಲನ್ನು ಕಟಕಟನೆ ಕಡಿದ ತ್ಯಾಂಗ್ ಚೀನ್.

ಈ ಕೈಥಾ ಅನ್ನುವವನು ನಮ್ಮ ಪಾಲಿಗೆ ರಾಕ್ಷಸನಂತಿದ್ದಾನೆ. ನಮ್ಮ ಮಿಲಿಟರಿ ಸಪ್ಲೈಸ್‌ನಿಂದ ಇವರಿಗೆ ಬೇಕಾದುದೆಲ್ಲವನ್ನೂ ಸಪ್ಲೈ ಮಾಡಿದ್ದಾನೆ.

ಆ ರೇಕಿನ ಡಬ್ಬವನ್ನು ಹಿಡಿದುಕೊಂಡು ಏನನ್ನೋ ಆಲೋಚಿಸುತ್ತಾ ಹಾಗೆಯೇ ನಿಂತುಕೊಂಡು ಬಿಟ್ಟ ತ್ಯಾಂಗ್ ಚೀನ್.

• • • •

"ಮಹೇಶ್, ನಮ್ಮ ಗುರಿಯನ್ನು ಸಮೀಪಿಸಿದ್ದೇವೆ. ಬಿ ಅಲರ್ಟ್ !"

ಬ್ರಿಗೇಡಿಯರ್ ವಿಶ್ವನಾಥ್ ಎಚ್ಚರಿಸಿದ.

ಸದ್ಯಕ್ಕೆ ಆತನ ಕೈಯಲ್ಲಿರುವ ಸ್ಟೀರಿಂಗ್ ವ್ಹೀಲ್ ಹೇಳಿದ ಹಾಗೆಲ್ಲಾ ತಿರುಗುತ್ತಿದೆ.

ಬಾರ್ಡರ್‌ನ ಹತ್ತಿರ ಸೆಕ್ಯೂರಿಟಿ ಸಿಬ್ಬಂದಿಯವರು ಕಾರನ್ನು ನೋಡಿದರು. ಆದರೂ ಅವರುಗಳು ತಮ್ಮ ಅಭ್ಯಂತರವೇನನ್ನೂ ಸೂಚಿಸಲಿಲ್ಲ.

ಸ್ಟಿಫಾಗಿ ನಿಂತು ತಮ್ಮ ಗೌರವವನ್ನು ಸೆಲ್ಯೂಟ್ ಮುಖಾಂತರ ಸಲ್ಲಿಸಿದರು.

ಅವರು ಕೊಟ್ಟಂತಹ ಸೆಲ್ಯೂಟನ್ನು ಬಹಳ ಈಸಿಯಿಂದ ರಿಸೀವ್ ಮಾಡಿದ ಪಕ್ಕದ ಸೀಟಿನಲ್ಲಿ ಕುಳಿತುಕೊಂಡು ಸುತ್ತಲೂ ವೀಕ್ಷಿಸುತ್ತಿದ್ದ ಮಹೇಶ.

ಕಾರು ಹಾದಿಯ ಮಧ್ಯೆ ಎಲ್ಲೂ ನಿಲ್ಲಲಿಲ್ಲ.

ಮೇಜರ್ ತ್ಯಾಂಗ್‌ಚೀನ್ ಭವನದ ಮುಂದೆ ಕಾರು ನಿಂತಿತು.

ಹೊರಗೆ ಕಾವಲು ಕಾಯುತ್ತಿದ್ದಂತಹ ಸೆಂಟ್ರಿಗಳು ತತ್ತರಿಸುತ್ತ ಸೆಲ್ಯೂಟ್ ಮಾಡಿದರು.

ಅವರುಗಳನ್ನು ಗಮನಿಸಿದರೂ ಗಮನಿಸದಂತೆ ಚಕಚಕನೆ ಹೆಜ್ಜೆಗಳನ್ನು ಹಾಕುತ್ತಾ ಸ್ಪೇರ್‌ಕೇಸಿನೆಡೆಗೆ ನಡೆದ ಮಹೇಶ.

ಕಾರಿನಲ್ಲಿರುವ ಬ್ರೀಫ್ ಕೇಸನ್ನು, ಒಂದು ಫೈಲ್ ಕಟ್ಟನ್ನು ಮುಚ್ಚಿಕೊಂಡು ಆತನ ಹಿಂದೆಯೇ ನಡೆದ ವಿಶ್ವನಾಥ.

ಮಹೇಶನನ್ನು ಆಶ್ಚರ್ಯದಿಂದ ನೋಡುತ್ತಿರುವ ಸೆಂಟ್ರಿಗಳನ್ನು ಗಮನಿಸದೇ ಇರಲಿಲ್ಲ ವಿಶ್ವನಾಥ್.

ಎಷ್ಟೇ ಮೇಕಪ್ ಮಾಡಿಕೊಂಡು ಬಂದಿದ್ದರೂ ಕೆಲವರಂತೂ ಆತನನ್ನು ಗುರುತಿಸಿರುತ್ತಾರೆ.

ತ್ಯಾಂಗ್ ಚೀನ್‌ನನ್ನು ಸ್ಟಡಿ ಮಾಡಿದ ಮಹೇಶ – ಆತನ ನಡವಳಿಕೆಯನ್ನು ಬಹಳವಾಗಿ ಮನನ ಮಾಡಿಕೊಂಡಿದ್ದ. ಎಲ್ಲೋ ಒಂದು ಬಾರಿ ಎಡವಿಯೋ ಎಡವುತ್ತಾನೆ ಆಗ ಯಾರಿಗಾದರೂ ಅನುಮಾನ ಬಾರದೆ ಇರುವುದಿಲ್ಲ

ಇಬ್ಬರೂ ತ್ಯಾಂಗ್ ಚೀನ್ ರೂಮನ್ನು ಸೇರಿಕೊಂಡರು

"ಫುಲ್ ಸರ್ಚ್ ಮಾಡು, ನಾನಿಲ್ಲೇ ಇರುತ್ತೇನೆ"

ಮೆಲು ದನಿಯಲ್ಲೇ ವಿಶ್ವನಾಥ್ ನುಡಿದ.

ಆತನ ಅಂಗೈಯಲ್ಲಿ ಚಿಕ್ಕ ಸೈಜಿನ ಕೋಲ್ಟ್ ಪಿಸ್ತೂಲ್ ಇದೆ.

ಬಾಗಿಲ ಹೊಸಿಲಲ್ಲಿ ನಿಂತುಕೊಂಡು ಸುತ್ತಲೂ ಕಣ್ಣಾಡಿಸುತ್ತಿದ್ದಾನೆ.

ಮಹೇಶನಿಗೆ ಈಗ ಈತ ಸೆಕ್ಯೂರಿಟಿ.

ರಿವಾಲ್ವರ್ ರೆಡಿಯಾಗಿ ಇದೆ. ಕೋಲ್ಟ್ ಯಾವ ಕ್ಷಣದಲ್ಲಾದರೂ ಬೆಂಕಿಯನ್ನು ಉಗುಳಲು ಸಿದ್ಧವಾಗಿದೆ.

ಚಕಚಕನೆ ಆ ಕೋಣೆಯನ್ನು ಹುಡುಕಲು ಶುರು ಮಾಡಿದ.

ಸುಮಾರು ಹತ್ತು ನಿಮಿಷಗಳ ಸತತ ಹುಡುಕಾಟದಿಂದ ಆತನಿಗೆ ಬೇಕಾಗಿರುವುದು ಸಿಕ್ಕಿತು.

ಆ ತರುವಾಯ ಮಹೇಶನಿಗೆ ಟೇಬಲ್ಲಿನ ಕೆಳಗಿರುವ ಷೆಲ್ಫ್‌ನಲ್ಲಿ ತ್ಯಾಂಗ್ ಚೀನ್‌ನ ಐಡೆಂಟಿಟಿ ಕಾರ್ಡ್ ದೊರಕಿತು.

ಇನ್ನು ಏನಾದರೂ ಮುಖ್ಯವಾದ ಪತ್ರಗಳು ದೊರಕುತ್ತವೇನೋ ಎಂದು ಸರ್ಚ್ ಮುಂದುವರೆಸುತ್ತಿದ್ದಾನೆ ಮಹೇಶ.

"ಗೆಟ್ ರೆಡಿ ಮಹೇಶ್ ! ಸಮ್ ವನ್ ಈಸ್ ಕಮಿಂಗ್"

ಎಚ್ಚರಿಕೆ ಕೊಡುತ್ತಾ ಪಕ್ಕಕ್ಕೆ ಸರಿದುಕೊಂಡ ವಿಶ್ವನಾಥ್.

ತಟಕ್ಕನೆ ಟೇಬಲ್ಲಿನ ಮೇಲೆ ಕಸದಂತೆ ಬಿದ್ದಿರುವ ಕಾಗದಗಳನ್ನು ವೇಸ್ಟ್ ಬ್ಯಾಸ್ಕೆಟ್‌ನಲ್ಲಿ ಹಾಕಿ, ಚಂಗನೆ ತನ್ನ ಕುರ್ಚಿಯಲ್ಲಿ ಕುಳಿತುಕೊಂಡು ಯಾವುದೋ ಫೈಲನ್ನು ತೆರೆದು ಸ್ಟಡಿ ಮಾಡುತ್ತಿರುವಂತೆ ನಟಿಸುತ್ತಾ ಹೊಸಿಲೆಡೆಗೆ ದೃಷ್ಟಿಯನ್ನು ಹಾಯಿಸಿದ

ನಿಧಾನವಾಗಿ-ನಡೆದು ಒಳಗೆ ಪ್ರವೇಶಿಸಿದಂತಹ ವ್ಯಕ್ತಿಯನ್ನು ನೋಡುತ್ತಲೇ ಇಬ್ಬರೂ ಆಶ್ಚರ್ಯಚಕಿತರಾದರು.

ಹಾಗೆ ಒಳಗೆ ಬಂದದ್ದು ಗಂಡಸಲ್ಲ....ಒಬ್ಬಳು ಯುವತಿ !

"ಮೇಜರ್, ನನ್ನ ಹೆಸರು ನ್ಯಾತಾ !"

ಎಂದಳಾಕೆ

ಪರಿಶೀಲನದಿಂದ ಆಕೆಯನ್ನೇ ನೋಡಲಾಗುವುದಿಲ್ಲ ತಾನೇನಾದರೂ ತಲೆಯನ್ನು ಮೇಲೆತ್ತಿದೇ ಆದರೆ ತಾನು ಮೇಜರ್ ಅಲ್ಲವೆಂದು ಚಕ್ಕನೆ ತಿಳಿದು ಬಿಡುತ್ತೆ ಎಂದುಕೊಂಡು–

"ಏನ್ ಬೇಕಾಗಿತ್ತು ?"

ಕಂಠದಲ್ಲಿ ಕರ್ಕಶವನ್ನು ತಂದುಕೊಳ್ಳುತ್ತಾ ಚೈನಾ ಭಾಷೆಯಲ್ಲೇ ಪ್ರಶ್ನಿಸಿದ ಮಹೇಶ

ಆತನ ಪ್ರಶ್ನೆಗೆ ಉತ್ತರವೆಂಬಂತೆ–

"ನಿಮ್ಮ ಪ್ರಾಣ !"

ಎಂದು ಕೇಳಬಂತು.

ಈ ಉತ್ತರವನ್ನು ಕೇಳಿ ಅದುರಿಬೀಳುತ್ತಾ ತಲೆಯನ್ನು ಮೇಲೆತ್ತಿದ ಮಹೇಶ.

ಆ ಕೊಠಡಿಯಲ್ಲಿ ನ್ಯಾಶಾ ತನ್ನ ಕೈಯಲ್ಲಿ ರಿವಾಲ್ವರ್‌ನೊಂದಿಗೆ ನಿಂತಿದ್ದಾಳೆ.

ಸುರಸುಂದರಿಯಾದ ಆಕೆಯ ಮುಖದಲ್ಲಿ ಕಿರುನಗೆಯೊಂದಿಗೆ ಕ್ರೂರತ್ವವೂ ಸಹ ತಾಂಡವವಾಡುತ್ತಿದೆ

ವಿಶ್ವನಾಥ್‌ನನ್ನು ಇಬ್ಬರು ದೃಢಕಾಯರು ಬಲವಾಗಿ ಹಿಡಿದುಕೊಂಡಿದ್ದಾರೆ.

ಆತನ ಬಾಯಿಯನ್ನು ಒಬ್ಬ ತನ್ನ ಅಂಗೈನಿಂದ ಕವರ್ ಮಾಡಿದ.

ಸ್ವಲ್ಪ ಮಾತ್ರವೂ ಕಷ್ಟ ಪಡದೆ ತಮ್ಮಿಬ್ಬರನ್ನು ಬಂಧಿಸಿದ ಆಕೆಯೆಡೆಗೆ ಪ್ರಶ್ನಾರ್ಥಕವಾಗಿ ನೋಡಿದ ಮಹೇಶ.

"ಮಿಸ್ ನ್ಯಾಶಾ, ನಿಮಗೇನು ಬೇಕಾಗಿದೆ ?"

ತಡಬಡಿಸದೇನೇ ಪ್ರಶ್ನಿಸಿದ ಮಹೇಶ

ಮತ್ತೆ ನ್ಯಾಶಾ ನಕ್ಕಳು.

"ಆ ಪ್ರಶ್ನೆಯನ್ನು ಕೇಳಬೇಕಾದವಳು ನಾನು ಮೊದಲು ನಿಮ್ಮ ಕೈಗಳೆರಡನ್ನೂ ಟೇಬಲ್ಲಿನ ಮೇಲಿರಿಸಿ. ಯಾವ ರೀತಿಯಾದ ಪ್ರಯತ್ನವನ್ನು ಮಾಡಬೇಡಿ. ಗುಡ್....ನೀವ್ಯಾರು ? ನಿಮಗೇನು ಬೇಕು ? ಕ್ಯಾಂಗ್ ಚೀನ್‌ನನ್ನು ಏತಕ್ಕೆ ಸಾಯಿಸಿದಿರಿ ?"

ಮಹೇಶ ಆಕೆಯ ಮಾತುಗಳಿಂದ ಮನಸ್ಸಿನಲ್ಲೇ ಲೆಕ್ಕ ಹಾಕತೊಡಗಿದ

'ತಾವು ಕ್ಯಾಂಗ್ ಚೀನ್‌ನನ್ನು ಕೊಂದುಹಾಕಿದೆವೆಂದು ಆಕೆ ಮನಸ್ಸಿನಲ್ಲೇ ಭಾವಿಸುತ್ತಿದ್ದಾಳೆ ಅದಷ್ಟೇ ಅಲ್ಲ ಆಕೆಯ ಮಾತಿನಿಂದ ಕ್ಯಾಂಗ್ ಚೀನ್‌ನೊಂದಿಗೆ ಒಳ್ಳೆಯ ರಿಲೇಷನ್ ಇರುವುದೆಂದು ತಿಳಿಯುತ್ತಿದೆ'

ಮಹೇಶನ ನೋಟ ಬಂಧಿಸಲ್ಪಟ್ಟಿರುವ ವಿಶ್ವನಾಥ್‌ನೆಡೆಗೆ ಹರಿಯಿತು.

ಮತ್ತೆ ನ್ಯಾಶಾಳೆಡೆಗೆ ಮರಳಿತು.

ಕೆಲವು ನಿಮಿಷ ಆಕೆಯನ್ನೇ ನೋಡುತ್ತಾ ನಿಂತ.

ನ್ಯಾಶಾ ಪಿಸ್ತೂಲನ್ನು ಹಿಡಿದಿರುವ ಸ್ಟೈಲನ್ನು ನೋಡಿದರೆ ಆಕೆಗೆ ಇದರಲ್ಲಿ ಒಳ್ಳೆಯ ಎಕ್ಸ್‌ಪೀರಿಯೆನ್ಸ್ ಇದೆಯೆಂದು ತೋರಿಬರುತ್ತೆ

ಇಂತಹ ಸಮಯದಲ್ಲಿ ತಾನು ಕೊಂಚ ಮಾತ್ರವಾದರೂ ಕೈಗಳನ್ನು ಕದಲಿಸಿದರೆ ಆಕೆಯ ಕೈಯಲ್ಲಿರುವ ಪಿಸ್ತೂಲನೊಳಗಿಂದ ಹೊರಬರುವ ಗುಂಡು ತನ್ನ ಕಂಠದೊಳಗೆ ಇಳಿಯುವುದು ಗ್ಯಾರಂಟಿ.

"ಏನು ಇನ್ನೂ ಆಲೋಚಿಸುತ್ತಿರುವಿರಿ ? ಏನು ಹೇಳಬೇಕೆಂದೇ ? ಇಲ್ಲ ತಪ್ಪಿಸಿಕೊಳ್ಳಬೇಕೆಂದೇ ?"

ಗದರಿಸಿ ಕೇಳಿದಳು ಸ್ನ್ಯಾತಾ.

"ಒಬ್ಬಳು ಮಾಮೂಲ್ ಪ್ರಾಸ್ಟಿಟ್ಯೂಟ್‌ಗೂ, ಮೇಜರ್ ತ್ಯಾಂಗ್ ಚೀನ್‌ಗೂ ಯಾವ ರೀತಿಯಾದ ಸಂಬಂಧವಿದೆಯೆಂದು ಆಲೋಚಿಸುತ್ತಿದ್ದೇನೆ"

ಆ ಮಾತುಗಳನ್ನು ಕೇಳುತ್ತಲೇ ಸ್ನ್ಯಾತಾಳ ಮುಖ ಕೋಪದಿಂದ ಕೆಂಬಣ್ಣಕ್ಕೆ ತಿರುಗಿತು ಕೆಂಪನೆಯ ಅಧರಗಳು ಅದುರುತ್ತಿರುವಂತೆ ಕಂಡು ಬಂತು.

"ಯೂ ಷಟಪ್, ಅಗ್ಲೀ ಇಂಡಿಯನ್. ಆ ವಿಷಯ ನಿನಗೆ ಬೇಕಿಲ್ಲ. ತ್ಯಾಂಗ್ ಚೀನ್‌ನ್ನು ಏನು ಮಾಡಿದಿರೆಂದು ಹೇಳು ?"

ಗಟ್ಟಿಯಾಗಿ ಅರಚಿ ಪ್ರಶ್ನಿಸಿದಳು ಸ್ನ್ಯಾತಾ.

ಅದೇ ಕ್ಷಣದಲ್ಲಿ ಮಹೇಶ ಕುರ್ಚಿಯಲ್ಲಿ ತಟಕ್ಕನೆ ಕುಳಿತು ಟೇಬಲ್ ಕೆಳಗಿನಿಂದ ಎದುರುಗಡೆ ಇರುವ ಕುರ್ಚಿಗೆ ತನ್ನ ಬಲವನ್ನೆಲ್ಲಾ ಬಿಟ್ಟು ಒದ್ದ.

ಬಹಳ ಹತ್ತಿರದಲ್ಲೇ ನಿಂತಿದ್ದಳು ಸ್ನ್ಯಾತಾ.

ಮೊಸಾಯಿಕ್ ಫ್ಲೋರ್‌ನಲ್ಲಿ ಆ ಕುರ್ಚಿ ಸರ್ರನೆ ಜಾರುತ್ತಾ ಸ್ನ್ಯಾತಾಳ ಮುಂಡಿಗೆ ಬಂದು ಬಡಿಯಿತು.

ಈ ಅನಿರೀಕ್ಷಿತವಾದ ಆಘಾತದಿಂದ ಆಕೆಗೆ ಚೇತರಿಸಿಕೊಳ್ಳಲಾಗಲಿಲ್ಲ. ಕೆಳಗೆ ಬಿದ್ದ ಆಕೆ ಪಿಸ್ತೂಲನ್ನು ತೆಗೆದುಕೊಳ್ಳಲು ಅಣಿಯಾದಳು.

ಅಷ್ಟೇ....!

ಮಹೇಶ ತಾನು ಕುಳಿತಿರುವ ಕುರ್ಚಿಯಿಂದ ಎದ್ದು ನಿಂತು ಒಂದೇ ಷಾಟ್‌ನಲ್ಲಿ ಅದನ್ನು ಒದ್ದು ಹಿಂದಕ್ಕೆ ಜರುಗಿಸಿ, ಟೇಬಲ್ಲಿನ ಮೇಲೆ ಬಲಗೈಯನ್ನು ಒತ್ತಿ ತಟಕ್ಕನೆ ಆ ಬದಿಗೆ ಎಗರಿದ.

ಒಂದೇ ಒಂದು ಜಂಪ್‌ನಲ್ಲಿ ಸ್ವಾತಾಳನ್ನು ಸಮೀಪಿಸಿದ.

ಪಿಸ್ತೂಲನ್ನು ಹಿಡಿದಿರುವ ಆಕೆಯ ಕೈಯನ್ನು ಹಿಡಿದು ಮಣಿಕಟ್ಟನ್ನು ತಿರುಚಿದ. ನಂತರ ಆಕೆಯನ್ನು ಎಬ್ಬಿಸಿ ಅದೇ ಪಿಸ್ತೂಲನ್ನು ಆಕೆಯ ಕಂಠಕ್ಕೆ ಆನಿಸಿ, ಮತ್ತೊಂದು ಕೈಯಿಂದ ಬಲವಾಗಿ ಆಕೆಯ ಕುತ್ತಿಗೆಗೆ ಬಳಸಿದ.

ಹಠಾತ್ತಾಗಿ ನಡೆದ ಈ ಸಂಘಟನೆಯನ್ನು ಜೀರ್ಣಿಸಿಕೊಳ್ಳುವಷ್ಟರಲ್ಲೇ,

"ಆತನನ್ನು ರಿಲೀಸ್ ಮಾಡಿ....ಲೀವ್ ಹಿಮ್ ಫ್ರೀ"

ಹೂಂಕರಿಸಿದ ಮಹೇಶ.

ಸ್ವಾತಾಳ ಅನುಚರರು ತಕ್ಷಣ ಬಿಟ್ಟುಬಿಟ್ಟರು ಬ್ರಿಗೇಡಿಯರ್ ವಿಶ್ವನಾಥ್‌ನನ್ನು.

"ಥ್ಯಾಂಕ್ಸ್"

ಎನ್ನುತ್ತಾ ಅವರಿಬ್ಬರನ್ನೂ ಒಳಗೆ ತಳ್ಳಿ ಅಗುಳಿಯನ್ನು ಹಾಕಿದ ವಿಶ್ವನಾಥ್.

ಮೂವರ ಹತ್ತಿರ ಇದ್ದಂತಹ ಗನ್ಸನ್ನು ಕಲೆಕ್ಟ್ ಮಾಡಿ ತನ್ನ ಹತ್ತಿರ ಇರಿಸಿಕೊಂಡ ಬ್ರಿಗೇಡಿಯರ್ ವಿಶ್ವನಾಥ್.

"ಹುಂ....ಈಗ ಹೇಳು ಬೇಬಿ....ನಿನಗೆ ಯಾವ ವಿವರಗಳು ಬೇಕು ?"

ಮಹೇಶ ಕೇಳಿದ.

ತನ್ನ ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ ಮಹೇಶನನ್ನೇ ದುರ್ರುಗುಟ್ಟುತ್ತಾ ನೋಡಿದಳು ಸ್ವಾತಾ.

ಮೂವರನ್ನೂ ಗೋಡೆಗೆ ಒರಗಿಕೊಂಡು, ತಲೆಯ ಮೇಲೆ ಕೈಗಳೆರಡನ್ನೂ ಇರಿಸಿಕೊಂಡು ನಿಲ್ಲುವಂತೆ ಆಜ್ಞಾಪಿಸಿದ ವಿಶ್ವನಾಥ್.

ಆತನ ಆಜ್ಞೆಯನ್ನು ಪಾಲಿಸದೆ ಬೇರೆ ವಿಧಿಯಿಲ್ಲ ಅವರುಗಳಿಗೆ.

"ಮಿಸ್ ಸ್ವಾತಾ, ಮೇಜರ್ ತಾಂಗ್‌ಚೀನ್‌ನೊಂದಿಗೆ ನಿನಗೆ ಬಹಳ ಪರಿಚಯ ಇದೆ. ಆತನ ಬಗ್ಗೆ ನನ್ನಲ್ಲಿ ವಿವರವನ್ನು ಕೇಳಿದೆ, ಅದು ಏತಕ್ಕಾಗಿ ? ನಾವಾತನನ್ನು ಬಂಧಿಸಿ ಕರೆದುಕೊಂಡು ಹೋಗಿರುವುದು ನಿನಗೆ ಹೇಗೆ ಗೊತ್ತು ?"

ಸಾಲಾಗಿ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದ ವಿಶ್ವನಾಥ್.

ತುಟಿಗಳನ್ನು ಬಿಗಿಸಿ ಮಾತನಾಡದೆ ಮೌನವಹಿಸಿದಳು ಸ್ವಾತಾ.

"ಆಲ್ ರೈಟ್....ನಾನೇ ಹೇಳಲಿ ?"

ಎಂದ ವಿಶ್ವನಾಥ್.

ಕೊಂಚ ಮಾತ್ರವೂ ಕುತೂಹಲವನ್ನು ತೋರ್ಪಡಿಸಿಕೊಳ್ಳಲಿಲ್ಲ ಸ್ವಾತಿ.

"ಮೇಜರ್ ತ್ಯಾಂಗ್ ಚೀನ್ ಭಾವಿಸಿದ ಹಾಗೆ ನೀನು ಮಾಮೂಲು ಪ್ರಾಸ್ಟಿಟ್ಯೂಟ್ ಅಲ್ಲ. ಆತನನ್ನು ನಿನ್ನ ವಶಮಾಡಿಕೊಂಡು ಸರಿಯಾದ ಸಮಯ ಹೊಂಚು ಹಾಕಿ ಆತನಿಂದ ರಹಸ್ಯ ವಿಷ್ಯಗಳನ್ನು ತಿಳಿದುಕೊಂಡು, ಅದೆಲ್ಲವನ್ನು ವಿದೇಶಕ್ಕೆ ಸಾಗುವಳಿ ಮಾಡುತ್ತಿರುವೆ. ಆದುದರಿಂದಲೇ ಆತನ ಮೇಲೆ ಒಂದು ಕಣ್ಣಿರಿಸಿ...."

"ಸ್ಟಾಪಿಟ್ !"

ಗಟ್ಟಿಯಾಗಿ ಗರ್ಜಿಸಿದಳು ಸ್ವಾತಿ.

ಕೋಪದಿಂದ ಆಕೆಯ ಮುಖ ತುಟಿಗಳೆಲ್ಲವೂ ಕಂಪಿಸುತ್ತಿವೆ.

ಅಂದವಾದ ಮುಖದ ಪೂರಾ ಶ್ವೇತ ಬಿಂದುಗಳು ಸ್ಥಾನವನ್ನೇರ್ಪಡಿಸಿ ಕೊಂಡಿವೆ.

"ಡೋಂಟ್ ಬಿ ಎಕ್ಸೈಟೆಡ್"

ವಿಶ್ವನಾಥ್ ಬಹಳ ಶಾಂತವಾಗಿ ಹೇಳಿದ.

"ನೀನು ಊಹಿಸಿರುವಂತೆ ನಾನು ಒಬ್ಬಳು ಚೀಪ್ ಪ್ರಾಸ್ಟಿಟ್ಯೂಟಲ್ಲ. ನಾನು ಮೇಜರ್ ತ್ಯಾಂಗ್ ಚೀನ್‌ಗೆ ಅಸಿಸ್ಟೆಂಟ್ ಮಾತ್ರ ಆಗಿದ್ದೇನೆ. ತ್ಯಾಂಗ್ ಚೀನ್‌ಗೆ ತನ್ನ ಮನುಷ್ಯರ ಮೇಲೆ ಅನುಮಾನ ಬಂದಿತೆಂದರೆ ಆತ ನನ್ನನ್ನು ನಿಯೋಗಿಸಿಕೊಳ್ಳುತ್ತಾನೆ. ನನ್ನ ಐಡೆಂಟಿಟಿಯ ರಿಗೂ ತಿಳಿಯದಿದ್ದರಿಂದ ಅಮಾಯಕದಿಂದ ನನ್ನ ತೋಳುಗಳಲ್ಲಿ ಬಿದ್ದು ತಮ್ಮ ರಹಸ್ಯವನ್ನು ಬಟ್ಟ ಬಯಲು ಮಾಡಿಕೊಳ್ಳುತ್ತಾರೆ. ತ್ಯಾಂಗ್ ಚೀನ್ ಅವರನ್ನು ವಿಚಾರಿಸಿಕೊಳ್ಳುತ್ತಾನೆ. ಅದಷ್ಟೇ ಅಲ್ಲದೆ ನೀನು ಹೇಳಿದ ಹಾಗೆ ಬಿಚ್ ಅಲ್ಲ"

ಆವೇಶದಿಂದ ಅರಚಿದಳು ಸ್ವಾತಿ.

ವಿಶ್ವನಾಥ್‌ಗೂ ಬೇಕಾದುದು ಅದೇ.

ಆಕೆಯ ಐಡೆಂಟಿಟಿಗಾಗಿಯೇ ಅವಳನ್ನು ಕೆಣಕಿದ್ದು.

ಅದಕ್ಕೆ ಸರಿಯಾದ ಫಲಿತಾಂಶ ದೊರಕಿದೆ.

"ಥ್ಯಾಂಕ್ಯೂ, ಹಾಗಾದರೆ ನಿನಗೆ ಬಹಳ ರಹಸ್ಯ ಗೊತ್ತಿರಬಹುದೆಂದು ತೋರುತ್ತದೆ...."

ಎನ್ನುತ್ತಾ ಮಹೇಶನೆಡೆಗೆ ತನ್ನ ದೃಷ್ಟಿಯನ್ನು ಹಾಯಿಸಿದ

ತಲೆಯನ್ನಲ್ಲಾಡಿಸುತ್ತಾ ಅವರು ಮೂವರ ಹತ್ತಿರ ಹೆಜ್ಜೆಯಿರಿಸಿದ ಮಹೇಶ.

ಎರಡೇ ಎರಡು ಏಟಿಗೆ ನ್ಯಾತಾಳ ಅನುಚರರಿಬ್ಬರೂ ಷೇಕಾದರು.

ಇವನನ್ನು ಭಯದ ಕಂಗಳಿಂದ ನೋಡಿದಳು ನ್ಯಾತಾ

"ಡೋಂಟ್‌ವರಿ ! ನಮಗೆ ಬೇಕಾದಂತಹ ವಿವರಗಳನ್ನು ಒಪ್ಪಿಸಿಬಿಟ್ಟರೆ ನಿನಗೆ ಯಾವ ರೀತಿಯಾದ ಭಯವೂ ಇರುವುದಿಲ್ಲ"

ಖಡಾಖಂಡಿತವಾಗಿ ನುಡಿದ ವಿಶ್ವನಾಥ್

"ನನಗೇನೂ ಗೊತ್ತಿಲ್ಲ"

ಗಟ್ಟಿಯಾಗಿ ಅರಚಿದಳು ನ್ಯಾತಾ.

"ಹಾಗೆ ಅರಚಿದರೆ ಯಾರಾದರೂ ನಿನಗೆ ಸಹಾಯಕ್ಕಾಗಿ ಬರುವರೆಂದು ತಿಳಿದಿರುವೆಯೋ ? ಇದು ತ್ಯಾಂಗ್ ಚೀನ್‌ನ ಇಂಟರಾಗೇಷನ್ ರೂಮ್ ಆಗಿಯೂ ಸಹ ಉಪಯೋಗಿಸಲ್ಪಡುತ್ತದೆಂದು ಮರೆತಂತೆ ಕಾಣುತ್ತದೆ"

ಕರ್ಕಶ ತುಂಬಿದ ಗಟ್ಟಿ ಧ್ವನಿಯಲ್ಲಿ ಹೇಳಿದ ಮಹೇಶ

"ನನ್ನನ್ನೇನು ಮಾಡುತ್ತೀರಾ ಈಗ ?"

ಬಹಳ ಭಯದಿಂದ ಕೇಳಿದಳು ಆಕೆ.

"ನಮಗೆ ಕೆಲವು ವಿವರಗಳುಬೇಕು. ಅವುಗಳೆಲ್ಲವನ್ನು ನಮಗೆ ಒಪ್ಪಿಸಿದೆಯಾದರೆ ನಿಮ್ಮನ್ನು ಬಿಟ್ಟುಬಿಡ್ತೇವೆ"

"ನಿಜವಾಗಿಯೂ ಬಿಟ್ಟುಬಿಡ್ತೀರಾ ?"

"ಪ್ರಾಮಿಸ್"

# 6

ಆ ಕೊಠಡಿಯ ಗೋಡೆಯ ಮೇಲೆ ತನ್ನ ಕೈಗಳನ್ನಿರಿಸಿದ ಮೇಜರ್ ತ್ಯಾಂಗ್ ಚೀನ್. ತಣ್ಣನೆ ಮಂಜನಂತೆ ಭಾಸವಾಯಿತು. ಠಕ್ಕನೆ ತನ್ನ ಕೈಗಳನ್ನು ಹಿಂದಕ್ಕೆ ಎಳೆದುಕೊಂಡ.

ಆತನ ತುಟಿಗಳ ಮೇಲೆ ಮಂದಹಾಸ ಮಿಂಚಿ ಮಾಯವಾಯಿತು.

ಮಂಜಿನ ಗಡ್ಡೆಯ ಮೇಲೆ ಮರದ ಚಕ್ಕೆಗಳಿಂದ ಈ ಮನೆಯನ್ನು ನಿರ್ಮಿಸಿದಾರೆಂದು ತನ್ನೊಳಗೇ ಅಂದುಕೊಳ್ಳುತ್ತಾ ಬಾಗಿಲ ಹತ್ತಿರಕ್ಕೆ ನಡೆದು ಬಂದ.

ಆತನ ಕೈಯಲ್ಲಿ ಖಾಲಿ ಟಿನ್ ಒಂದಿತ್ತು. ಅದರ ಒಂದು ಬದಿಯ ತಗಡನ್ನು ಕಟ್ ಮಾಡಿ ಬಿಸಾಡಿ ಅದರೊಳಗಿರುವ ಪದಾರ್ಥವನ್ನು ಖಾಲಿ ಮಾಡಿದ

ಆ ತಗಡಿನ ಚೂರಿನಿಂದ ಮರದ ಬಾಗಿಲಿನ ಸಂದಿಯೊಳಗೆ ತೂರಿಸಿ ಕೊಂಚ ಅತ್ತಿತ್ತ ಸರಿಸಿದ.

ಉಹುಂ, ಏನೊಂದೂ ಪ್ರಯೋಜನವಾಗಲಿಲ್ಲ:

ಹೊರಗಡೆಯಿಂದ ಚಿಲಕ ಹಾಕಿಕೊಂಡು ಹೋಗಿದ್ದಾರೆ.

ತನ್ನ ಪ್ರಯತ್ನವನ್ನು ಅಲ್ಲಿಗೇ ನಿಲ್ಲಿಸಿ ಕೋಪದಿಂದ ಆ ತಗಡಿನ ಚೂರನ್ನು ದೂರಕ್ಕೆ ಎಸೆದು ಶತಪಥ ತಿರುಗಲು ಪ್ರಾರಂಭಿಸಿದ.

ಸಮಯ ಮುಂದಕ್ಕೆ ಸಾಗುತ್ತಿದೆ.

"ಅನ್ಯಾಯ....ಅಕ್ರಮ ! ನಮ್ಮನ್ನು ಬಿಟ್ಟು ಬಿಡುತ್ತೇವೆಂದು ಹೇಳಿ ಹೀಗೆ ನಮ್ಮನ್ನು ಬಂಧನದಲ್ಲಿರಿಸಿ ನಿಮ್ಮ ಪಾಡಿಗೆ ನೀವು ಹೋಗುವುದು ಒಂಚೂರು ಸರಿಕಾಣದು. ಅದು ನ್ಯಾಯ ಸಮ್ಮತವೂ ಅಲ್ಲ"

ಗಟ್ಟಿಯಾಗಿ ಅರಚಿದ್ದಳು ನ್ಯಾತಾ.

"ಷ್...."

ಕೊನೆಯ ವ್ಯಕ್ತಿಯನ್ನು ಸಹ ಬಂಧಿಸಿ ಆಕೆಯೆಡೆಗೆ ತನ್ನ ನೋಟವನ್ನು ಹರಿಸಿದ ಮಹೇಶ.

"ನೀನು ಸುಳ್ಳು ಹೇಳುತ್ತಿರುವೆಯೋ ಇಲ್ಲ ನಿಜ ಹೇಳುತ್ತಿರುವೆಯೋ ನಮಗೆ ಹೇಗೆ ತಾನೇ ತಿಳಿಬೇಕು"

"ಬಿಲೀವ್ ಮಿ....ನನ್ನನ್ನು ನಂಬಿ. ನಿಜವನ್ನೇ ಹೇಳ್ತೀನಿ"

"ಅದು ನಿಜವೋ ಸುಳ್ಳೋ....ಅದನ್ನು ಋಜುವಾತು ಪಡಿಸಿದ ನಂತರವೇ ನಿಮ್ಮನ್ನು ಬಿಡುತ್ತೇವೆ. ಅಷ್ಟರವರೆವಿಗೂ ನೀವುಗಳು ಹೀಗೆಯೇ ಉಳಿಯಿರಿ"

ಎಂದು ಹೇಳಿ ಬ್ರಿಗೇಡಿಯರ್‌ಗೆ ಸನ್ನೆ ಮಾಡಿ ಆತನೊಂದಿಗೆ ಹೊರಗೆ ತನ್ನ ಹೆಜ್ಜೆಯನ್ನಿರಿಸಿದ ಮಹೇಶ

ಆತನನ್ನು ಬ್ರಿಗೇಡಿಯರ್ ನಿಲ್ಲಿಸಿದ.

"ಆ ನ್ಯಾತಾ ಕೆಳಗೆ ಬಿದ್ದಿರುವ ತನ್ನ ಅನುಚರರನ್ನು ಎಚ್ಚರಿಸಿರಬಹುದು. ಅದುದರಿಂದ ನಾವು ಈ ದಾರಿಯಿಂದ ಹೊರಟು ಹೋಗುವ"

ಎನ್ನುತ್ತಾ ವರಾಂಡದ ಎರಡನೇ ಕೊನೆಯನ್ನು ನೋಡಿದ.

ಇಬ್ಬರೂ ವರಾಂಡದ ಕೊನೆಯೆಡೆಗೆ ನಡೆದರು.

ಮಂಜಿನ ಹನಿ ವಿಪರೀತವಾಗಿ ಬೀಳುತ್ತಿರುವುದರಿಂದ ಪರಿಸರ ಅಷ್ಟು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ.

ಪಕ್ಕದಲ್ಲೇ ಕಿಟಕಿ ಇದೆ.

ಅದರ ಬಲಬದಿಯಲ್ಲೇ ದಪ್ಪದಾದ ನೀರಿನ ಪೈಪು ಹೋಗುತ್ತಿದೆ.

ಅದನ್ನು ಆಧಾರವಾಗಿರಿಸಿಕೊಂಡು ಇಬ್ಬರೂ ಸದ್ದುಗದ್ದಲವಿಲ್ಲದೆ ನಿಧಾನವಾಗಿ ಕೆಳಗಿಳಿಯುತ್ತಿದ್ದಾರೆ.

# 7

ತನ್ನ ಅನುಚರರೆಡೆಗೆ ಪಿಳಿಪಿಳಿ ಎಂದು ನೋಡತೊಡಗಿದಳು ನ್ಯಾತಾ.

ಆಕೆಯ ಕೈಗಳು ಮತ್ತು ಕಾಲುಗಳನ್ನು ಬಂಧಿಸಿದ್ದರಲ್ಲದೆ ಆಕೆಯ ಬಾಯಿಗೂ ಸಹ ಟೇಪನ್ನು ಅಂಟಿಸಿ ಹೋಗಿದ್ದಾರೆ ಪುಣ್ಯಾತ್ಮರು.

ಕೈಗಳು ಕುರ್ಚಿಯ ಹಿಂಬದಿಯಲ್ಲಿ ಕಟ್ಟಿ ಹಾಕಲ್ಪಟ್ಟಿವೆ.

ಅದೇ ಕುರ್ಚಿಯ ಕಾಲ್ಗಳಿಗೆ ನ್ಯಾತಾಳ ಕಾಲ್ಗಳನ್ನು ಸೇರಿಸಿ ಕಟ್ಟಿ ಹಾಕಿದ್ದಾನೆ ಸೂಪರ್ ಮೈಂಡೆಡ್ ಮಹೇಶ.

ಅತ್ತ ಇತ್ತ ಕೊಂಚವೂ ಸಹ ಮಿಸುಕಾಡದೆ ಇರುವ ಹಾಗೆ ಇದೆ ಆಕೆಯ ಪರಿಸ್ಥಿತಿ

ನಿಸ್ಸಹಾಯದಿಂದ ಕೊಠಡಿಯೆಲ್ಲವನ್ನೂ ಪರಿಶೀಲಿಸಿದಳು.

ಆಕೆಯ ನೋಟ ಟೇಬಲ್ಲಿನ ಅಂಚಿನ ಮೇಲೆ ಕೇಂದ್ರೀಕರಿಸಿತು.

ಅದರಿಂದ ಏನೂ ಪ್ರಯೋಜನವಿಲ್ಲ ಎಂದೆನಿಸಿತು

ತನಗೆ ಉಪಯೋಗವಾಗುವಂತಹ ವಸ್ತುವನ್ನು ಆಕೆಯ ಕಣ್ಣುಗಳು ಹುಡುಕುತ್ತಿದ್ದವು.

ಇದ್ದಕ್ಕಿದ್ದಂತೆಯೇ ಆಕೆಯ ಅನುಚರರಲ್ಲಿ ಒಬ್ಬ ಕೊಂಚ ಮುಂದಕ್ಕೆ ಬಾಗಿ ಕುರ್ಚಿಯ ಕಾಲನ್ನು ಎಳೆದು ನೆಲಕ್ಕೆ ಬೀಳಿಸಿದ

ಅದು ಶಬ್ದ ಮಾಡಿತು.

ಏನೆಂಬಂತೆ ಪ್ರಶ್ನಾರ್ಥಕವಾಗಿ ಆತನನ್ನೇ ನೋಡಿದಳು ನ್ಯಾತಾ.

ಆತ ಮೆಲ್ಲಮೆಲ್ಲನೆ ತೆವಳಿಕೊಂಡು ಆಕೆಯ ಹತ್ತಿರ ಬಂದ

ಆಗಲೂ ಸಹ ಆತನ ಉದ್ದೇಶವೇನೆಂದು ಸ್ವಾತಾಳಿಗೆ ಅರ್ಥವಾಗಲಿಲ್ಲ

ಸ್ವಾತಾಳೂ ಸಹ ಅತೀ ಕಷ್ಟದಿಂದ ಕೊಂಚ ಕೊಂಚವಾಗಿ ತಿರುಗುತ್ತಾ ಆತನೆಡೆಗೆ ತೋರುವಂತೆ ತಿರುಗಿ ನಿಂತಳು.

ಆತನ ಕೈಗಳು ಆಕೆಯ ಮಣಿಕಟ್ಟಿನ ಹತ್ತಿರವಿದ್ದ ಬಂಧನವನ್ನು ಬಿಡಿಸಲು ಪ್ರಯತ್ನಿಸುತ್ತಿದೆ.

ಅದು ಅಷ್ಟು ಸುಲಭವಾಗಿ ಆಗುವ ಕೆಲಸ ಅಲ್ಲವೆಂದು ಇಬ್ಬರಿಗೂ ಗೊತ್ತು.

ವಿಪರೀತವಾದ ಶ್ರಮದಿಂದ ಆತನ ಮೈಯಲ್ಲಿ ಬೆವರಾವರಿಸತೊಡಗಿದೆ ಅಷ್ಟು ಛಳಿಯಿದ್ದರೂ ಸಹ ಆತನಲ್ಲಿ ಬೆವರಿನ ಬಿಂದುಗಳು.

ಆತನು ಮಾಡುತ್ತಿರುವ ಪ್ರಯತ್ನ ಒಂದು ಚೂರೂ ಸಫಲವಾದಂತೆ ತೋರುತ್ತಿಲ್ಲ

ಬಹಳ ಗಟ್ಟಿಯಾಗಿ ಬಿಗಿದು ಕಟ್ಟಿದ್ದರಿಂದ ಕೊಂಚ ಮಾತ್ರವೂ ಲೂಜ್ ಆಗಲು ಅವಕಾಶವಾಗಲಿಲ್ಲ.

ಕೆಳದುಟಿಯನ್ನು ಮೇಲಿನ ದಂತ ಪಂಕ್ತಿಗಳಿಂದ ಕಚ್ಚಿಕೊಂಡು ಬಹಳ ಟೆನ್ಷನ್‌ನಿಂದ ನೋಡುತ್ತಿದ್ದಾಳೆ ಸ್ವಾತಾ.

ಆ ಇಬ್ಬರೂ ಎಷ್ಟು ದೂರ ಹೋಗಿರುತ್ತಾರೆ ?

ಅವರುಗಳು ಎಲ್ಲಿಗೆ ಹೋಗಿರುತ್ತಾರೆ ?

ಸ್ವಾತಾಳ ತಲೆಯಲ್ಲಿ ಪ್ರಶ್ನೆಯ ತರಂಗಗಳು ಏಳತೊಡಗಿತು.

ಒಂದೆಡೆ ಬಿಡಿಸಿಕೊಳ್ಳುವ ಆತುರ – ಮತ್ತೊಂದೆಡೆ ಅವರುಗಳ ಬಗ್ಗೆ ಕಾತುರ

• • • •

ಮಹೇಶ ಕಾರನ್ನು ನಿಲ್ಲಿಸಿದ.

ಒಂದು ಪಕ್ಕದಲ್ಲಿ ಎತ್ತರವಾದ ಮಂಜಿನಿಂದ ತುಂಬಿದ ಶಿಖರಗಳು ದೂರದಲ್ಲಿ ಕಾಣಬರುತ್ತಿದೆ.

ಅಲ್ಲಲ್ಲಿ ದಟ್ಟವಾದ ಮರಗಳು ಆಕಾಶದೆತ್ತರಕ್ಕೆ ನಾಲ್ಕೈದು ಜೋಡಿ ಪ್ರಮಾಣದಲ್ಲಿ ಬೆಳೆದು ನಿಂತಿವೆ.

ಅವುಗಳ ಮಧ್ಯ ಕೊಂಚ ಖಾಲಿ ಇದೆ.

ಕಾರನ್ನು ಅಲ್ಲಿ ಅಡಗಿಸಿ ಹೊರಡುವುದು ಒಳ್ಳೆಯದೆಂಬಂತೆ ಇಬ್ಬರಿಗೂ ತೋರಿತು.

ಬಹಳ ಜಾಗರೂಕತೆಯಿಂದ ಕಾರನ್ನು ಮರಗಳ ಮಧ್ಯೆ ಅಡಗಿಸಿ, ನಾಲ್ಕೈದು ಫರ್ಲಾಂಗ್ ನಡೆದು ಬರುತ್ತಿದ್ದಾಗ ಮಹೇಶನಿಗೆ ಏನೋ ಹೊಳೆದಂತಾಗಿ ಹಿಂದಿರುಗಿ ಬಂದು ಕಾರಿನ ನಾಲ್ಕೈದು ವೈರ್‌ಗಳನ್ನು ಕಿತ್ತು ಹಾಕಿ, ಪೆಟ್ರೋಲ್ ಟ್ಯಾಂಕನ್ನು ಖಾಲಿ ಮಾಡಿ ಅದನ್ನು ಉಪಯೋಗಕ್ಕೆ ಬಾರದ ಹಾಗೆ ಮಾಡಿದ.

ಮಹೇಶನ ಚಾತುರ್ಯ ಬುದ್ಧಿಗೆ ಮನಸ್ಸಿನಲ್ಲೇ ಹ್ಯಾಟ್ಸಾಫ್ ಮಾಡಿದ ವಿಶ್ವನಾಥ್.

ಆ ಕಾರನ್ನು ಅಲ್ಲೇ ಬಿಟ್ಟು ರೈಲ್ವೆ ಸ್ಟೇಷನ್‌ನೆಡೆಗೆ ನಡೆಯಲಾರಂಭಿಸಿದರು ಇಬ್ಬರೂ.

• • • •

ಮಣಿಕಟ್ಟು ಕೊಂಚ ಲೂಸ್ ಆದಂತೆ ತೋರಿತು.

ಆತ ವಿಪರೀತವಾಗಿ ಶ್ರಮಿಸುತ್ತಿದ್ದಾನೆ.

ಆತನ ಮುಖದ ಮೇಲಿನಿಂದ ಬೆವರು ವಿಪರೀತವಾಗಿ ಸುರಿಯುತ್ತಿದೆ.

ಕೈಗಳನ್ನು ಹಿಂದಕ್ಕೆಳೆದು ಕಟ್ಟಿ ಹಾಕಿದ್ದರಿಂದ ಭುಜಗಳಿಗೆ ವಿಪರೀತ ಯಾತನೆಯಾಗುತ್ತಿದೆ.

ಮಿಕ್ಕ ಇಬ್ಬರು ಉತ್ಸುಕತೆಯಿಂದ ನೋಡುತ್ತಿದ್ದಾರೆ.

"ಅಮ್ಮ....!"

ನಿಟ್ಟುಸಿರೊಂದನ್ನು ಹೊರಬಿಟ್ಟನಾತ.

ಭುಜಗಳು ಛಳಕ್ಕೆಂದವು

ನ್ಯಾಕಾಳ ಕೈಯ ಪಟ್ಟು ಸಡಿಲಗೊಂಡಿತು

ಮತ್ತೆರಡು ನಿಮಿಷಗಳಲ್ಲಿಯೇ ಆಕೆಯ ಮಣಿಕಟ್ಟನ್ನು ಬಂಧಿಸಿದ ಹಗ್ಗ ದೂರವಾಯಿತು.

ಗಬಗಬನೆ ಬಾಯಿಗೆ ಅಂಟಿಸಿದಂತಹ ಟೇಪನ್ನು ಎಳೆದು ಬಿಸಾಡಿ, ಆ ಕುರ್ಚಿಯಿಂದ ವಿಮುಕ್ತಿ ಪಡೆದು ಎದ್ದು ನಿಂತಳು.

ಮುಂಗೈಯನ್ನು ಅತ್ತಿತ್ತ ತಿರುಗಿಸಿ, ನಾಲ್ಕೈದು ಬಾರಿ ನೆಟಿಕೆಗಳನ್ನು ಮುರಿದು ಮಾಮೂಲು ಪರಿಸ್ಥಿತಿಗೆ ಬಂದಳು ನ್ಯಾತಾ.

ತನ್ನ ಅನುಚರರ ಬಂಧನವನ್ನು ಮುಕ್ತಿಗೊಳಿಸಿ ಟೇಬಲ್ಲಿನ ಮೇಲಿರುವ ಫೋನನ್ನು ತನ್ನದಾಗಿಸಿಕೊಂಡಳು ನ್ಯಾತಾ.

ಎರಡು ನಿಮಿಷ ಕಳೆಯಿತೋ ಇಲ್ಲವೋ ಆಕೆಯ ಮುಖ ಮಾಮೂಲು ಬಣ್ಣವನ್ನೇ ಕಳೆದುಕೊಂಡಿತು.

"ಬನ್ನಿ ...."

ಎಂದು ಅರಚುತ್ತಾ ಹೊರಗಡೆಗೆ ಓಡತೊಡಗಿದಳು.

"ಏನು....ಏನಾಯ್ತು ?"

ಕೇಳಕೇಳುತ್ತಲೇ ಆಕೆಯನ್ನು ಅನುಸರಿಸಿದರು ಮಿಕ್ಕವರು.

"ಆ ಬ್ಲಡಿ ಫೂಲ್ ಕನೆಕ್ಷನ್ ಕಟ್ ಮಾಡಿ ಹೋಗಿದ್ದಾನೆ. ಈ ವಿಷಯವನ್ನು ಈ ಕ್ಷಣವೇ ಹೆಡ್‌ಕ್ವಾರ್ಟರ್ಸ್‌ಗೆ ತಿಳಿಸಬೇಕು"

ಹೇಳುತ್ತಲೇ ಓಡತೊಡಗಿದಳು.

ಹಡಾವಿಡಿಯಿಂದ ಹೊರಗೆ ಬಂದಂತಹ ನ್ಯಾತಾಳನ್ನು, ಆಕೆಯ ಅನುಚರರನ್ನು ಕಂಡ ಸೆಂಟ್ರಿಗಳು ತತ್ತರಿಸಿ ಹೋದರು.

"ಮೇಜರ್ ತ್ಯಾಂಗ್‌ಚೇನ್‌ನ ರೂಪದಲ್ಲಿದ್ದಂತಹ ಶತ್ರುಗಳು ಯಾವ ದಿಕ್ಕಿಗೆ ಹೋದರು?"

ಎಂಬ ಆಕೆಯ ಪ್ರಶ್ನೆಗೆ ತತ್ತರಿಸಿ ಹೋದರು ಸೆಂಟ್ರಿಗಳು.

ಅವರಿಗೆ ಪರಿಸ್ಥಿತಿ ಅರ್ಥವಾಗಲು ಮತ್ತೆ ಕೆಲವು ನಿಮಿಷ ಹಿಡಿದವು.

ಅವರ ಪ್ರತ್ಯುತ್ತರ ನ್ಯಾತಾಳಿಗೆ ಸಮಾಧಾನ ತರಲಿಲ್ಲ.

ತಾನು ಬೇಗನೆ ಹೊರಡಬೇಕು. ಅವರು ತಮ್ಮನ್ನು ಬಿಟ್ಟು ಹೋಗಿ ಈಗಾಗಲೇ ಒಂದೂವರೆ ಗಂಟೆಯ ಮೇಲಾಗಿದೆ.

ಬೇಗಬೇಗನೆ ತನ್ನ ಮನೆಯಡೆಗೆ ಓಡಿದಳು ನ್ಯಾತಾ.

# 8

ಅದೇನೂ ಅಷ್ಟು ದೊಡ್ಡದಾದ ರೈಲ್ವೇ ಸ್ಟೇಷನ್ ಅಲ್ಲ. ಒಂದು ಚಿಕ್ಕ ಬಿಲ್ಡಿಂಗ್ ಮಾತ್ರವೇ ಅಲ್ಲಿದೆ. ರೈಲು ಅಲ್ಲಿ ಬಂದು ನಿಲ್ಲುವುದು ಕೆಲವು ನಿಮಿಷಗಳ ಮಾತ್ರ.

ಬಹಳ ವಿಶಾಲವಾಗಿದೆ ಆ ಸ್ಟೇಷನ್.

ಬರೀ ಸಿಂಗಲ್ ಲೈನಾದುದರಿಂದ ಒಂದೇ ಒಂದು ಪ್ಲಾಟ್ ಫಾರಂ ಇದೆ.

ಆದರೆ ಸ್ಟೇಷನ್ನಿನ ಹೊರಗಡೆ ಐವರು ಸೈನಿಕರು ಮಹೇಶ ಮತ್ತು ವಿಶ್ವನಾಥ್‌ರ ದೃಷ್ಟಿಗೆ ಬಿದ್ದರು.

ತಮ್ಮ ತಲೆಯ ಮೇಲಿರುವ ಫೆಲ್ಟ್ ಹ್ಯಾಟನ್ನು ಕೊಂಚ ಕೆಳಗೆ ಎಳೆದು ಕೊಂಡು ಅವರುಗಳಿಗೆ ಅನುಮಾನ ಬಾರದ ರೀತಿಯಲ್ಲಿ ಸ್ಟೇಷನ್ ವೈಟಿಂಗ್ ಹಾಲ್‌ನೊಳಗೆ ಪ್ರವೇಶಿಸಿ ರೈಲ್ವೆ ಚಾರ್ಟ್ ಹತ್ತಿರ ತಮ್ಮ ತಲೆಯನ್ನು ನಿಧಾನವಾಗಿ ಮೇಲೆತ್ತಿದರು.

"ಚೀನಾಂಗ್"

ಈ ಸಿಟಿಯೆಡೆಗೆ ಹೋಗುವ ರೈಲು ಮತ್ತಿನ್ನು ಮುಕ್ಕಾಲು ಗಂಟೆಗೆ ಇದೆ.

ಆ ಸ್ಟೇಷನ್‌ನಲ್ಲಿ ಇವರಿಬ್ಬರೇ ಅಲ್ಲದೆ ಮತ್ತನ್ನಹತ್ತು ಹದಿನೈದು ಜನ ಸಿವಿಲಿಯನ್ಸ್ ಸಹ ವೈಟ್ ಮಾಡುತ್ತಿದ್ದಾರೆ.

ನಂತರ ಟಿಕೇಟ್ ಕೌಂಟರಿನ ಹತ್ತಿರ ಹೋಗಿ ಟಿಕೇಟನ್ನು ಕೇಳಿದ ಮಹೇಶ್.

"ಪ್ಲೀಸ್ ಶೋ ಯುವರ್ ಐಡೆಂಟಿಟಿ ಕಾರ್ಡ್ ಕಾಮ್ರೇಡ್."

ಎಂದನು ಟಿಕೇಟನ್ನು ಇಷ್ಯೂ ಮಾಡುವ ವ್ಯಕ್ತಿ.

ತ್ಯಾಂಗ್‌ಚೀನ್ ಕಾರ್ಡನ್ನು ಆತನ ಮುಂದಿರಿಸಿದ.

'ಚೈನಾ ಮಿಲಿಟರಿ ಇಂಟೆಲಿಜೆನ್ಸ್....'

ಇನ್ನು ಮುಂದಿರುವ ಅಕ್ಷರಗಳನ್ನು ನೋಡುತ್ತಲೇ ಆತ ಕಂಗಾಲಾಗಿ ಹೋದ.

ಅಲ್ಲಿರುವ ಫೋಟೋವಿನ ಕಡೆಯಾಗಲಿ, ಮುಂದೆ ನಿಂತಿರುವ ಮಹೇಶನ ಕಡೆಯಾಗಲೀ ನೋಡದೆ ಟಿಕೇಟನ್ನು ಪಂಚ್ ಮಾಡಿ ಆತನ ಕೈಗಿರಿಸಿದ.

ಮಿಲಿಟರಿ ಇಂಟೆಲಿಜೆನ್ಸ್‌ಗೆ ಎಷ್ಟು ಹೆಸರಿದೆಯೆಂದು ಮಹೇಶನಿಗೆ ತಿಳಿಯದೇನಿಲ್ಲ.

ಅಲ್ಲಿಯವರೆವಿಗೂ ಅವರಿಬ್ಬರೆಡೆಗೆ ಗುರಾಯಿಸುತ್ತಿದ್ದ ಸೈನಿಕನೊಬ್ಬ ಮಹೇಶನ ಕೈಯಲ್ಲಿನ ಟಿಕೇಟನ್ನು ಕಂಡು ತಣ್ಣಗಾದ.

ಆತನ ಕೈಯಲ್ಲಿದ್ದುದು ಫಸ್ಟ್ ಕ್ಲಾಸ್ ಟಿಕೇಟ್‌ಗಳವು.

ಅಂದರೆ ಅವರುಗಳು ಮಿಲಿಟರಿ ಅಧಿಕಾರಿಗಳೇ ಆಗಿರಬೇಕು.

ಮತ್ತನ್ನೊಂದು ಬಾರಿಯೂ ಸಹ ಅವರುಗಳೆಡೆಗೆ ಅಪ್ಪಿತಪ್ಪಿಯೂ ಸಹ ತನ್ನ ಕಣ್ಣೆತ್ತಿ ನೋಡಲಿಲ್ಲ.

ಅಲ್ಲೇ ಸಮೀಪದಲ್ಲಿರುವ ಅಂಗಡಿಯಲ್ಲಿ ಚೈನಾ ಪೇಪರೊಂದನ್ನು ಕೊಂಡು ಮೂಲೆಯಲ್ಲಿರುವ ಕುರ್ಚಿಯಲ್ಲಿ ಕುಳಿತು ಪೇಪರನ್ನು ಓದುತ್ತಿರುವಂತೆ ನಟಿಸಲಾರಂಭಿಸಿದರು ಮಹೇಶ ಮತ್ತು ವಿಶ್ವನಾಥ್.

° ° ° °

"ಟ್ರಿನ್....ಟ್ರಿನ್"

ವಿಚಿತ್ರವಾದ ಶಬ್ದದಿಂದ ಅರಚಿಕೊಳ್ಳತೊಡಗಿತು ಟೇಬಲ್ ಮೇಲಿನ ಫೋನ್.

ಪಕ್ಕದಲ್ಲಿದ್ದ ಯಾರೊಂದಿಗೋ ಮಾತನಾಡುತ್ತಿದ್ದ ಸೆಕ್ಯೂರಿಟಿ ಕಂಟ್ರೋಲರ್ ಕೈಯನ್ನು ಚಾಚಿ ರಿಸೀವರನ್ನು ತೆಗೆದುಕೊಂಡ.

"ಯಸ್....ರೋಹಿಂಗ್ ರೈಲ್ವೇ ಸ್ಟೇಷನ್ ಸೆಕ್ಯೂರಿಟಿ ರೂಮ್"

ಮೌತ್ ಪೀಸ್‌ನಲ್ಲಿ ಹೇಳಿದ ಸೆಕ್ಯೂರಿಟಿ ಕಂಟ್ರೋಲರ್

"..............."

ಆ ಬದಿಯಿಂದ ಕೇಳಿ ಬರುತ್ತಿರುವ ಮಾತುಗಳನ್ನು ಕೇಳುತ್ತಲೇ ಆಶ್ಚರ್ಯ ಚಕಿತನಾದನಾತ.

"ಆದರೆ ಯಾರೂ ಇತ್ತ ಕಡೆಗೆ ಬರಲಿಲ್ಲವಲ್ಲ ?"

ಎಂದನಾತ

"..............."

"ವ್ಹಾಟ್ ? ಹಾಗಾ ? ಈಗ ತಾನೇ ವಾಂಟನ್‌ಗೆ ಹೋಗುವ ಎಕ್ಸ್‌ಪ್ರೆಸ್ ಕನೆಕ್ಷನ್ ರೈಲು ಹೊರಟುಹೋಯಿತು"

"... ..........."

"ಹಾಗೇ ಆಗಲಿ ಕಂಡು ಹಿಡೀತೀನಿ"

ರಿಸೀವರನ್ನು ಕ್ರೆಡಿಲ್ ಮಾಡಿ, ಪಕ್ಕದಲ್ಲಿದ್ದಂತಹ ವ್ಯಕ್ತಿಯ ಹತ್ತಿರ ಎಸ್‌ಕ್ಯೂಸ್ ಹೇಳುತ್ತಿರುವ ಹಾಗೆ ನೋಡಿ ಹೊರಗೋಡಿದನು ಸೆಕ್ಯೂರಿಟಿ ಕಂಟ್ರೋಲರ್.

ಸ್ಟೇಷನ್ ಮಾಸ್ಟರ್ ಆಗ ತಾನೇ ರಿಲ್ಯಾಕ್ಸಿಂಗ್‌ಗಾಗಿ ಕುರ್ಚಿಯಲ್ಲಿ ಕುಳಿತುಕೊಳ್ಳಹೋಗುತ್ತಿದ್ದಂತೆಯೇ ಸೆಕ್ಯೂರಿಟಿ ಕಂಟ್ರೋಲರ್ ಹೇಳಿದ್ದನ್ನು ಕೇಳಿ ತತ್ತರಿಸಿ ಮೇಲೆದ್ದ.

ಇಬ್ಬರೂ ಹೊರ ಹೊರಟರು.

ಹೊರಗಿನ ಗೇಟಿನ ಹತ್ತಿರ ಎನ್‌ಕ್ವೈಯರಿ ಮಾಡಿದರು ಆದರೆ ಅವರಿಗೆ ಅನುಮಾನಾಸ್ಪದವಾಗಿ ಯಾರೂ ಕೋರಿಬರಲಿಲ್ಲವೆಂದು ಉತ್ತರ ಬಂದಿತು

ಆದರೆ ಬುಕಿಂಗ್ ಕ್ಲರ್ಕ್ ಹೇಳಿದ ವಿಷಯ ಅವರಿಬ್ಬರನ್ನು ಸ್ತಂಭೀಭೂತರನ್ನಾಗಿ ಮಾಡಿತು.

"ಅವರುಗಳ ಹೆಸರನ್ನು ನೋಡಲಿಲ್ಲವಾದರೂ ಇಂಟಲಿಜೆನ್ಸ್ ಮನುಷ್ಯರಿಬ್ಬರೂ ಫಸ್ಟ್ ಕ್ಲಾಸ್ ಟಿಕೇಟನ್ನು ಪರ್‌ಚೇಸ್ ಮಾಡಿದರು ನಾನು ಭಯಾತುರದಿಂದ ಅವರುಗಳ ಹೆಸರನ್ನು ನೋಡಲಿಲ್ಲ."

ಗ್ರಂಥ ಸ್ವಾಮ್ಯ ವಿಭಾಗ
ಕೇಂದ್ರ ಗ್ರಂಥಾಲಯ
ಬೆಂಗಳೂರು
894.814 308 72
ANA N 72

"ಅವರೇ! ಆ ಇಬ್ಬರೇ ಅವರಾಗಿರುತ್ತಾರೆ. ಕಮಾನ್, ತಕ್ಷಣವೇ ಈ ವಿಷಯವನ್ನು ನೆಕ್ಸ್ಟ್ ಸ್ಟೇಷನ್‌ಗೆ ಫೋನ್ ಮಾಡಬೇಕು"

ಎನ್ನುತ್ತಾ ಚಕಚಕನೆ ಓಡತೊಡಗಿದರು ಸ್ಟೇಷನ್ ಮಾಸ್ಟರ್.

ಸೆಕ್ಯೂರಿಟಿ ಕಂಟ್ರೋಲರ್ ಆತನನ್ನು ಅನುಸರಿಸುತ್ತಾ ಹೋದ.

• • •

ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟ್‌ನಲ್ಲಿ ಇರುವ ಬರ್ತ್‌ಗಳು ಬಹಳ ಸಮಯದವರೆಗೆ ಖಾಲಿಯಾಗಿ ಉಳಿದಿತ್ತು.

ಅಲ್ಲಿ ಇರುವುದು ವಿಶ್ವನಾಥ್ ಮತ್ತು ಮಹೇಶರಿಬ್ಬರೇ.

ಕೆಳಗಿರುವ ಬರ್ತ್‌ಗಳ ಮೇಲೆ ಒಬ್ಬರಿಗೊಬ್ಬರು ಎದುರುಬದುರು ಮೌನದಿಂದ ಕುಳಿತುಕೊಂಡಿದ್ದಾರೆ.

ಅವರಲ್ಲಿನ ಆಲೋಚನೆಗನುಗುಣವಾಗಿ ರೈಲಿನ ಕದಲುವಿಕೆಗೆ ಅತ್ತಿತ್ತ ತೂಗಾಡುತ್ತಿದ್ದಾರೆ.

"ರೈಲಿನ ವೇಗ ಕೊಂಚವಾಗಿ ಕಡಿಮೆಯಾಯಿತು.

"ಅಂದ ಹಾಗೆ ಯಾವುದೋ ಸ್ಟೇಷನ್ ಹತ್ತಿರ ಬರುತ್ತಿರುವಂತಿದೆ"

ಎಂದ ಮಹೇಶ.

ಕಿಟಕಿಯೊಳಗಿಂದ ಇಬ್ಬರೂ ಹೊರಗೆ ನೋಡಿದರು.

ದೂರದಲ್ಲಿ ಅಸ್ಪಷ್ಟವಾಗಿ ಯಾವುದೋ ಒಂದು ಸ್ಟೇಷನ್ ತೋರಿ ಬರುತ್ತಿದೆ.

"ನಮ್ಮಗಳ ವಿಷಯ ಇಷ್ಟೊತ್ತಿಗಾಗಲೇ ಅವರಿಗೆ ತಿಳಿದಿರುತ್ತದೆಯೋ ?"

"ಹೇಳಲಿಕ್ಕಾಗುವುದಿಲ್ಲ. ನ್ಯಾತಾ ಸಾಮಾನ್ಯಳಲ್ಲ. ಆದುದರಿಂದ ನಾವು ಈಗಿಂದೀಗಲೇ ಪ್ರಿಕಾಶನ್ ತೆಗೆದುಕೊಳ್ಳುವಾ"

ಇಬ್ಬರೂ ಕಿಟಕಿಯಿಂದ ಹೊರಬಿದ್ದು ರೈಲಿನ ಟಾಪ್ ಮೇಲೆ ಸೇರಿಕೊಂಡು ಬೋರಲಾಗಿ ಬಿದ್ದರು.

ರೈಲಿನ ವೇಗ ಕಡಿಮೆಯಾಗಿರುವುದರಿಂದ ಅವರುಗಳಿಗೆ ಯಾವ ಅಪಾಯವೂ ಸಂಭವಿಸುವುದಿಲ್ಲವೆಂದು ಗೊತ್ತು.

ರೈಲ್ವೆ ಸ್ಟೇಷನ್ ಸಮೀಪಿಸುತ್ತಿರುವಂತೆಯೇ ಪ್ಲಾಟ್ ಫಾರಂನ ಮೇಲೆ ಅಡಿಗೊಬ್ಬರಂತೆ ನಿಂತಿರುವ ಸೈನಿಕರನ್ನು ನೋಡುತ್ತಲೇ ನ್ಯಾತಾ ತಪ್ಪಿಸಿಕೊಂಡಿರುವಳೆಂದು ಅವರಿಬ್ಬರಿಗೂ ಅರ್ಥವಾಗಿಬಿಟ್ಟಿದೆ.

ಟಾಪ್ ಮೇಲಿರುವ ತಾವುಗಳು ಅವರುಗಳ ಕಣ್ಣಿಗೆ ಬೀಳುವ ಅವಕಾಶ ಬಹಳ ಕಡಿಮೆ.

ರೈಲು ನಿಲ್ಲುತ್ತಿರುವಂತೆಯೇ ಸೈನಿಕರೆಲ್ಲರೂ ಅಪಾರ್ಟ್‌ಮೆಂಟ್ ನೊಳಗೆ ಸೇರತೊಡಗಿದರು

ಪ್ರತಿ ಪ್ರಯಾಣಿಕನ ಐಡೆಂಟಿಟಿ ಕಾರ್ಡನ್ನು ಕ್ಷುಣ್ಣವಾಗಿ ಚೆಕ್ ಮಾಡದ ಹೊರತು ಯಾರನ್ನು ಬಿಡಲಾರರು.

ರೈಲು ಅಲ್ಲಿ ನಿಲ್ಲುವ ಸಮಯಕ್ಕಿಂತ ಕಾಲು ಗಂಟೆ ಹೆಚ್ಚಾಗಿಯೇ ನಿಂತಿದೆ ಅಲ್ಲಿ

ಆ ರೈಲು ಹೊರಡುತ್ತಲೇ ಸೆಕ್ಯೂರಿಟಿ ಕಂಟ್ರೋಲರ್ ಸ್ಟೇಷನ್ ಮಾಸ್ಟರ್‌ನ ಹತ್ತಿರಕ್ಕೆ ಓಡೋಡಿ ಹೋದ.

"ಅವರಿಬ್ಬರೂ ಎಲ್ಲೂ ತೋರಿಬರಲಿಲ್ಲ ಹಾದಿ ಮಧ್ಯದಲ್ಲೆಲ್ಲೋ ಕೆಳಗೆ ಹಾರಿ ತಪ್ಪಿಸಿಕೊಂಡಿರುವಂತಿದೆ"

# 9

ಆ ರೈಲು ಔಟರ್ ಸಿಗ್ನಲನ್ನು ಸಮೀಪಿಸುತ್ತಿರುವಂತೆಯೇ ಮತ್ತೆ ರೈಲಿನ ಕಂಪಾರ್ಟ್‌ಮೆಂಟನೊಳಗೆ ಸೇರಿಕೊಂಡರು ವಿಶ್ವನಾಥ್ ಮತ್ತು ಮಹೇಶ.

ಐದು ನಿಮಿಷ ಕಳೆಯುವಷ್ಟರಲ್ಲೇ ಯಾರೋ ಡೋರಿನ ಮೇಲೆ ಟಾಪ್ ಮಾಡಿದರು.

ಒಬ್ಬರಿಗೊಬ್ಬರು ಮುಖವನ್ನು ನೋಡಿಕೊಂಡು–

"ಯಾರು....?"

ಎಂದು ಚೈನಾ ಭಾಷೆಯಲ್ಲಿ ಕೇಳಿದ ವಿಶ್ವನಾಥ್.

"ಕಂಡಕ್ಟರ್ ಕಾಮ್ರೇಡ್, ಊಟದ ಆರ್ಡರ್‌ಗಾಗಿ ಬಂದಿರುವೆ"

ಎನ್ನುತ್ತಾ ಕಂಡಕ್ಟರ್‌ನ ಕಂಠಸಿರಿ ಕೇಳಿ ಬಂತು.

ಆತನ ಕಂಠ ಈ ಇಬ್ಬರಿಗೂ ಬಹಳ ಪರಿಚಯವಿದೆ.

ವಿಶ್ವನಾಥ್ ಹೋಗುತ್ತಿರುವ ಮಹೇಶನನ್ನು ಹಿಡಿದು ನಿಲ್ಲಿಸಿ, ಡೋರಿನ ಹತ್ತಿರಕ್ಕೆ ಕೊಂಚ ಮಾತ್ರವೂ ಶಬ್ದ ಮಾಡದೆ ನಡೆದು ಸ್ವಲ್ಪ ಮಾತ್ರ ತೆರೆದು ನೋಡಿದ

ಹೊರಗೆ ಅತ್ತಿತ್ತ ನೋಡುತ್ತಾ ನಿಂತಿರುವ ಕಂಡಕ್ಟರ್ ಬಂದ.

ಈಗ ಧೈರ್ಯದಿಂದ ಪೂರ್ತಿಯಾಗಿ ಬಾಗಿಲನ್ನು ತೆರೆದನು ವಿಶ್ವನಾಥ್.

ಆ ಮರುಕ್ಷಣವೇ ಹೊರಗೆ ಇಬ್ಬರನ್ನು ತಳ್ಳಿಕೊಂಡು ಒಳಗಡಿಯಿರಿಸಿದ ಓರ್ವ ಮಿಲಿಟರಿ ಆಫೀಸರ್

ಆತನ ಕೈಯಲ್ಲಿ ಕಪ್ಪಗೆ ಹೊಳೆಯುತ್ತಿರುವ ಪಾಯಿಂಟ್ ಥಾರ್ಟಿಫೋರ್ ಕಾಲಿಬರ್ ರಿವಾಲ್ವರನ್ನು ನೋಡನೋಡುತ್ತಲೇ ತಾನು ಮಾಡಿದ ತಪ್ಪಿನ ಅರಿವಾಯಿತು ವಿಶ್ವನಾಥ್‌ಗೆ.

"ಹ್ಯಾಂಡ್ಸಪ್...."

ಕರ್ಕಶವಾಗಿ ಅರಚಿದ ಆ ಆಫೀಸರ್.

ಮಹೇಶ ಮತ್ತು ವಿಶ್ವನಾಥ್‌ರಿಬ್ಬರೂ ಮೌನದಿಂದ ಕೈಗಳೆರಡನ್ನೂ ಮೇಲಕ್ಕೆತ್ತಿದರು.

ಅವರಿಬ್ಬರ ಮೇಲಿಂದ ದೃಷ್ಟಿಯನ್ನು ಕೊಂಚ ಮಾತ್ರವೂ ಸಡಿಲಗೊಳಿಸದೆ–

"ನೀನಿನ್ನು ಹೊರಡಬಹುದು. ರೈಲು ನಿಲ್ಲುತ್ತಲೇ ರಿಪೋರ್ಟ್ ಮಾಡುವುದನ್ನು ಮರೆಯಬೇಡ"

ಎಂದನು ಅಲ್ಲಿ ನಿಂತಿದ್ದಂತಹ ಕಂಡಕ್ಟರೊಂದಿಗೆ.

ಆ ಕಂಡಕ್ಟರ್ ಬಾಗಿಲನ್ನು ಮುಚ್ಚಿ ತನ್ನ ಪಾಡಿಗೆ ತಾನು ಹೊರಟು ಹೋದ.

"ಸಿಡೌನ್...."

ಎದುರುಗಿರುವ ಬರ್ತನ್ನು ತೋರಿಸುತ್ತಾ ಹೇಳಿದನಾತ.

ವಿಶ್ವನಾಥ್, ಮಹೇಶರಿಬ್ಬರೂ ಕುಳಿತುಕೊಳ್ಳ ಹೊರಟರು.

"ಆಂ....! ಆಂ....! ಆ ಕೈಗಳನ್ನು ಮಾತ್ರ ಕೆಳಗಿಳಿಸಬೇಡಿ. ನಿಮ್ಮಗಳ ಬಗ್ಗೆ ನನಗೆ ಬಹಳ ಚೆನ್ನಾಗಿ ಗೊತ್ತು"

ಆತನು ಎರಡನೆಯ ಬರ್ತ್ ಅಂದರೆ ಅವರಿಗೆದುರಾಗಿರುವ ಬರ್ತ್‌ನ ಅಂಚಿನಲ್ಲಿ ಕೊಂಚ ದೂರದಲ್ಲಿ ಕುಳಿತುಕೊಂಡ.

"ನೌ....ಟೆಲ್ ಮಿ! ನೀವುಗಳು ಇಲ್ಲಿಗೆ ಯಾವ ಕೆಲಸದ ಮೇರೆಗೆ ಬಂದಿರುವಿರಿ?"

ಬಹಳ ಕೂಲಾಗಿ ಕೇಳಿದನಾತ.

ಮಹೇಶನ ನೋಟ ಆತನ ರಿವಾಲ್ವರಿನ ಮೇಲೆ ಕೇಂದ್ರೀಕರಿಸಿದೆ.

ಸೇಫ್ಟಿ ಕ್ಯಾಚ್ ರಿಲೀಸ್ ಮಾಡಲ್ಪಟ್ಟಿದೆ.

ಯಾವ ಕ್ಷಣದಲ್ಲಾದರೂ ಅದು ಗುಂಡನ್ನು ಉಗುಳಬಹುದು.

ಅದೂ ಅಲ್ಲದೆ ಅದನ್ನು ಸ್ಥಿರವಾಗಿ ಹಿಡಿದುಕೊಂಡಿದ್ದಾನೆ.

ಕಣ್ಣು ರೆಪ್ಪೆಗಳನ್ನು ಮಿಟುಕಿಸದೆ ನೇರ ನೋಟದಿಂದ ಆತನ ಕಣ್ಣಿನೊಳಗೆ ನೋಡುತ್ತಾ ಕುಳಿತುಕೊಂಡಿದ್ದಾನೆ ಬ್ರಿಗೇಡಿಯರ್ ವಿಶ್ವನಾಥ್.

ಆತನಿಗೆ ತಾವು ಸ್ಲಿಪ್ ಕೊಟ್ಟು ತಪ್ಪಿಸಿಕೊಳ್ಳಬೇಕೆಂದು ಆಲೋಚಿಸುತ್ತಿದ್ದಾನೆ.

ಹಾಗೆ ಸಾದರೂ ಸ್ಲಿಪ್ ಕೊಡದೆ ಹೋದರೆ ಮುಂದೆ ಬರುವ ಸ್ಟೇಷನ್‌ನಲ್ಲಿ ತಮ್ಮನ್ನು ಬಂಧಿಸಿಯೇ ತೀರುತ್ತಾರೆ

ತಾವು ಬಂದಿರುವ ಕೆಲಸ ನಿಂತು ಹೋದಂತಾಗುತ್ತದೆ. ಆರಂಭದಲ್ಲೇ ಅಂತಿಮವಾಗುತ್ತದಲ್ಲ ಎಂಬ ಆಲೋಚನೆ ಬೇರೆ

ಈತನಿಂದ ಹೇಗೆ ತಾನೇ ತಪ್ಪಿಸಿಕೊಳ್ಳಬೇಕು ?

ರೈಲಿನ ಕದಲುವಿಕೆಗೆ ಮೂವರ ಶರೀರವೂ ಮೆಲ್ಲಮೆಲ್ಲನೆ ಷೇಕ್ ಆಗುತ್ತಿದೆ.

ಕಿಟಕಿಯ ಪಕ್ಕದಲ್ಲೇ ಮಹೇಶ ಕುಳಿತುಕೊಂಡಿದ್ದಾನೆ ಆತನಿಗೆಡ ಭಾಗದಲ್ಲಿ ವಿಶ್ವನಾಥ್ ಕುಳಿತುಕೊಂಡಿದ್ದಾನೆ.

"ಮೇ....ಐ ಸ್ಮೋಕ್ ?"

ಮೆಲು ದನಿಯಲ್ಲಿ ಕೇಳಿದ ಮಹೇಶ.

ಚುರುಕು ನೋಟವನ್ನು ಆತನೆಡೆಗೆ ಎಸೆದು ತಲೆಯಲ್ಲಾಡಿಸಿದ ಆತ

"ಡೋಂಟ್ ಟ್ರೈ ಎನಿ ಟ್ರಿಕ್ಸ್ ! ನಿಧಾನವಾಗಿ ಸಿಗರೇಟ್ ಪ್ಯಾಕೇಟನ್ನು ಹೊರಗಡೆಗೆ ತೆಗಿ. ಆ ಪ್ಯಾಕೆಟ್ ನನಗೆ ಕಾಣಿಸಬೇಕು"

ಆತ ಹೇಳಿದ ಹಾಗೆಯೇ ಮಾಡಿದ ಮಹೇಶ.

ಎಡಗೈಯನ್ನು ಕಿಟಕಿಯ ಮೇಲಿರಿಸಿ, ಬಲಗೈಯನ್ನು ಅತಿ ನಿಧಾನವಾಗಿ ಜೇಬಿನೊಳಗೆ ಇಳಿಸಿದ.

ಜೇಬಿನೊಳಗಿಂದ ನಿಧಾನವಾಗಿ ಹೊರ ತೆಗೆಯುತ್ತಿದ್ದಾನೆ.

ಎದುರಿಗಿರುವ ಶತ್ರುವಿನ ನೋಟ ಕೊಂಚ ಮಾತ್ರವೂ ಏಮಾರುವಂತೆ ತೋರುತ್ತಿಲ್ಲ.

ಮಹೇಶನ ಜೇಬಿನೆಡೆಗೆ, ವಿಶ್ವನಾಥನೆಡೆಗೆ ನೋಡುತ್ತಾ ಕುಳಿತಿದ್ದಾನೆ ಆ ಮಿಲಿಟರಿ ವ್ಯಕ್ತಿ.

ಆತನ ಕೈ ಬೆರಳು ಟ್ರಿಗ್ಗರಿನ ಮೇಲೆ ಬಿಗಿಯಾಗಿ ರೆಡಿಯಾಗಿ ಇದೆ.

ಮಹೇಶ ಆತ ಹೇಳಿದ ಹಾಗೆ ಟ್ರಿಕ್ ಮಾಡಿಯೇ ಮಾಡಿದ.

ಎದುರಾಳಿಯ ನೋಟ ತನ್ನ ಬಲಗೈಯ ಮೇಲಿರುವುದೆಂದು ಗೊತ್ತು.

ಆದುದರಿಂದಲೇ ಆತ ತನ್ನ ಎಡಗೈಯಿಂದ ವಿಂಡೋವನ್ನು ಹಿಡಿದ ಜೋರಾಗಿ ಎಳೆದ.

ವಿಂಡೋ 'ಧಡ್' ಎಂಬ ಶಬ್ದದೊಂದಿಗೆ ಮುಚ್ಚಿಕೊಂಡಿತು.

ವಿಶ್ವನಾಥ್ ಈ ಸಮಯವನ್ನು ವ್ಯರ್ಥ ಮಾಡದೆ ತನ್ನ ಕಾರ್ಯಾಚರಣೆಗೆ ಅಣಿಯಾದ.

ಏನಾಗುತ್ತಿದೆ ಎಂದು ಊಹಿಸುವಷ್ಟರಲ್ಲಿಯೇ ಆ ಮಿಲಿಟರಿ ಆಫಿಸರ್ ಕೈ ಜೇರಾಯಿತು.

ಬೂಟು ಕಾಲಿನಿಂದ ಬಿದ್ದಂತಹ ಏಟು ಸುಮ್ಮನೆಯೇ ?

ಆತನ ಪರಿಸ್ಥಿತಿ ಬೊಬ್ಬೆಯಿಡುವಂತಾಯಿತು. ಆದರೆ ಹಾಗೆ ಮಾಡದೆ ಬಾಧೆಯಿಂದ ಮುಲುಗಿದ.

ರಿವಾಲ್ವರ್ ಟ್ರಿಗ್ಗರಿನ ಟಾಪ್‌ಗೆ ತಗುಲಿ ಕೆಳಗೆ ಬಿದ್ದಿತು.

ಊಹಿಸಲಾರದಷ್ಟು ವೇಗದಲ್ಲಿ ಮುಂದಿನ ಬರ್ತ್‌ನ ಮೇಲೆ ಕಿಕ್ ಕೊಟ್ಟು ಆತನ ಪಕ್ಕಕ್ಕೆ ಸೇರಿಕೊಂಡು ಆತನ ಕುತ್ತಿಗೆಯನ್ನು ತನ್ನ ಎಡಗೈನಿಂದ ಲಾಕ್ ಮಾಡಿದ ವಿಶ್ವನಾಥ್.

ಆತನಿಂದ ಬಿಡಿಸಿಕೊಳ್ಳಲು ಕೊಸರಾಡುತ್ತಿರುವಂತೆಯೇ ಮಿಲಿಟರಿ ಆಫೀಸರ್ ತನ್ನ ಬಲಗೈಯನ್ನು ಬಿಗಿದು ಒಂದು ಷಾರ್ಪ್ ಪಂಚನು ವಿಶ್ವನಾಥ್‌ಗೆ ಅಪ್ಲೈ ಮಾಡಿದ.

ಉಸಿರು ಕಟ್ಟಿದಂತಾಯಿತು ವಿಶ್ವನಾಥ್‌ಗೆ.

ಬಹಳ ಯಾತನೆಯಾಯಿತು.

ಆದರೂ ಪಟ್ಟನ್ನು ಬಿಡಲಿಲ್ಲ.

ಅಷ್ಟರಲ್ಲೇ ಮಹೇಶ ಚಕ್ಕನೆ ರಿವಾಲ್ವರನ್ನು ತನ್ನದಾಗಿಸಿಕೊಂಡು ಆ ಮಿಲಿಟರಿ ಆಫೀಸರ್‌ಗೆ ಗುರಿಯಿಟ್ಟ.

ವಿಶ್ವನಾಥ್ ತನ್ನ ಪಟ್ಟನ್ನು ಸಡಿಲಗೊಳಿಸಿದ.

ಮಹೇಶ ಏನನ್ನೋ ಹೇಳುವಷ್ಟರಲ್ಲಿ ರೈಲು ಸ್ಲೋ ಆಯಿತು.

"ಮಹೇಶ್, ಕ್ವಿಕ್. ಮೊದಲೀತನನ್ನು ಬಂಧಿಸಬೇಕು !"

ಎಂದ ವಿಶ್ವನಾಥ್.

ರೈಲು ಸ್ಟೇಷನನ್ನು ಸಮೀಪಿಸುತ್ತಿರುವಂತೆಯೇ ಆತನ ಷರ್ಟನ್ನು ತೆಗೆದು ಮುದ್ದೆಯಂತೆ ಮಾಡಿ ಆತನ ಬಾಯಿಗೆ ತುರುಕಿ, ಕೈ ಕಾಲುಗಳನ್ನು ಬಂಧಿಸಿ, ಓಪನ್ ಕಿಟಕಿಯಿಂದ ಹೊರಗೆ ಧುಮುಕಿದರು ಮಹೇಶ ಮತ್ತು ವಿಶ್ವನಾಥ್.

# 10

ಫೋರ್ತ್ ಸ್ಕ್ವಾಡ್ ಲೀಡರ್ ಜುವಾಂಗ್‌ನೊಂದಿಗೆ ಮುಂದಕ್ಕೆ ನಡೆಯುತ್ತಾ ಮಿಕ್ಕ ಸ್ಕ್ವಾಡ್‌ಗೆ ಅಲ್ಲೇ ನಿಲ್ಲುವಂತೆ ಆದೇಶವಿತ್ತುದರಿಂದ ಅಟೆನ್‌ಷನ್‌ನಿಂದ ಅಲ್ಲೇ ಉಳಿದರು.

ಹಿಮಾಲಯನ್ ರೇಂಜಸ್‌ನಲ್ಲಿರುವ ಒಂದು ಚಿಕ್ಕ ಕಲ್ಲು ಬಂಡೆಯ ಮೇಲೆ ನಿಂತುಕೊಂಡು ಸುತ್ತಲೂ ವೀಕ್ಷಿಸುತ್ತಿದ್ದ ಅವರಿಗೆ ದೂರದಲ್ಲಿ ಕಪ್ಪನೆಯ ಹೊಗೆಯಂತೆ ತೋರುವ ಆಕಾರವೊಂದು ತೋರಿ ಬಂತು.

ಬೆಳ್ಳನೆಯ ಮಂಜಿನೊಂದಿಗೆ ಕಪ್ಪು ಬೊಟ್ಟನ್ನಿಟ್ಟಂತೆ ತೋರಿ ಬರುತ್ತಿರುವ ಆ ಕಪ್ಪನೆಯ ಹೊಗೆಯನ್ನು ನೋಡುತ್ತಲೇ ಆತನಿಗೆ ಆಶ್ಚರ್ಯವುಂಟಾಯಿತು.

ಯಾವುದಾದರೂ ಅಪಾಯ ಸಂಭವಿಸಿದೆಯೇ ?

ಮಿಲಿಟರಿ ಹೆಲಿಕ್ಯಾಪ್ಟರ್ ಯಾವುದಾದರೂ ಆಕ್ಸಿಡೆಂಟ್‌ಗೆ ಈಡಾಗಿದೆಯಾ ?

ತಡಮಾಡದೆ ತನ್ನ ಅನುಚರರೊಂದಿಗೆ ಆ ಹೊಗೆಯಿರುವೆಡೆಗೆ ಚಕಚಕನೆ ಹೆಜ್ಜೆಯನ್ನಾಕಿದ.

ಆ ಹೊಗೆ ಇರುವ ಪ್ರದೇಶವನ್ನು ಕಂಡು ಹಿಡಿದು ಅಲ್ಲಿಗೆ ಸೇರುವಷ್ಟರಲ್ಲಿ ಸುಮಾರು ಅರ್ಧ ಗಂಟೆಯ ಮೇಲೆಯೇ ಹಿಡಿಯಿತು.

ಬೆಟ್ಟದ ಅಂಚಿನಲ್ಲಿರುವ ಒಂದು ಗುಹೆಯಂತಿರುವ ಪ್ರದೇಶದಿಂದ ಹೊರ ಬರುತ್ತಿರುವ ಕಪ್ಪನೆಯ ಹೊಗೆಯನ್ನು ನೋಡುತ್ತಲೇ ಅವರುಗಳಿಗೆ ಬಾಯಿಂದ ಮಾತೇ ಹೊರಡಲಿಲ್ಲ.

ಅಲ್ಲಿ ಯಾರೋ ಇರುವರೆಂದು ತಿಳಿಯುವುದು ಅವರುಗಳಿಗೆ ಬಹಳ ಹೊತ್ತು ಹಿಡಿಯಲಿಲ್ಲ.

ಬೇಗಬೇಗನೆ ಅಲ್ಲಿಗೆ ನಡೆದು ಹೋಗಿ ನೋಡಿದರು.

ಬಹಳವಾಗಿ ಉರಿದು ಹೋಗಿರುವ ಮರದ ಹಲಗೆಯಿಂದ ಮಾಡಲ್ಪಟ್ಟ ಬಾಗಿಲು. ಮರದಿಂದಲೇ ತಯಾರಿಸಲ್ಪಟ್ಟ ಮನೆ.

ಆ ಮನೆಯ ಸುತ್ತಲೂ ಭಯಂಕರವಾಗಿ ಸುತ್ತುವರೆದಿರುವ ಕಪ್ಪನೆಯ ಹೊಗೆ ಅವರುಗಳಿಗೆ ತೋರಿಬಂತು.

ಒಂದು ವೇಳೆ ಯಾರಾದರೂ ಇದ್ದರೂ ಆ ಹೊಗೆಯಿಂದ ಉಸಿರಾಡಲು ಸಾಧ್ಯವಾಗದೆ ಸಾಯುವುದಂತು ಖಾಯಂ

ಹಾಗೂ ಹೀಗೂ ಮಾಡಿ ಕಷ್ಟಪಟ್ಟು ಕೆಲವು ಜನರು ಒಳಗೆ ಹೋದರು

ಅವರುಗಳ ಕಾಲುಗಳಿಗೆ ಯಾರದೋ ಶರೀರ ತಗುಲಿದಂತೆ ಭಾಸವಾಯಿತು

ತಕ್ಷಣ ಕೆಳಗೆ ನೋಡಿ ಒಂದು ನಿಮಿಷ ಸಹ ತಡಮಾಡದೆ ಆ ಮನುಷ್ಯನನ್ನು ಹೊರಗೆತ್ತಿಕೊಂಡು ಬಂದರು.

ಪ್ರಜ್ಞಾ ಶೂನ್ಯನಾಗಿರುವ ಆ ಮನುಷ್ಯನನ್ನು ನೋಡುತ್ತಲೇ ತತ್ತರಿಸಿ ಹೋದ ಜುವಾಂಗ್.

ಆ ಪ್ರಜ್ಞಾ ಶೂನ್ಯನಾದ ವ್ಯಕ್ತಿಯೇ ತ್ಯಾಂಗ್ ಚೀನ್ !

ಯಾರು ಈ ಕೆಲಸವನ್ನು ಮಾಡಿದ ನೀಚರು ?

ಈ ಮನುಷ್ಯ ಏಕೆ ಇಲ್ಲಿದ್ದಾನೆ ?

ಬಹಳಷ್ಟು ಪ್ರಶ್ನೆಗಳು ಜುವಾಂಗ್‌ನ ತಲೆಯನ್ನು ಕೊರೆಯಿತು.

ಆದರೆ ತ್ಯಾಂಗ್‌ಚೀನ್‌ಗೆ ಪ್ರಾಣ ಹೋಗಿರಲಿಲ್ಲ.

ಬೇಗಬೇಗನೆ ಪ್ರಥಮ ಚಿಕಿತ್ಸೆಯನ್ನು ಮಾಡಿದ ಜುವಾಂಗ್.

ಆ ನಂತರ ಮನೆಯಲ್ಲಿ ಯಾರಾದರೂ ಇರುವರೇನೋ ಎಂದು ಪರೀಕ್ಷಿಸಿ ತ್ಯಾಂಗ್‌ಚೀನ್‌ನನ್ನು ಎತ್ತಿಕೊಂಡು ಹಿಂದಕ್ಕೆ ನಡೆದರು.

ಪ್ರಜ್ಞೆಯನ್ನು ಕಳೆದುಕೊಂಡ ತ್ಯಾಂಗ್‌ಚೀನ್ ಕೆಲವು ನಿಮಿಷಗಳ ನಂತರ ಈ ಲೋಕಕ್ಕೆ ಬಂದ

ಆತ ಕಣ್ಣು ತೆರೆದಾಗ ಆತನ ದೃಷ್ಟಿಗೆ ಬಿದ್ದದ್ದು ಆತನ ಪ್ರೀತಿಯ ನ್ಯಾತಾ

ತ್ಯಾಂಗ್ ಚೀನ್ ಕಣ್ಣು ತೆರೆದಿದ್ದನ್ನು ಕಂಡು ಸಮಾಧಾನದ ಉಸಿರನ್ನೆಳೆದುಕೊಂಡಳು.

ಇದ್ದಕ್ಕಿದ್ದಂತೆ ಏನೋ ಜ್ಞಾಪಕಕ್ಕೆ ಬಂದಂತೆ ಬಂದು ಚಕ್ಕನೆ ಮೇಲೆದ್ದು ಕುಳಿತುಕೊಂಡ ಮೇಜರ್ ತ್ಯಾಂಗ್ ಚೀನ್

ಈಗ ಆತನಿರುವುದು ಒಂದು ಚಿಕ್ಕ ಡಿಸ್ಪೆನ್ಸರಿ ರೂಮಿನಲ್ಲಿ.

ನ್ಯಾತಾಳನ್ನು ಹತ್ತಿರಕ್ಕೆ ಕರೆದು ಕಾರನ್ನು ಸಿದ್ಧಪಡಿಸಲೆಂಬಂತೆ ಆದೇಶಿಸಿದ.

"ಅಂದ ಹಾಗೆ....ನಿಮ್ಮ ಆರೋಗ್ಯ ?"

ಮೆಲು ದನಿಯಲ್ಲೇ ನೋವಿನ ಸ್ವರದಲ್ಲಿ ಕೇಳಿದಳಾಕೆ.

"ನನ್ನ ಆರೋಗ್ಯ ಆಮೇಲೆ....ಆ ಬ್ಲಡಿ ರೋಗ್ಸ್ ನನ್ನ ರೂಮನ್ನು ಸರ್ಚ್ ಮಾಡಿದರೇ ?"

ಹೌದೆಂಬಂತೆ ತಲೆಯನ್ನಲ್ಲಾಡಿಸಿದಳು ನ್ಯಾತಾ.

"ಮೈ ಗಾಡ್ !"

ಅರುಚಿಬಿದ್ದ ತ್ಯಾಂಗ್‌ಚೀನ್

"ಆ ಡಾಕ್ಯುಮೆಂಟ್ಸ್ ಅವರುಗಳ ಕೈಗೆ ಸಿಕ್ಕಿತೆಂದರೆ ನಮ್ಮಗಳ ಕತೆ ಮುಗಿದಂತೆಯೇ ! ಹರಿಯಪ್ !"

ಆತನ ಸೆನ್ಸ್ ಆತನನ್ನು ಎಚ್ಚರಿಸಿತು.

ನ್ಯಾತಾ ಎಷ್ಟು ಕೇಳಿಕೊಳ್ಳುತ್ತಿದ್ದರೂ ಅದನ್ನು ತಲೆಗೆ ಹಾಕಿಕೊಳ್ಳದೆ ತಕ್ಷಣ ಕಾರಿನಲ್ಲಿ ಕುಳಿತು ಹೊರಟೇ ಬಿಟ್ಟ ತ್ಯಾಂಗ್‌ಚೀನ್

ನ್ಯಾತಾಳೂ ಸಹ ಆತನನ್ನು ಅನುಸರಿಸಿದಳು

ಆತ ಹೇಳಿದ ಮಾತನ್ನು ಕೇಳಿ ನಂಬಲಾರದವಳಂತೆ ಆತನನ್ನೇ ನೋಡುತ್ತಾ ಉಳಿದಳು

"ಹೌದು ನ್ಯಾತಾ, ಆ ಡಾಕ್ಯುಮೆಂಟ್, ಫುಲ್ ಕಂಪ್ಲೀಟ್ ಆಗಿದೆ.

ಇನ್ನು ಎರಡು ಮೂರು ಲೇಔಟ್ ಹಾಕಿಬಿಟ್ಟರೆ ಆ ಪ್ಲ್ಯಾನ್ ಸಿದ್ಧವಾದ ಹಾಗೆಯೇ !"

ನಿಟ್ಟುಸಿರೊಂದನ್ನು ಹೊರದೂಡುತ್ತಾ ಹೇಳಿದ ತ್ಯಾಂಗ್ ಚೇನ್

"ಈಗೇನಾಗಿದೆ ? ಆ ಪ್ಲಾನ್ ಅವರ ಕೈಗೆ ಸಿಕ್ಕಿದರೇನಾಯ್ತು. ನಾವು ಹೊಸದೊಂದು ಪ್ಲಾನನ್ನು ತಯಾರು ಮಾಡೋಣ. ಇಲ್ಲ ಆ ಪ್ಲಾನನ್ನೇ ಛೇಂಜ್ ಮಾಡುವಾ ?"

"ಆ ವಿಷಯ ಆಮೇಲೆ ಆಲೋಚಿಸಿಕೊಳ್ಳಬಹುದು. ಆದರೆ ನಮ್ಮ ಪ್ಲಾನ್‌ಗೆ ಸಪೋರ್ಟ್ ಆಗಿ ನಮ್ಮ ಸೀಕ್ರೆಟ್ ಸಹ ಅಂದರೆ ಮಿಲಿಟರಿ ಬೇಸಸ್, ಸಪ್ಲೈಸ್ ಅಮ್ಯೂನಿಷನ್ ವಗೈರೆ ಕೋಟ್ ಮಾಡಿರುವೆ. ಅದನ್ನು ನೋಡಿ ನಮ್ಮ ಹೆಡ್ ಕ್ವಾರ್ಟರ್ಸ್ ಅನುಮತಿ ಕೊಡುವುದೆಂದು ಹಾಗೆ ಮಾಡಿರುವೆ"

53159CR

ನ್ಯಾತಾ ಸ್ತಂಭಿತಳಾಗಿ ಆಲಿಸುತ್ತಿದ್ದಾಳೆ

"ಅವರುಗಳು ಅದಕ್ಕಾಗಿ ಬರಲಿಲ್ಲವೆಂದು ತೋರುತ್ತೆ. ಏಕೆಂದರೆ ವಾಂಟಿನ್‌ಗೆ ಹೋಗಿ ಕನೆಕ್ಷನ್ ರೈಲಿನಲ್ಲಿ ಓಡಿಹೋದರೆಂದು ಮೆಸೇಜ್ ತಿಳಿದು ಬಂದಿದೆ. ಇದನ್ನೆಲ್ಲಾ ನೋಡಿದರೆ ಅವರು ಬೇರೆ ಯಾವುದೋ ಉದ್ದೇಶದಿಂದ ಬಂದಿರುವಂತೆ ತೋರುತ್ತದೆ"

ತ್ಯಾಂಗ್‌ಚೇನ್ ಪ್ರಶ್ನಾರ್ಥಕವಾಗಿ ನ್ಯಾತಾಳನ್ನೇ ನೋಡಿದ

"ಹೌದು, ಈ ಡಾಕ್ಯುಮೆಂಟ್ಸ್ ಬಗ್ಗೆ ಅವರಿಗೆ ತಿಳಿಯುವ ಅವಕಾಶವೇ ಇಲ್ಲ. ಹಾಗೇನಾದರೂ ತಿಳಿದರೆ ರಹಸ್ಯವಾಗಿ ಅದನ್ನು ಅಪಹರಿಸಿ ಮತ್ತೆ ಇಂಡಿಯಾಗೆ ಹೊರಟುಹೋಗುತ್ತಿದ್ದರು. ಅವರು ಹಾಗೆ ಮಾಡದೆ ವಾಂಟಿನ್ ನಗರಕ್ಕೆ ಹೋಗುತ್ತಿರುವರೆಂದರೆ ಬೇರೆ ಯಾವುದೋ ಉದ್ದೇಶವಿರಿಸಿಕೊಂಡು ಬಂದಿರುವಂತೆ ತೋರುತ್ತಿದೆ-ನನಗೆ. ಈಗಿಂದೀಗಲೇ ಹೆಡ್ ಕ್ವಾರ್ಟರ್ಸ್‌ನ್ನು ಎಚ್ಚರಿಸಿಬಿಟ್ಟರಾಯಿತು"

ನ್ಯಾತಾ ತನಗೆ ತೋಚಿದ್ದನ್ನು ಹೇಳಿದಳು.

"ಡಾಮಿಟ್ ! ಆ ಕೃಥಾ ಮಾಡಿದ ಕೆಲಸ. ಆತನನ್ನು ಪೀಸ್ ಪೀಸ್ ಮಾಡಿ ಕೊಂದ್ಹಾಕಬೇಕು !"

ಕೋಪಾವೇಶದಿಂದ ಕಟಕಟನೆ ಹಲ್ಲುಗಳನ್ನು ಕಡಿಯುತ್ತಾ ಹೇಳಿದ ತ್ಯಾಂಗ್ ಚೇನ್.

"ಮತ್ತೆ ನಿಮ್ಮ ಪ್ಲಾನನ್ನು ಮರೆತುಹೋದಿರಿ"

ಎಂದು ಜ್ಞಾಪಿಸಿದಳು ನ್ಯಾತಾ.

ಹೀಗೆ ಅವರಿಬ್ಬರೂ ಮಾತನಾಡುತ್ತಿರುವಂತೆಯೇ ತ್ಯಾಂಗ್ ಚೇನ್‌ನ ಕಾರ್ಯಾಲಯವನ್ನು ಸಮೀಪಿಸಿತು ಆ ಕಾರು.

ಚಕ್ಕನೆ ಡೋರನ್ನು ಓಪನ್ ಮಾಡಿ ಒಳಗೋಡಿದ ಮೇಜರ್ ತ್ಯಾಂಗ್ ಚೇನ್.

ಸೀಕ್ರೆಟ್ ಡಾಕ್ಯುಮೆಂಟ್ಸ್‌ಗಳು ಮಾಯವಾಗಿದೆಯೆಂದು ತಿಳಿದ ನ್ಯಾತಾ ಸ್ತಂಭಿತಳಾದಳು.

# 11

ಮಹೇಶ ಮತ್ತು ವಿಶ್ವನಾಥರ ಬಗ್ಗೆ, ಅವರ ಕಾರ್ಯಗಳ ಬಗ್ಗೆ, ಅಂತಿಮ ಕ್ಷಣದಲ್ಲಿ ಅವರಿಬ್ಬರೂ ಸ್ಲಿಪ್ ಕೊಟ್ಟು ತಪ್ಪಿಸಿಕೊಂಡು ಹೋದ ಸಂಘಟನೆಗಳನ್ನು ಕುರಿತು ಒಂದೊಂದು ವಿವರಗಳನ್ನು ತಿಳಿದುಕೊಳ್ಳುವಷ್ಟರಲ್ಲಿ ಮೇಜರ್ ತ್ಯಾಂಗ್ ಚೀನ್‌ಗೆ ಹುಚ್ಚು ಹಿಡಿದಂತಾಯಿತು.

ಕೆಂಡ ತುಳಿದ ಕೋತಿಯ ಹಾಗೆ ಶತಪಥ ತಿರುಗುತ್ತಿದ್ದಾನೆ ಮೇಜರ್ ತ್ಯಾಂಗ್ ಚೀನ್.

ಆತ ಭಯಪಟ್ಟಿದ್ದು ಅದೇ ಆತನ ಲೈಫ್‌ನಲ್ಲಿ ಫಸ್ಟ್ ಟೈಮ್.

ಈ ಪ್ಲಾನ್ ಬಗ್ಗೆ ತ್ಯಾಂಗ್ ಚೀನ್ ಬಹಳವಾಗಿ ಆತುರ ತೋರಿಸಿದ.

ಆತನ ಹೈಯರ್ ಅಥಾರಿಟೀಸ್‌ಗೂ ಸಹ ಅದರ ಮೇಲೆ ಅಷ್ಟಾಗಿ ಆಸಕ್ತಿ ತೋರಿಬರಲಿಲ್ಲ

ಆದರೂ ನಾವು ಕಾವಸ್ಥೆಗೆ ಆ ಪ್ಲಾನ್‌ಗೆ ಅನುಮತಿ ಕೊಟ್ಟರು.

ಈಗ ಆ ಪ್ಲಾನ್ ಶತ್ರುಗಳ ಕೈಲಿ ಸಿಲುಕಿಕೊಂಡಿರುದೆಂದು ತಿಳಿದರೆ ಏನಾಗುತ್ತೆ ?

ತ್ಯಾಂಗ್ ಚೀನ್‌ಗೆ ಆ ವಿಷಯ ಜ್ಞಾಪಿಸಿಕೊಂಡರೇನೆ ಉಸಿರಾಟ ನಿಂತಂತಾಗುತ್ತೆ.

ಹಠಾತ್ತಾಗಿ ಆತನಿಗೊಂದು ವಿಷಯ ಜ್ಞಾಪಕಕ್ಕೆ ಬಂದಿತು.

ಆತುರಾತುರದಿಂದ ನ್ಯಾತಾಳನ್ನು ಕರೆದ.

"ನ್ಯಾತಾ, ನಿನ್ನನ್ನು ಬಂಧಿಸಿದವರು ಇಬ್ಬರಲ್ಲವೆ ?"

"ಹೌದು...."

ಎಂದು ಆಶ್ಚರ್ಯದಿಂದ ಉತ್ತರಿಸಿದಳು

"ಹೊರಗೆ ಕಾವಲಿಗೆ ಯಾರಾದರೂ ಇರುವುದನ್ನು ನೋಡಿದೆಯಾ ?"

"ಇಲ್ಲವಲ್ಲ ! ಹೌದು ಯಾಕೆ ಇದನ್ನೆಲ್ಲಾ ಕೇಳುತ್ತಿರುವಿರಿ ?"

"ಅವರ ಬಗ್ಗೆ ನಿನಗೆ ಅಷ್ಟಾಗಿ ಗೊತ್ತಿರುವುದಿಲ್ಲ. ಅವರು ಐದು ಜನರಿದ್ದಾರೆ. ಇದುವರೆವಿಗೂ ನಮಗೆ ಬಹಳಷ್ಟು ಮಣ್ಣು ಮುಕ್ಕಿಸಿದಾರೆ. ನಮಗೆ ಈಗ ತೋರಿಬರುತ್ತಿರುವುದು ಇಬ್ಬರು ಮಾತ್ರ. ಮಿಕ್ಕ ಮೂವರು ಎಲ್ಲಿರುತ್ತಾರೆ ?"

ಇದನ್ನು ಕೇಳುತ್ತಲೇ ತತ್ತರಿಸಿ ಹೋದಳು ಸ್ವಾತಾ

"ಟೋಟಲಿ ಐವರಿರುವರೇ ? ಮಿಕ್ಕಿನ್ನ ಮೂವರೇನಾದರು ?"

"ಶ್...ನಿನ್ನಿಂದ ರಿಯಾಕ್ಟರ್ ರಹಸ್ಯಗಳೇನಾದರೂ ತಿಳಿದುಕೊಂಡಿರುವರೇ ?"

ಅನುಮಾನದ ನೋಟವನ್ನು ಬೀರುತ್ತಾ ಪ್ರಶ್ನಿಸಿದ ತ್ಯಾಂಗ್‌ಚೀನ್.

ಆತನು ಕೇಳಿದ ಪ್ರಶ್ನೆಗೆ ಉತ್ತರವಾಗಿ ತಲೆಯನ್ನು ಕೆಳಗೆ ಮಾಡಿದಳು ಸ್ವಾತಾ.

"ಕ್ಷಮಿಸಿ ಸಾರ್, ನನ್ನ ಪ್ರಾಣವನ್ನು ಉಳಿಸಿಕೊಳ್ಳುವ ಸಲುವಾಗಿ ಅದನ್ನು ಹೇಳದೆ ಬೇರೆ ವಿಧಿಯಿರಲಿಲ್ಲ. ಆದರೂ ಮುಖ್ಯವಾದ ಸೆಕ್ಯೂರಿಟೀಸ್ ಮಾತ್ರ ಹೊರಗೆಡವಲಿಲ್ಲ. ಅವರುಗಳು ಅಲ್ಲಿ ಹೆಜ್ಜೆಯಿಟ್ಟಾಕ್ಷಣವೇ ಬಂಧನಕ್ಕೊಳಪಡುತ್ತಾರೆ."

ದೃಢವಾಗಿ ಹೇಳಿದಳು ಸ್ವಾತಾ.

ತುಟಿಗಳನ್ನು ಬಿಗಿ ಹಿಡಿದ ತ್ಯಾಂಗ್ ಚೀನ್.

ಬಹಳಷ್ಟು ಆಲೋಚಿಸಿದರೂ ಆತನ ತಲೆಯಲ್ಲಿ ಕೊರೆಯುತ್ತಿರುವುದು ಒಂದೇ....!

'ಅವರು ಆ ನ್ಯೂಕ್ಲಿಯರ್ ರಿಯಾಕ್ಟರನ್ನು ನಾಶ ಮಾಡಲೆಂದೇ ಬಂದಿರುವರು ಅಂದ ಹಾಗೆ ಅದರ ವಿಷಯ ಅವರಿಗೆ ಹೇಗೆ ಗೊತ್ತಾಯ್ತು ?'

ಈ ಪ್ರಶ್ನೆಗೆ ಉತ್ತರ ಬಹಳವಾಗಿ ಆಲೋಚಿಸಿದರೂ ಆತನಿಗೆ ಹೊಳೆಯಲಿಲ್ಲ.

ನ್ಯೂಕ್ಲಿಯರ್ ವಾರ್‌ಗೆ ಸಂಬಂಧಿಸಿದ ಪ್ರಯೋಗಗಳು.

ವೆಪನ್ಸ್‌ಗಳೆಲ್ಲವೂ ಅಲ್ಲಿ ತಯಾರು ಮಾಡಲ್ಪಡುತ್ತಿ.

ಈ ವಿಷಯವನ್ನು ಎಷ್ಟೇ ರಹಸ್ಯವಾಗಿಸಿದರೂ ಶತ್ರುಗಳಿಗೆ ಹೇಗೋ ತಿಳಿದುಬಿಟ್ಟಿದೆ

ಹಾಗಾದರೇನೀಗ ಮಾಡುವುದು ?

ಸ್ವಲ್ಪ ಹೊತ್ತು ಆಲೋಚಿಸಿ ತಕ್ಷಣವೇ ವಾಂಟೀಜ್ ನಗರಕ್ಕೆ ದಕ್ಷಿಣ ಪಶ್ಚಿಮವಾಗಿ, ನೂರೈವತ್ತು ಕಿಲೋ ಮೀಟರ್ ದೂರದಲ್ಲಿರುವ 'ನ್ಯೂಕ್ಲಿಯರ್ ಡಿಸಾಸ್ಟರ್'ನ ಸೆಕ್ಯೂರಿಟಿ ಕಂಟ್ರೋಲರ್‌ನ್ನು ಕಾಂಟಾಕ್ಟ್ ಮಾಡಿದ ತ್ಯಾಂಗ್ ಚೀನ್.

ನಡೆದ ವಿಷಯವೆಲ್ಲವನ್ನೂ ಸಂಕ್ಷಿಪ್ತವಾಗಿ ವಿವರಿಸಿದ ನಂತರ–

"ಇವೆಲ್ಲವನ್ನೂ ಕ್ರೋಢೀಕರಿಸಿದರೆ ಅವರುಗಳು ನಮ್ಮ ರಿಯಾಕ್ಟರನ್ನು ಧ್ವಂಸ ಮಾಡಲು ಬಂದಿರುವರೆಂಬಂತೆ ನನಗೆ ತೋರುತ್ತಿದೆ ನೀವುಗಳು ಮತ್ತಷ್ಟು ಅಲರ್ಟಾಗಿ ಇರುವುದೊಳ್ಳೆಯದು"

"ಥ್ಯಾಂಕ್ಸ್ ಕಾಮ್ರೇಡ್ ! ವಿ ವಿಲ್ ಬಿ ಅಲರ್ಟ್ ಆಲ್ ದಿ ಟೈಮ್. ಆ ವಿಷಯದಲ್ಲಿ ನೀವು ಯೋಚಿಸಬೇಕಾದ ಅವಶ್ಯಕತೆಯೇನೂ ಇಲ್ಲ ಅಂದ್ಹಾಗೆ ಆ ವ್ಯಕ್ತಿಗಳೇನಾದರು? ಅವರುಗಳ ಇರುವಿಕೆಯೇನಾದರೂ ತಿಳಿದು ಬಂತೆ ?"

"ಪ್ರಯತ್ನಿಸುತ್ತಿದ್ದೇವೆ !"

ಎಂದು ಫೋನನ್ನು ಕ್ರೆಡಿಲ್ ಮಾಡಿದ ತ್ಯಾಂಗ್ ಚೇಸ್.

# 12

ಬೇಗ ಬೇಗನೆ ಹೆಜ್ಜೆಗಳನ್ನಿರಿಸುತ್ತಿದ್ದಾರೆ ಮಹೇಶ್ ಮತ್ತು ವಿಶ್ವನಾಥ್.

ಅಲ್ಲಲ್ಲಿ ಚೈನಾ ಪೌರರು ಕಂಡು ಬರುತ್ತಿದ್ದಾರೆ ದೂರದಲ್ಲಿ

ರೈಲ್ವೆ ಟ್ರಾಕಿನ ಮೇಲೆ ಯಾವುದೋ ರೈಲು ಬರುತ್ತಿರುವುದನ್ನು ಗಮನಿಸಿ, ಒಂದು ಹಳ್ಳವನ್ನು ಕಂಡು ಆ ಬದಿಗೆ ಧುಮುಕಿ ಬೋರಲಾಗಿ ಮಲಗಿದರು.

ರೈಲು ಮುಂದಕ್ಕೆ ಹೋಗುವವರೆಗೂ ಅಲ್ಲೇ ಉಳಿದು ನಂತರ ಅಲ್ಲಿಂದ ಮೇಲೆದ್ದು ನಡಿಗೆಯನ್ನಾರಂಭಿಸಿದರು.

ಇಬ್ಬರಿಗೂ ಆಯಾಸ ಉಕ್ಕಿ ಬರುತ್ತಿದೆ.

ಇವರುಗಳು ರೈಲಿನಿಂದ ತಪ್ಪಿಸಿಕೊಂಡು ಬಂದು ಎರಡು ಗಂಟೆ ಮೇಲಾಗಿದೆ. ಎರಡು ಗಂಟೆಗಳ ಕಾಲ ಬರೀ ನಡಿಗೆಯೇ ಆಯಿತು ಎಲ್ಲಿಯೂ ವಿಶ್ರಾಂತಿ ಪಡೆಯಲಿಲ್ಲ.

"ಇಷ್ಟೊತ್ತಿಗಾಗಲೇ ನಮ್ಮ ಬಗ್ಗೆ ಅವರುಗಳಿಗೆ ತಿಳಿದಿರುತ್ತದೆ. ರೇಡಿಯೋ, ಟಿ ವಿ ಗಳಲ್ಲಿ ನಮ್ಮ ಬಗ್ಗೆ ಪ್ರಚಾರ ಮಾಡಿದರೂ ಆಶ್ಚರ್ಯಪಡಬೇಕಾಗಿಲ್ಲ"

ಅಸಹಾಯಕತೆಯಿಂದ ಮಹೇಶ ಹೇಳಿದ.

"ನಿಜವೆ! ಶ್ಯಾಂಗ್ ಚೇನ್ ತಪ್ಪಿಸಿಕೊಂಡಿರಬಹುದು ಅತನು ಅಷ್ಟೇ ಸಮರ್ಥನೂ ಸಹ"

ಎಂದನು ವಿಶ್ವನಾಥ್.

"ನಾವುಗಳು ನ್ಯೂಕ್ಲಿಯರ್ ರಿಯಾಕ್ಟರ್‌ನ ವಿವರಗಳನ್ನು ತಿಳಿದು ಕೊಂಡಿರುವೆವೆಂದು ನ್ಯಾತಾ ಹೇಳುತ್ತಾಳೆ. ನಮಗೋಸ್ಕರವಾಗಿ ಅಲ್ಲಿ ಕಾವಲಿನ ಪಡೆ ಇಟ್ಟಿರುತ್ತಾರೆ"

"ಅದು ನಮಗೆ ಬಹಳ ಒಳ್ಳೆಯದಲ್ಲವೇ"

ಎನ್ನುತ್ತಾ ಚಕ್ಕನೆ ಅಲ್ಲೇ ನಿಂತ ವಿಶ್ವನಾಥ್.

ಆತನು ಏತಕ್ಕೆ ನಿಂತನೆಂದು ಅರಿಯದೆ ಮಹೇಶ ಸಹ ಹಾಗೆಯೇ ಅಲ್ಲಿಯೇ ನಿಂತ

"ಮಹೇಶ್ ಅಲ್ಲಿ ನೋಡು, ಆ ರೋಡಿನ ಮೇಲೆ ಯಾವುದೋ ಮಿಲಿಟರಿ ಟ್ರಕ್ಸ್ ಬರುತ್ತಿರುವಂತಿದೆಯಲ್ಲವೇ ?"

ಮಹೇಶ ವಿಶ್ವನಾಥ ತೋರಿಸಿದ ದಿಶೆಯಲ್ಲಿ ತಾನೂ ನೋಟ ಹರಿಸಿದ.

ಅವರಿದ್ದಲ್ಲಿಂದ ರೋಡ್ ಬಹಳ ದೂರವಿರುವುದರಿಂದ ಟ್ರಕ್ಸ್ ಹೋಗುತ್ತಿರುವುದು ಕಾಣಿಸುತ್ತಿದೆಯಲ್ಲದೆ ಅವು ಯಾರದೆಂದು ಮಾತ್ರ ತಿಳಿಯಲು ಬಹಳ ಅಸಾಧ್ಯವಾಗುತ್ತಿದೆ

"ನಮಗೋಸ್ಕರವಾಗಿಯೆ ಇದ್ದಿರಬಹುದು !"

ತನ್ನ ಮನದಲ್ಲಿನ ಮಾತನ್ನು ಹೊರಗೆಡವಿದ ವಿಶ್ವನಾಥ.

"ಏನೋ ! ಇಲ್ಲಿ ಯಾವುದಾದರೂ ಎಲ್ಲಿಯಾದರೂ ಮಿಲಿಟರಿ ಬೇಸ್ ಇದೆಯೇ ?"

ಎಂದು ತನ್ನಲ್ಲೇ ಅಂದುಕೊಂಡು ಜೇಬಿನಿಂದ ಮ್ಯಾಪನ್ನು ಹೊರತೆಗೆದು ನೋಡಿದ ಮಹೇಶ.

ಆತನ ಊಹೆ ನಿಜವಾಯಿತು.

ಆ ಪ್ರದೇಶದಿಂದ ಎಂಬತ್ತು ಕಿಲೋ ಮೀಟರ್‌ಗಳಷ್ಟು ದೂರದಲ್ಲಿ ಒಂದು ಮಿಲಿಟರಿ ಕ್ಯಾಂಪೊಂದಿದೆ.

"ಮೊದಲು ನಾವುಗಳಲ್ಲಿಗೆ ತಲುಪಬೇಕು !"

"ಏತಕ್ಕಾಗಿ ?"

"ನಾವು ಇನ್ನೂ ಅಸ್ಸೈನ್‌ಮೆಂಟಿಗೆ ಬಹಳ ದೂರದಲ್ಲೇ ಉಳಿದಿದ್ದೇವೆ. ನಮಗಾಗಿ ನ್ಯೂಕ್ಲಿಯರ್ ರಿಯಾಕ್ಟರಿನ ಹತ್ತಿರ ಸ್ಕ್ವಾಡ್‌ಗಳನ್ನು ಕಾವಲಿಗೆ

ಹಾಕಿ ಹುಡುಕುತ್ತಿರುತ್ತಾರೆ ನಾವು ಹೀಗೆಯೇ ಹೋದರೆ ಏನೊಂದೂ ಪ್ರಯೋಜನವಾಗುವುದಿಲ್ಲ ಮಿಲಿಟರಿ ಜೀಪನ್ನೋ, ಟ್ರಕ್ಕನ್ನೋ ಅಪಹರಿಸಿ ಅದರ ಸಹಾಯದಿಂದ ನಾವಲ್ಲಿಗೆ ಸೇರಿಕೊಳ್ಳಬೇಕು. ಅವರುಗಳು ಊಹಿಸಿಕೊಳ್ಳುವಷ್ಟರಲ್ಲೇ ನಮ್ಮ ಕೆಲಸವನ್ನು ಮುಗಿಸಿಕೊಳ್ಳಬೇಕು"

ತನ್ನ ನಡಿಗೆಯ ವೇಗವನ್ನು ದುಪ್ಪಟ್ಟಾಗಿ ಹೆಚ್ಚಿಸುತ್ತಾ ಹೇಳಿದ ಮಹೇಶ

ವಿಶ್ವನಾಥ್ ಆತನನ್ನು ಅನುಸರಿಸಿದ.

• • • •

ಇಬ್ಬರೂ ಮಿಲಿಟರಿ ಬೇಸನ್ನು ಸೇರಿಕೊಳ್ಳುವಷ್ಟರಲ್ಲಿ ಕತ್ತಲಾಗಿತ್ತು.

ಹಗಲಿನ ಬಿಸಿಲು ಮಾಯವಾಗಿ ತಣ್ಣನೆಯ ಛಳಿಗಾಳಿ ಬೀಸಲು ಪ್ರಾರಂಭಿಸಿತು.

ಆ ಛಳಿಗೆ ಥರಥರನೆ ನಡುಗುತ್ತಾ ಪ್ಯಾಂಟ್ ಜೇಬಿನಲ್ಲಿ ಕೈಗಳನ್ನಿರಿಸಿಕೊಂಡು ಕ್ಯಾಂಪ್‌ಗೆ ಕೊಂಚ ದೂರದಲ್ಲಿರುವ ಮರದ ಹಿಂಬದಿಯಲ್ಲಿ ಅಡಗಿ ಕುಳಿತಿದ್ದಾರೆ ಮಹೇಶ್ ಮತ್ತು ವಿಶ್ವನಾಥ್.

ಅವರಿಬ್ಬರೂ ಅಲ್ಲಿಗೆ ಸೇರಿಕೊಂಡು ಈಗಾಗಲೇ ಇಪ್ಪತ್ತೈದು ನಿಮಿಷಗಳು ಕಳೆದಿದೆ. ಈ ಇಪ್ಪತ್ತೈದು ನಿಮಿಷಗಳ ಕಾಲಾವಧಿಯಲ್ಲಿ ಬೇಸ್‌ಗೆ ಬರುವ ಟ್ರಕ್ಕುಗಳಾಗಲಿ, ಬೇಸ್‌ನಿಂದ ಹೊರಗೆ ಹೋಗುವ ವೆಹಿಕಲ್ಸ್ ಆಗಲಿ ಯಾವುದೊಂದೂ ಅವರುಗಳ ಕಂಗಳಿಗೆ ತೋರಿಬರಲಿಲ್ಲ

ನಿರಾಸೆ ಅವರಲ್ಲಿ ಮನೆಮಾಡಿಕೊಂಡಿತು.

ಟ್ರಕ್ಕನ್ನು ಅಪಹರಿಸಬೇಕೆಂದರೆ ಬಹಳಷ್ಟು ಬುದ್ಧಿ ಖರ್ಚು ಮಾಡಬೇಕು. ಈ ಮಿಲಿಟರಿ ಬೇಸ್‌ನಲ್ಲಿ ಟ್ರಕ್ಕನ್ನು ಅಪಹರಿಸುವುದೆಂದರೆ ಅಷ್ಟು ಸುಲಭವೂ ಅಲ್ಲ.

'ಅಕಸ್ಮಾತ್ತಾಗಿ ಹೊರಗೆ ಬರುವ ಮಿಲಿಟರಿ ಟ್ರಕ್ಕನ್ನು ಹೇಗಾದರೂ ಮಾಡಿ ಆಕ್ರಮಿಸಿಕೊಳ್ಳಬೇಕು, ಇಲ್ಲದಿದ್ದರೆ ಕೆಲಸ ಮುಂದೋಗುವುದಿಲ್ಲ'

ಎಂದು ಮನದಲ್ಲೇ ಅಂದುಕೊಂಡ ಮಹೇಶ.

ರಭಸವಾಗಿ ಬೀಸುತ್ತಿರುವ ಛಳಿಗಾಳಿಯನ್ನು ತಾಳಲಾರದೆ ಒಣಗಿದ ಚಕ್ಕೆಗಳಿಂದ ಮಾಡಲಾದ ಕೆಂಡಗಳ ಮುಂದೆ ಸೈನಿಕರು ಅಲ್ಲಲ್ಲಿ ಬೆಂಕಿಯನ್ನು ಕಾಯಿಸಿಕೊಳ್ಳುತ್ತಿದ್ದಾರೆ.

ಕ್ಯಾಂಪಿನ ಹೊರಗಡೆ ಅಲ್ಲಲ್ಲಿ ಸೈನಿಕರು ಮೆಷಿನ್‌ಗನ್ನನ್ನು ಹಿಡಿದು ಕೊಂಡು ಕಾವಲು ಕಾಯುತ್ತಿದ್ದಾರೆ.

ಸುಮಾರು ಒಂದೂವರೆ ಗಂಟೆಗಳ ಕಾಲ ವೈಟ್ ಮಾಡಿದ ನಂತರ ಮಹೇಶ್, ವಿಶ್ವನಾಥ್‌ರ ಕೋರಿಕೆ ಈಡೇರಿತು.

ಚಿಕ್ಕ ಜೀಪೊಂದು ಬೇಸ್‌ನಿಂದ ಹೊರಗೆ ಬರುವುದನ್ನು ಕಂಡ ಇಬ್ಬರೂ ಆನಂದದಿಂದ ನಿಟ್ಟುಸಿರೊಂದನ್ನು ಹೊರಗೆಡವಿದರು

ವಿಶ್ವನಾಥ್ ಚಕ್ಕನೆ ಮರೆಯಾಗಿ ನಿಂತಿರುವ ಮರದಿಂದ ಹೊರಗೆ ಬಂದು ರೋಡನ್ನು ಸೇರಿಕೊಂಡ.

ವಿಶ್ವನಾಥ್ ಈಗ ಚೈನಾ ಮಿಲಿಟರಿ ಯೂನಿಫಾರಂನಲ್ಲಿದ್ದಾನೆ.

ಅದಲ್ಲದೆ ಮೇಕಪ್ ಮುಖಾಂತರ ಚೈನಾ ಪೌರರ ಹೋಲಿಕೆಯನ್ನು ತಂದುಕೊಂಡಿದ್ದಾನೆ.

ಆ ಅಸ್ಪಷ್ಟವಾದ ಕಾಂತಿಯಲ್ಲಿ ಯಾರೂ ಅತನನ್ನು ಕಂಡುಹಿಡಿಯು ಲಾರರು.

ಆ ಜೀಪಿನಲ್ಲಿ ಎಷ್ಟು ಜನರಿರುವರೆಂದು ಅತನಿಗೆ ಸರಿಯಾಗಿ ಗೊತ್ತಿಲ್ಲ. ಅದು ಎಲ್ಲಿಗೆ ಹೊರಟಿರುವುದೆಂದೂ ಸಹ ಅತನಿಗೆ ತಿಳಿಯದು. ಆದರೂ ತನ್ನ ಕೆಲಸವನ್ನು ಈಗ ನಿರ್ವಹಿಸಬೇಕಾಗಿದೆ

ರೋಡಿನ ಒಂದು ಬದಿಯಲ್ಲಿ ನಡೆದು ಹೋಗುತ್ತಿದ್ದ ಅತ ಜೀಪ್ ಬರು ವುದನ್ನು ಅರಿತು ಚಕ್ಕನೆ ಹಿಂತಿರುಗಿ ನಿಲ್ಲೆಂಬಂತೆ ಕೈಯೆತ್ತಿ ಸನ್ನೆ ಮಾಡಿದ ವಿಶ್ವನಾಥ್.

ಆ ಜೀಪಿನ ಹೆಡ್ ಲೈಟ್ ನೇರವಾಗಿ ಅತನ ಮುಖಕ್ಕೆ ಬಡಿಯುತ್ತಿರು ವುದರಿಂದ ಜೀಪಿನ ಒಳಗೆ ಎಷ್ಟು ಜನರಿದ್ದಾರೆ ಎಂಬುದು ಸ್ಪಷ್ಟವಾಗಿ ಗೋಚ ರಿಸುತ್ತಿಲ್ಲ.

ಸ್ಪೀಡಾಗಿ ಬಂದ ಆ ಜೀಪ್ ಅತನಿಗೆ ಎರಡು ಗಜಗಳಷ್ಟು ದೂರದಲ್ಲಿ ನಿಂತಿತು.

ಜೀಪಿನಿಂದ ಹೊರಗೆ ತಲೆಯಿಟ್ಟ ವ್ಯಕ್ತಿ ಏನೇನೋ ತನ್ನ ಭಾಷೆಯಲ್ಲೇ ಅರಚುತ್ತಿದ್ದಾನೆ

ಕೆಲ ನಿಮಿಷಗಳಲ್ಲಿಯೇ ಆ ವ್ಯಕ್ತಿಯನ್ನು ಸಮೀಪಿಸಿದ ವಿಶ್ವನಾಥ.

ಒಳಗೆ ಡ್ರೈವಿಂಗ್ ಸೀಟಿನಲ್ಲೊಬ್ಬ ಸೆಂಟ್ರಿ, ಆತನ ಪಕ್ಕದಲ್ಲೇ ಮತ್ತೊಬ್ಬ ವ್ಯಕ್ತಿ ಕುಳಿತುಕೊಂಡಿದ್ದಾನೆ.

ಈಗ ಅದೃಷ್ಟ ದೇವತೆ ವಿಶ್ವನಾಥನ ಹಿಂಬದಿಯಲ್ಲೇ ನರ್ತಿಸುತ್ತಿದ್ದಾಳೆ.

"ಕಾಮ್ರೇಡ್ ! ಅರ್ಜೆಂಟಾಗಿ 'ವಾಯುಂಗ್ ಚೂ'ಗೆ ಹೋಗಬೇಕಿದೆ. ಲಿಫ್ಟ್ ಕೊಡಬಲ್ಲಿರಾ ?"

ತನ್ನ ಅರ್ಜೆಂಟನ್ನು ವ್ಯಕ್ತಪಡಿಸುತ್ತಾ ಅವಸರದ ಮುಖಭಾವ ಮಾಡಿ ಕೇಳಿದ ವಿಶ್ವನಾಥ

"ವಾಯುಂಗ್ ಚೂಗೆ ! ಅಲ್ಲೇನು ಕೆಲಸವಿದೆ ನಿನಗೆ ? ಅಂದ್ಹಾಗೆ ನಿನ್ನನ್ನು ಎಂದೂ ಇಲ್ಲಿ ನೋಡಿದ ಹಾಗೆ ತೋರುತ್ತಿಲ್ಲವಲ್ಲಾ ?"

ಅನುಮಾನದಿಂದ ಪ್ರಶ್ನಿಸಿದ ಡ್ರೈವರ್‌ನ ಪಕ್ಕದಲ್ಲಿರುವ ವ್ಯಕ್ತಿ.

ಅದೇ ಕ್ಷಣದಲ್ಲಿ ಆ ಬದಿಯಲ್ಲಿ ಡ್ರೈವರನೆಡೆಗೆ ಮಹೇಶ ಬಂದು ಸೇರಿಕೊಳ್ಳುವುದನ್ನು ವಿಶ್ವನಾಥ ಗಮನಿಸಿದ.

"ಅದೇನು ಸಾರ್, ನಾನು ನಿಮಗೆ ಗೊತ್ತಿಲ್ಲ ಅಂದ್ರೆ ಏನು ? ನೀವು ಕರ್ನಲ್ ಗೊಜಾಂಗ್ ಅಲ್ಲವೇ ?"

ಪರಿಚಿತನಂತೆ ಮಾತನ್ನು ಪ್ರಾರಂಭಿಸಿದ ವಿಶ್ವನಾಥ.

ಆ ಮನುಷ್ಯ ಚಕ್ಕನೆ ತನ್ನ ಹೋಲ್‌ಸ್ಟರ್‌ನಿಂದ ರಿವಾಲ್ವರನ್ನು ಹೊರತೆಗೆಯಲನುವಾದ.

ಆ ರೀತಿಯ ಒಳ್ಳೆಯ ಸಂದರ್ಭಕ್ಕಾಗಿಯೇ ಕಾಯುತ್ತಿದ್ದ ವಿಶ್ವನಾಥ. ಮುಷ್ಟಿಯನ್ನು ಬಿಗಿ ಹಿಡಿದು ಚಟಕ್ಕನೆ ಆತನ ಕೈಗೆ ಒಂದು ಗುದ್ದು ಗುದ್ದಿ ರಿವಾಲ್ವರನ್ನು ತನ್ನದಾಗಿಸಿಕೊಂಡ.

ಆ ಬದಿಯಲ್ಲೂ ಸಹ ಮಹೇಶ ಕಾರ್ಯಮಗ್ನನಾದ.

ಡ್ರೈವರನ್ನು ಎಳೆದು ಆತನಿಗೆ ಸರಿಯಾದ ಜಾಗದಲ್ಲಿ ಚಾಪ್ ಕೊಟ್ಟು ಪ್ರಜ್ಞಾಶೂನ್ಯನನ್ನಾಗಿ ಮಾಡಿ ತಾನು ಡ್ರೈವರ್ ಸೀಟನ್ನು ಆಕ್ರಮಿಸಿದ.

ಮತ್ತೊಬ್ಬ ಸೈನಿಕ ಏತಕ್ಕೋ ಕಿರುಚಲು ಹೋದ.

ವಿಶ್ವನಾಥ ಚಟಕ್ಕನೆ ಒಳಗೆ ಕುಳಿತುಕೊಂಡು ಆ ಕಿರುಚಲಿರುವಂತೆ ಮೂತಿಯ ಮೇಲೆ ಬಲ ಮುಷ್ಟಿಯಿಂದ ಪ್ರಹರಿಸಿದ.

ನಂತರ ಕುತ್ತಿಗೆಯ ಮೇಲೆ ಅದೇ ಹಸ್ತದಿಂದ ಭಾರವಾದ ಚಾಪನ್ನು ಕೊಟ್ಟ. ಕೆಲ ಕ್ಷಣಗಳಲ್ಲಿಯೇ ತಲೆಯನ್ನು ಪಕ್ಕಕ್ಕೆ ವಾಲಿಸಿದನಾತ.

"ಕಮಾನ್...."

ಎಂದು ಆತುರತೆ ವ್ಯಕ್ತಪಡಿಸಿದ ವಿಶ್ವನಾಥ.

ಜೀಪನ್ನು ಸ್ಟಾರ್ಟ್ ಮಾಡಿದ ಮಹೇಶ.

ಒಂದಿನಿತೂ ತಡಮಾಡದೆ ರಿವ್ವನೆ ಮುಂದಕ್ಕೋಡಿತು ಜೀಪ್.

ಐದು ನಿಮಿಷಗಳು ಕಳೆದ ನಂತರ ವಿಶ್ವನಾಥನಿಗೆ ಏನೋ ಆಲೋಚನೆ ಹೊಳೆದು ಚಕ್ಕನೆ ತನ್ನ ಕೈಯಲ್ಲಿದ್ದ ರಿವಾಲ್ವರ್‌ನೊಂದಿಗೆ ಹಿಂದಕ್ಕೆ ತಿರುಗಿದ.

"ಬೇಡ....ಸುಡಬೇಡ....ನಾನು ನಿಮಗೆ ಸಹಾಯ ಮಾಡುತ್ತೇನೆ"

ಅಸಹಾಯಕತೆಯಿಂದಿರುವ ಕೋಮಲ ಕಂಠವೊಂದು ಧ್ವನಿಸಿತು

ಅದೊಂದು ಅಮಾಯಕ ಯುವತಿಯ ಧ್ವನಿ.

ಅಷ್ಟರವರೆವಿಗೂ ಕತ್ತಲೆಯಲ್ಲಿ ಕುಳಿತಿರುವ ಆಕೆಯನ್ನು ಗಮನಿಸಲಿಲ್ಲವಲ್ಲ ಎಂದು ತನ್ನೊಳಗೆ ತನ್ನನ್ನೇ ನಿಂದಿಸಿಕೊಂಡು ಆಕೆಯನ್ನು ಪ್ರಶ್ನಿಸಲಾರಂಭಿಸಿದ.

"ಯಾರು ನೀನು ? ಈ ಜೀಪಿನಲ್ಲಿ ಏಕಿರುವೆ ?"

ಗಟ್ಟಿಯಾಗಿ ಗದರಿಸಿ ಕೇಳಿದ ವಿಶ್ವನಾಥ

"ನೀವುಗಳು ಚೈನಾ ಪೌರರಲ್ಲವೆಂದು ನನಗೆ ಗೊತ್ತು ಮೊದಲು ಜೀಪನ್ನು ಮುಂದಕ್ಕೋಡಿಸಿ ನಂತರ ಎಲ್ಲವನ್ನೂ ವಿವರಿಸುತ್ತೇನೆ"

ಆಕೆ ಹೇಳಿದ್ದನ್ನು ಕೇಳಿ ಸ್ತಂಭೀಭೂತರಾದರಿಬ್ಬರೂ

# 13

"ಈಗ ಹೇಳು, ಯಾರು ನೀನು ? ನಾವು ಚೈನೀಸ್ಸ್‌ವೆಂದು ಹೇಗೆ ಗ್ರಹಿಸಿದೆ ? ಹೆಂಗಸರಿಗೆ ಪ್ರವೇಶವಿಲ್ಲದ ಈ ಮಿಲಿಟರಿ ಬೇಸ್‌ನೊಳಗೆ ನಿನಗೆ ಹೇಗೆ ಪ್ರವೇಶ ದೊರೆಯಿತು ?"

ಮಿಲಿಟರಿ ಬೇಸ್‌ನಿಂದ ಸುಮಾರು ಹತ್ತು ಕಿಲೋಮೀಟರ್‌ಗಳಷ್ಟು ದೂರ ಹೋದ ನಂತರ ಒಂದು ಚಿಕ್ಕ ಮಣ್ಣಿನ ರೋಡಿನ ಮೇಲೆ ಒಂದೆರಡು ಫರ್ಲಾಂಗ್ ದೂರದಲ್ಲಿ ಒಂದು ಮರದ ಕೆಳಗೆ ಜೀಪನ್ನು ನಿಲ್ಲಿಸಿದ್ದಾರೆ.

ಮಹೇಶ ಪ್ರಶ್ನೆಗಳ ಸುರಿಮಳೆಯನ್ನು ಸುರಿಸಿದರಿಂದ ತತ್ತರಿಸಿ ಹೋದಳಾಕೆ.

ಇದರಿಂದ ಆಕೆ ಎರಡು ನಿಮಿಷಗಳ ಕಾಲ ಮಾತನಾಡಲಾರದೆ ಮೌನ ವಹಿಸಿದಳು. ಕೆಲ ಕ್ಷಣಗಳ ನಂತರ ಭಾರವಾದ ಹೃದಯದಿಂದ ಉತ್ತರಿಸಲಣಿ ವಾದಳು.

"ನನ್ನ ಹೆಸರು ವ್ಯಾಂಗ್-ಸಾ ತೂಸ್. ನಮ್ಮದು ಇಲ್ಲೇ ಹತ್ತಿರವಿರುವ ಒಂದು ಚಿಕ್ಕ ಗ್ರಾಮ. ನಮ್ಮ ತಂದೆಯವರು ವ್ಯವಸಾಯ ಮಾಡುತ್ತಿದ್ದಾರೆ. ಅತನ ದೊಡ್ಡ ಮಗಳೇ ನಾನು. ಈ ಮಿಲಿಟರಿ ಬೇಸ್‌ನಲ್ಲಿರುವ ಅಧಿಕಾರಿಗಳಿಗೆ ನೆನಸಿಕೊಂಡಾಗ, ಬಾಯಿ ಚಪ್ಪರಿಸಿಕೊಂಡಾಗ ಹೆಂಗಳೆಯರು ಬೇಕು. ಮಂಚದಲ್ಲಿ ಅವರುಗಳ ಪಕ್ಕದಲ್ಲಿ, ಆಟದಲ್ಲಿ ಪಾಲ್ಗೊಳ್ಳಬೇಕು. ಅದಕ್ಕೆ ಇಂತಹವರೇ ಬೇಕೆಂದಿಲ್ಲ. ಯಾರೇ ಆಗಲಿ ಅವರ ಮನಸ್ಸಿಗೆ ಒಪ್ಪಿಗೆಯಾದರೆ ಸಾಕು ಅವರನ್ನು ಎತ್ತಿಕೊಂಡೊಯ್ಯುವುದೇ ಅವರ ಕೆಲಸ.

ಅವರಿಗೆ ಇಷ್ಟವಿರಲಿ....ಇಲ್ಲದಿರಲಿ ಬಲಾತ್ಕಾರದಿಂದ ತಮ್ಮ ಆಟಕ್ಕೆ ತೊಡಗಿಸಿಕೊಳ್ಳುತ್ತಾರೆ ನರರೂಪ ರಾಕ್ಷಸರು. ಈ ವಿಚಾರ ಸರ್ಕಾರಕ್ಕೆ ಗೊತ್ತಿದ್ದರೂ ಗೊತ್ತಿಲ್ಲದಂತೆ ಮೌನವಹಿಸಿದೆ. ಇದಕ್ಕೆ ಬಲಿಯಾಗುವವರು ಹದಿ ಹರೆಯದ ಹೆಣ್ಣು ಮಕ್ಕಳೇ ಜಾಸ್ತಿ.

"ಒಂದು ದಿನ ಒಬ್ಬ ಅಧಿಕಾರಿಯ ಕಣ್ಣಿಗೆ ಬಿದ್ದೆ ನಾನು. ನನ್ನ ಪಕ್ಕದಲ್ಲೇ ಜೀಪನ್ನು ತಂದು ನಿಲ್ಲಿಸಿ ಹತ್ತುವಂತೆ ಸೂಚಿಸಿದ. ನನಗೇನೂ ತೋಚದೆ ಕೊಂಚ ಕಸಿವಿಸಿಯಿಂದ ಉಳಿದೆ. ನಂತರ ಅತನ ವರ್ತನೆಯನ್ನು ಅರಿತು ಮುಂದಾಗುವ ಅನಾಹುತವನ್ನು ಗ್ರಹಿಸಿಕೊಂಡು ಜೀಪನ್ನು ಹತ್ತಲೊಪ್ಪಲಿಲ್ಲ. ಬಲವಂತದಿಂದ ನನ್ನನ್ನು ಹತ್ತಿಸಲು ನೋಡಿದ.

"ಅಷ್ಟರಲ್ಲೇ ನನ್ನ ತಂದೆ ಮತ್ತು ಮಿಕ್ಕವರು ಬಂದು ಅದಕ್ಕೆ ಅಭ್ಯಂತರ ವ್ಯಕ್ತಪಡಿಸಿದರು. ತಮ್ಮ ಮರ್ಯಾದೆಯನ್ನು ಅರಿತು ನನ್ನನ್ನು ಅಲ್ಲಿಗೇ ಬಿಟ್ಟುಬಿಟ್ಟರು. ಆದರೆ ಮತ್ತೆ ಬಂದು ನನ್ನನ್ನು ಹಿಡಿದುಕೊಂಡರು.

ಮರ್ಯಾದೆಯಿಂದ ಅವರುಗಳು ಹೇಳಿದ ಹಾಗೆ ಕೇಳಲಿಲ್ಲವೆಂದರೆ ನನ್ನ ಕುಟುಂಬವನ್ನು, ನನ್ನ ಬಂಧು ಬಳಗದವರನ್ನು ನಿರ್ನಾಮ ಮಾಡುತ್ತೇನೆಂದು ಬೆದರಿಸಿದ.

"ಈ ಮಿಲಿಟರಿ ಸೈನಿಕರ ಬಗ್ಗೆ ಚೆನ್ನಾಗಿ ಗೊತ್ತು. ಅವರು ಹೇಳಿದ ಮಾತನ್ನು ನೆರವೇರಿಸಿಯೇ ತೀರುವರೆಂದು ಎಲ್ಲರಿಗೂ ತಿಳಿದ ವಿಷಯ. ಆದುದರಿಂದಲೇ ನಾನೊಪ್ಪಿಕೊಂಡೆ – ಅದೂ ಭಯದಿಂದ.

"ಅಂದಿನಿಂದ ಇಂದಿನವರೆವಿಗೂ ಮಿಲಿಟರಿ ಬೇಸ್‌ಗೆ ಬಂದು ಹೋಗುವುದು ರೂಢಿಯಾಗಿ ಹೋಗಿದೆ"

ಎಂದು ದೀರ್ಘ ವಿವರವನ್ನ ಹೇಳಿ ನಿಲ್ಲಿಸಿದಳಾಕೆ.

ಮಹೇಶ ತುಟಿಗಳನ್ನು ಬಿಗಿ ಹಿಡಿದ.

'ಯಾವ ದೇಶದಲ್ಲಿ ನೋಡಿದರೂ ಹೆಣ್ಣು ಜಾತಿಯ ಚರಿತ್ರೆ ಒಂದೇ ತೆರನಾಗಿದೆಯಲ್ಲ !'

ತನ್ನೊಳಗೇ ಅಂದುಕೊಂಡ.

"ನಮ್ಮ ಪ್ರಶ್ನೆಗಳಿಗೆ ಸ್ವಲ್ಪ ಮಾತ್ರವೇ ಉತ್ತರ ಲಭಿಸಿದೆ. ಮಿಕ್ಕ ಪ್ರಶ್ನೆಗಳಿಗೆ ಉತ್ತರಿಸು. ಹುಂ...ಕಮಾನ್"

ಗದರಿಸಿ ನುಡಿದ ವಿಶ್ವನಾಥ್.

"ಮಿಕ್ಕ ಪ್ರಶ್ನೆಗಳಿಗೆ... ಹಾಗಂದ್ರೆ ?"

"ನಾವು ಚೈನೀಸಲ್ಲವೆಂದು ನಿನಗೆ ಹೇಗೆ ಗೊತ್ತಾಯ್ತು ?"

"ನಿಮ್ಮ ಪ್ರವರ್ತನೆ, ನಿಮ್ಮಗಳ ಮಾತಿನ ಶೈಲಿಯಿಂದ ನೀವು ಚೈನಾ ಪೌರರಲ್ಲವೆಂದು ತಿಳಿದೆ. ಅದಷ್ಟೇ ಅಲ್ಲದೆ ನನಗೊಬ್ಬ ಇಂಡಿಯನ್ ಸಹ ಗೊತ್ತು !"

"ಯಾರು ? ಈಗ ಅತನೆಲ್ಲಿ ? ಏನಾದ ?"

ಆತ್ರತೆಯನ್ನು ವ್ಯಕ್ತಪಡಿಸಿ ಪ್ರಶ್ನಿಸಿದ ವಿಶ್ವನಾಥ್.

"ಆತನೂ ಒಬ್ಬ ಗೂಢಚಾರನೇ ಇದ್ದಿರಬಹುದು. ಚೈನಾ ಸೈನಿಕರು ಆತನ ಹಿಂದೆ ಬಿದ್ದಾಗ ಕೆಲವು ದಿನಗಳ ಕಾಲ ನಮ್ಮ ಮನೆಯಲ್ಲೇ ಉಳಿದಿದ್ದ. ಆದರೆ ತನ್ನಿಂದ ಇನ್ನೊಬ್ಬರಿಗೆ ಉಪದ್ರವೆಂದರಿತು ಇಲ್ಲಿಂದ ಹೊರಟುಹೋದ. ಆ ನಂತರ ಚೈನಾ ಸೈನಿಕರು ಆತನನ್ನು ಕೊಂದ್ಹಾಕಿದರೆಂದು ತಿಳಿದು ಬಂತು"

ಬಹಳ ನೋವಿನಿಂದ ಹೇಳಿದಳಾಕೆ.

"ಆತನ ಹೆಸರೇನೆಂದು ಗೊತ್ತೆ ?"

"ಗೊತ್ತು ! ಪ್ರಕಾಶ್ ಸಿಂಗ್....ಕ್ಯಾಪ್ಟನ್ ಪ್ರಕಾಶ್‌ಸಿಂಗ್ ಅಂತ"

"ಆತ ನಿನ್ನ ಶತ್ರು ಎಂದು ತಿಳಿದೂ ತಿಳಿದೂ ಏಕೆ ಆದರಿಸಿದೆ ? ನಿನ್ನ ವಿಷಯ ನಿಮ್ಮವರಿಗೆ ಗೊತ್ತಾಗಿದ್ರೆ ಏನಾಗ್ತಿತ್ತೊ ಗೊತ್ತಾ ?";

"ಬಹಳ ಚೆನ್ನಾಗಿ ಗೊತ್ತು. ಆದರೆ ಚೈನಾ ಮಿಲಿಟರಿ ಸೈನಿಕರಲ್ಲಿದ್ದ ನಂಬಿಕೆ ಪೂರಾ ಹೋಗಿದೆ, ಅವರ ಮೇಲೆ ನನಗೆ ದ್ವೇಷವಷ್ಟೇ...."

ಬಹಳ ಉದ್ವೇಗದಿಂದ ಹೇಳಿದಳು.

"ದೇಶವನ್ನು ಕಾಪಾಡುವ ಸೈನಿಕರ ಮೇಲೆ ದ್ವೇಷದ ಕಿಡಿ ಕಾರ ಬಾರದು. ಅವರು ನಮ್ಮ ರಕ್ಷಣೆಗೆಂದೇ ಇರುವವರು. ನಮಗೆಂದೇ...."

ಎಂದು ಇನ್ನು ಏನೋ ಹೇಳ ಹೋದ ಮಹೇಶ,

ಅಷ್ಟರಲ್ಲೇ !

"ಸ್ಕಾಪಿಟ್ !"

ಕೋಪದಿಂದ ಕರ್ಕಶವಾಗಿ ನುಡಿದಳಾಕೆ.

"ಸೈನಿಕರೆಂದು ನಾನೆಷ್ಟೋ ಗೌರವಿಸಿದೆ. ಸಹಿಸಿದೆ. ಆದರೆ ಅವರು ಗಳು ಆ ಗೌರವವನ್ನು ಕಾಪಾಡಿಕೊಳ್ಳಲಿಲ್ಲ"

ಮತ್ತಷ್ಟು ಕೋಪೋದ್ವೇಗದಿಂದ ನುಡಿದಳು.

ಮಿಲಿಟರಿ ಸೈನಿಕರೆಂದರೆ ಆಕೆಗೆ ಎಷ್ಟು ಅಸಹ್ಯಕರವೆಂದು ಈ ಇಬ್ಬರಿಗೆ ಈಗಾಗಲೇ ತಿಳಿದಿದೆ.

"ಏನಾದರೂ ನಿನಗೆ...."

"ಲಿವ್ ಇಟ್ ಮಹೇಶ್....ಸ್ಟಾರ್ಟ್ ನೌ ! ವ್ಯಾಂಗ್, ನಿನ್ನ ಗ್ರಾಮ ಎಲ್ಲಿದೆ ಎಂದು ಹೇಳಿದರೆ ನಿನ್ನನ್ನು ಅಲ್ಲಿ ಡ್ರಾಪ್ ಮಾಡುತ್ತೇನೆ",

ಆಸೆಯಿಂದ ಕೇಳಿದ ವಿಶ್ವನಾಥ್.

"ಇಷ್ಟಕ್ಕೂ ನೀವುಗಳು ಇಲ್ಲಿಗೆ ಬಂದ ಕೆಲಸವಾದರೂ ಏನು ? ನಿಮ್ಮಿಬ್ಬರ ಬಗ್ಗೆಯೇ ಮಿಲಿಟರಿ ಸೈನಿಕರು ಬಹಳವಾಗಿ ತಲೆ ಕೆಡಿಸಿಕೊಳ್ಳುತ್ತಿರಬೇಕು !"

"ನಮ್ಮ ಬಗ್ಗೆ ಏನೇನನ್ನು ಮಾತನಾಡುತ್ತಿದ್ದಾರೆ ?"

"ಇಂಡಿಯಾದಿಂದ ಐವರು ಸ್ಪೈಸ್ ಬಂದರೆಂದು, ಇವರೆಲ್ಲರೂ ವಾಂಟೆನ್ ನಗರಕ್ಕೆ ಸಮೀಪದಲ್ಲಿರುವ ನ್ಯೂಕ್ಲಿಯರ್ ರಿಯಾಕ್ಟರನ್ನು ನಾಶ ಮಾಡಲು ಹೋಗುತ್ತಿದ್ದಾರೆಂದು ವಿಷಯ ತಿಳಿದು ಬಂತು. ಬಹುಶಃ ಸೆಕ್ಯೂರಿಟಿ ಅಲ್ಲಿ ಹೆಚ್ಚಾಗಿದ್ದರಬಹುದು !"

"ನಮಗೆ ಷಾಂಗ್ರಾ ಅಡವಿಯ ಬಗ್ಗೆ ವಿವರಗಳು ಬೇಕಾಗಿದೆ. ಅದರ ಬಗ್ಗೆ ನಿನಗೇನಾದರೂ ತಿಳಿದಿದೆಯೇ ?"

ಆಶ್ಚರ್ಯಾತ್ಮಕ ನೋಟವನ್ನು ಅವರೆಡೆಗೆ ಬೀರಿದಳು.

"ಷಾಂಗ್ರಾ ಅಡವಿಯ ಬಗೆಯೇ ? ಏಕೆ ?"

"ಅದನ್ನು ನೀನು ತಿಳಿದುಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ನಿನಗೆ ಗೊತ್ತಿದ್ದರೆ ಹೇಳು, ಇಲ್ಲದಿದ್ದರೆ ಸುಮ್ಮನಿರು. ನಮ್ಮ ದಾರಿ ಹಿಡಿದು ನಮ್ಮ ಪಾಡಿಗೆ ನಾವು ಹೋಗುತ್ತೇವೆ"

ಎಂದು ದೃಢವಾದ ಮಾತಿನಲ್ಲಿ ನುಡಿದ ವಿಶ್ವನಾಥ್.

ವ್ಯಾಂಗಳ ಭೃಕುಟಿಗಳು ಮಡಚಿಕೊಂಡವು

"ಬಹುಶಃ ನಿಮಗೆ ಜಗಾರಿನ್ ಲ್ಯಾಬ್ಸ್ ಬಗ್ಗೆ ವಿವರಗಳು ಬೇಕೆಂದು ತೋರುತ್ತೆ. ಹೌದಾ ! ನಿಜವೇನಾ ?"

ಅಪರಿಮಿತ ಆಶ್ಚರ್ಯಕ್ಕೆ ಗುರಿಯಾದರು ಇಬ್ಬರು ಇಂಡಿಯನ್ಸ್.

ಆಕೆಯನ್ನು ನೋಡುತ್ತಲೇ ಆಲೋಚನೆಯೊಳಗೆ ಇಳಿದರು.

ಬಹಳ ಚುರುಕಾಕೆ !

ಅಪರಿಮಿತ ಬುದ್ಧಿವಂತಿಕೆ !

ಇನ್ನು ಏನೇನೋ ಮನದಲ್ಲಿ ಸುಳಿದಾಡಿತು

"ಏನ್ ಆಲೋಚಿಸುತ್ತಿದ್ದೀರಿ ? ನನಗೆ ನಿಮ್ಮ ಡೆಸ್ಟಿನೇಷನ್ ಹೇಗೆ ತಿಳಿಯಿತೆಂದೇ ? ವೆರಿ ಸಿಂಪಲ್. ನಗೆ ಇಂಟರ್ ನ್ಯಾಷನಲ್ ಪೊಲಿಟಿಕಲ್ ಸಿಚುಯೇಷನ್ ಬಗ್ಗೆ ಆಸಕ್ತಿ ಜಾಸ್ತಿ. ಜಗಾರಿನ್ ಲ್ಯಾಬ್ಸ್‌ನಲ್ಲಿ 'ಜರ್ಮನ್ ವಾರ್ ಫೇರ್'ಗೆ ಸಂಬಂಧ ಪಟ್ಟಂತಹ ಅಪಾಯಕರವಾದ ಆಯುಧಗಳು ತಯಾರಾಗುತ್ತಿವೆ. ಈ ಸಮಯದಲ್ಲಿ ಅದನ್ನು ನಿಮ್ಮಗಳ ಮೇಲೆ ಉಪಯೋಗಿಸಿರುತ್ತಾರೆ. ಹೌದಾ ?"

ವಿಶ್ವನಾಥ್‌ಗೆ ತಲೆ ಒಡೆದಂತೆ ತೋರುತ್ತದೆ.

ಆಕೆ ಹೇಳುತ್ತಿರುವ ಪ್ರತಿಯೊಂದು ಮಾತುಗಳೂ ನೂರಕ್ಕೆ ನೂರರಷ್ಟು ಸತ್ಯ.

ತಮ್ಮ ಬರುವಿಕೆಯನ್ನು, ಬಂದಿರುವ ಉದ್ದೇಶವನ್ನು ಯಾರಿಗೂ ತಿಳಿಯಕೂಡದೆಂದೇ ನ್ಯೂಕ್ಲಿಯರ್ ರಿಯಾಕ್ಟರನ್ನು ನಾಶ ಮಾಡಲು ಹೋಗುತ್ತಿದ್ದಂತೆ ನಾಟಕವಾಡಿ ಚೈನೀಸ್ ಮಧ್ಯೆ ಸೇರಿಕೊಂಡರು.

ಈಗ ಚೈನಾ ಮಿಲಿಟರಿ ಸೈನಿಕರ ದೃಷ್ಟಿಯೆಲ್ಲವೂ ವಾಂಟಸ್ ನಗರದ ಹತ್ತಿರ ಕೇಂದ್ರೀಕೃತವಾಗಿರುತ್ತದೆ.

'ಹಾಂಗ್ರಾ' ಅಡವಿಯಲ್ಲಿನ ಜಗಾರಿನ್ ಲ್ಯಾಬ್ಸ್‌ನ ಬಗ್ಗೆ ಯಾರಿಗೂ ಅಷ್ಟಾಗಿ ಗೊತ್ತಿರುವುದಿಲ್ಲ. ತಾವು ತಮ್ಮ ಕೆಲಸ ಪೂರ್ತಿ ಮಾಡಿಕೊಂಡ ಮೇಲೆ ಚೈನೀಸ್‌ಗೇ ಹೇಗೆ ಮೋಸಹೋದವೆಂದು ಅರ್ಥವಾಗುವುದಿಲ್ಲ.

ಅಂತಹುದರಲ್ಲಿ....!?

ಈ ಬೆಡಗಿನ ಹುಡುಗಿಗೆ ಎಲ್ಲಾ ವಿಷಯವೂ ಗೊತ್ತಿದೆ. ಮಿಲಿಟರಿ

ಕಮಾಂಡರ್‌ಗಿಂತ ಹೆಚ್ಚಿನ ತಲೆ ಇವಳಲ್ಲಿದೆ ಈಕೆಯನ್ನು ಸುಮ್ಮನೆ ಬಿಡಬಾರದು. ಹಾಗೇನಾದರೂ ಬಿಟ್ಟರೆ ಜೀವಕ್ಕೇ ಅಪಾಯ.

ಮೌನದಿಂದ ಉಳಿದಿರುವ ಆ ಇಬ್ಬರನ್ನು ನೋಡಿದ ವ್ಯಾಂಗ್ ಮೃದು ಮಂದಹಾಸವನ್ನು ಹೊರಗೆಡವಿದಳು

"ಹಾಂ....ಈಗ ನಿಮ್ಮ ಪ್ಲಾನ್ ಪೂರ್ತಿಯಾಗಿ ನನಗರ್ಥವಾಗಿದೆ. ಆದರೆ ನನ್ನ ಬಗ್ಗೆ ನೀವೇನೂ ಭಯಪಡಬೇಕಾಗಿಲ್ಲ. ಬಹುಶಃ ನನ್ನನ್ನು ಕೊಂದು ಹಾಕಬೇಕೆಂದು ನೀವುಗಳು ಆಲೋಚಿಸುತ್ತಿರಬಹುದು. ಅದರಿಂದ ನಿಮಗೇನೂ ಪ್ರಯೋಜನವಿಲ್ಲ. ಏಕೆಂದರೆ ಜಗಾರಿನ್ ಲ್ಯಾಬ್ಸ್‌ನ್ನು ಧ್ವಂಸ ಮಾಡಬೇಕೆಂದರೆ ಮಾನವ ದೃಷ್ಟಿಯಿಂದ ನನಗೆ ಇಷ್ಟ. ಅಂದ್ಹಾಗೆ ಇನ್ನೊಂದು ವಿಷಯ, ಆ ಜಗಾರಿನ್ ಲ್ಯಾಬ್ಸ್‌ನಲ್ಲಿ ನನ್ನ ತಮ್ಮ ಕೆಲಸ ಮಾಡುತ್ತಿದ್ದ"

ಆಕೆಯ ಮಾತನ್ನು ಕೇಳುತ್ತಾ ಸ್ತಂಭೀಭೂತರಾದರಿಬ್ಬರೂ.

ಕೊಂಚ ಹೊತ್ತಿನ ಬಳಿಕ ಚೇತರಿಸಿಕೊಂಡರು.

ಆಶ್ಚರ್ಯ ಚಕಿತರಾದರು.

ಕತ್ತಲೆಯಲ್ಲಿ ಆಕೆಯ ಮುಖ ಅಷ್ಟಾಗಿ ಗೋಚರಿಸಲಿಲ್ಲ.

"ನಾವುಗಳು ಬಹಳ ಟೈಮ್ ವೇಸ್ಟ್ ಮಾಡುತ್ತಿದ್ದೇವೆ. ಹುಂ ಸ್ಟಾರ್ಟ್ ಮಾಡಿ, ನಾನು ಡೈರೆಕ್ಷನ್ ಕೊಡುತ್ತೇನೆ"

ದೃಢವಾಗಿ ನುಡಿದಳು ವ್ಯಾಂಗ್.

ಆಕೆಯನ್ನು ಎಲ್ಲಿಯವರೆವಿಗೂ ನಂಬಬೇಕೆಂದು ಆಲೋಚಿಸುತ್ತಲೇ ಜೀಪನ್ನು ಸ್ಟಾರ್ಟ್ ಮಾಡಿದ ಮಹೇಶ.

ಬ್ರಿಗೇಡಿಯರ್ ವಿಶ್ವನಾಥ್ ಮೌನವಹಿಸಿದ.

ಮುಂದಿನ ದಾರಿ ನೋಡುವ ಸರದಿ ವ್ಯಾಂಗ್‌ಳದಾಯಿತು.

# 14

ಷಾಂಗ್ರಾ ಅಡವಿಗೆ ಸುಮಾರು ಇಪ್ಪತ್ತು ಕಿಲೋಮೀಟರ್ ದೂರದಲ್ಲಿ ಕಿವ ಒಂದು ಚಿಕ್ಕ ಗ್ರಾಮದೊಳಗೆ ಪ್ರವೇಶಿಸಿತು ಮಿಲಿಟರಿ ಜೀಪ್.

ಅದು ಮಿಲಿಟರಿ ಜೀಪಾದುದರಿಂದ ಆ ಗ್ರಾಮದ ಜನರಿಗೆ ಕುತೂಹಲದೊಂದಿಗೆ ಭಯವೂ ಕೊಂಚ ಆವರಿಸಿಕೊಂಡಿದೆ.

ಆದರೂ ತಮ್ಮ ಆತ್ರತೆಯನ್ನು ತಡೆಹಿಡಿಯಲಾಗದೆ ಅದನ್ನು ಅದರೊಳಗಿರುವ ಮನುಷ್ಯರನ್ನು ಗಮನಿಸತೊಡಗಿದರು.

ಈ ವಿಷಯದಲ್ಲಿ ಸ್ವಲ್ಪ ಆಂಧೋಳನಕ್ಕೆ ಗುರಿಯಾದರು ಮಹೇಶ ಮತ್ತು ವಿಶ್ವನಾಥರಿಬ್ಬರೂ.

"ನಾವು ಅನವಶ್ಯಕವಾಗಿ ಟ್ರೈವಲ್ ವೇಸ್ಟ್ ಮಾಡುವುದರೊಂದಿಗೆ ಅವರುಗಳ ದೃಷ್ಟಿಗೆ ಬೀಳುತ್ತಿದ್ದೇವೆ"

ಎಂದನು ವಿಶ್ವನಾಥ.

"ನೀವು ಅವರುಗಳ ಬಗ್ಗೆ ಭಯ ಪಡಬೇಕಾದ ಅವಶ್ಯಕತೆಯೇನಿಲ್ಲ. ಸುಮಾರು ಎಲ್ಲರೂ ನನಗೆ ಗೊತ್ತಿರುವವರೇ. ನಾನು ಅವರಲ್ಲಿ ಮನೆ ಮಾಡಿಕೊಂಡಿರುವ ಅನುಮಾನದ ಪಿಶಾಚಿಯನ್ನು ಹೋಗಲಾಡಿಸುತ್ತೇನೆ"

ಇಬ್ಬರಿಗೂ ಧೈರ್ಯ ತಂದುಕೊಟ್ಟಳು ವ್ಯಾಂಗ್.

ಒಂದು ಚಿಕ್ಕ ಮನೆಯ ಮುಂದೆ ನಿಂತಿತು ಆ ಮಿಲಿಟರಿ ಜೀಪ್.

ಒಳಗೆ ಯಾವೊಂದು ಶಬ್ದವೂ ಕೇಳಿಬರುತ್ತಿಲ್ಲ.

ವ್ಯಾಂಗ್ ಜೀಪಿನಿಂದ ಕೆಳಗಿಳಿಯುತ್ತಾ—

"ಬನ್ನಿ, ಇದೇ ನನ್ನ ತಮ್ಮನ ಮನೆ...."

ಎಂದು ಆಕೆ ವಿನಯದಿಂದ ಆಹ್ವಾನಿಸಿದಳು.

ಮಹೇಶ, ವಿಶ್ವನಾಥರಿಬ್ಬರೂ ಜೀಪಿನಿಂದ ಕೆಳಗಿಳಿದರು.

ವ್ಯಾಂಗ್ ಮೊದಲು ಆ ಮನೆಯೊಳಗೆ ಪ್ರವೇಶಿಸಿದಳು.

ಆಕೆಯನ್ನು ಅನುಸರಿದರು ಈ ಇಬ್ಬರು.

ಜೀಪಿನ ಶಬ್ದವನ್ನು ಕೇಳಿಸಿಕೊಂಡು ಆಗತಾನೇ ಹೊರಗೆ ಬರುವ ಹವ ಣಿಕೆಯಲ್ಲಿದ್ದ ಒಬ್ಬ ಯುವಕ.

ಆತ ತನ್ನ ಅಕ್ಕನನ್ನು ನೋಡುತ್ತಲೇ ಕಂಗಳು ಆನಂದದಿಂದ ಹಿಗ್ಗಿದವು.

ಆಕೆಯ ಹಿಂದಿರುವ ಮಿಲಿಟರಿ ಅಧಿಕಾರಿಗಳ ವೇಷದಲ್ಲಿದ್ದಂತಹ ವ್ಯಕ್ತಿಗಳನ್ನು ನೋಡುತ್ತಲೇ ಭಯದ ಭೂತ ಆವರಿಸಿತು ಅವನಲ್ಲಿ.

"ಈತನ ಹೆಸರು ವಾಂಜುಂಗ್ !"

ಎಂದು ಆ ಇಬ್ಬರಿಗೂ ಪರಿಚಯಿಸಿದಳು ವ್ಯಾಂಗ್.

"ವಾಂಜುಂಗ್ ! ಈ ರಾತ್ರಿ ಮಾತ್ರ ನಾವಿಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತೇವೆ. ಅದಕ್ಕೆ ನಿನ್ನ ಸಂಪೂರ್ಣ ಸಹಾಯ ನಮಗೆ ಬೇಕಿದೆ"

ಯಾಚಿಸಿದಳಾಕೆ.

"ಏನದು....?"

ಆಶ್ಚರ್ಯ ಸೂಚಕ ನೋಟವನ್ನು ಬೀರಿ ಪ್ರಶ್ನಿಸಿದ ವಾಂಜುಂಗ್.

"ಹೇಳ್ತೇನೆ. ಮೊದಲು ಊಟದ ಏರ್ಪಟನ್ನು ಮಾಡು"

ಎಂದು ಹೇಳಿದಳು ವ್ಯಾಂಗ್.

ಲೈಟಿನ ಕಾಂತಿಯಲ್ಲಿ ಥಳಥಳಿಸುತ್ತಿರುವ ಆಕೆಯ ಶರೀರವನ್ನೇ ನೋಡುತ್ತಾ ಮುಂದಕ್ಕೆ ನಡೆದರು ಮಹೇಶ್, ವಿಶ್ವನಾಥರಿಬ್ಬರೂ.

• • • •

ಮಧ್ಯ ರಾತ್ರಿ !

ಊರೆಲ್ಲಾ ನಿಶ್ಶಬ್ದವಾಗಿ ನಿದ್ದೆಯಲ್ಲಿ ಮುಳುಗಿರುವ ಸಮಯ

ವಾಂಜುಂಗ್ ಮನೆಯಲ್ಲಿ ಮಾತ್ರ ಹಣತೆಯೊಂದು ಚಿಕ್ಕದಾಗಿ ಉರಿಯುತಿದೆ.

ಬಹಳ ಲೋಪಿಚ್‌ನಲ್ಲಿ ಮಾತನಾಡುತ್ತಿದ್ದಾರೆ ಆ ನಾಲ್ವರೂ.

ವಾಂಜುಂಗ್ ಬಗ್ಗೆ ವ್ಯಾಂಗ್ ಹೇಳಿದ ವಿಷಯಗಳನ್ನು ಕೇಳಿದರೇನೇ ಮೈಯೆಲ್ಲ ಜುವ್ವೆನ್ನುವಂತಾಯಿತು ಮಹೇಶ ಮತ್ತು ವಿಶ್ವನಾಥರಿಗೆ

ವಾಂಜುಂಗ್ ಇಪ್ಪತ್ತರವರೆವಿಗೂ ಜಗಾರಿನ್ ಲ್ಯಾಬ್ಸ್‌ನಲ್ಲಿ, ಸ್ಟೋರ್ಸ್ ಪರ್ಚೇಸರ್ ಆಫೀಸರ್‌ಗೆ ಅಸಿಸ್ಟೆಂಟ್ ಆಗಿ ಪರ್‌ಚೇಸ್ ಮಾಡಿದ್ದ.

ಆದರೆ ಒಂದು ಭಾರಿ ಲ್ಯಾಬ್‌ನಲ್ಲಿ ಸಂಭವಿಸಿದ ಅಪಾಯದಲ್ಲಿ ಆತನೊಳಗೆ ಅಪಾಯಕರವಾದ ಜರ್ಮ್ಸ್ ಪ್ರವೇಶಿಸಿದವು.

ಅದಕ್ಕೆ ಕಾರಣಕರ್ತರ್‍ಯಾರೆಂದು ತಿಳಿಯಲಿಲ್ಲ. ಅದನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಸರ್ಕಾರ ಆತನಿಗೆ ಕಾಂಪನ್‌ಸೇಷನ್ ಕೊಟ್ಟು ಮನೆಗೆ ಕಳುಹಿಸಿದೆ.

ಆದಾದ ನಂತರ ಆತನಿಗೆ ಗೊತ್ತಾಯಿತು – ಇದಕ್ಕೆ ಮೂಲ ಕಾರಕರ್‍ಯಾರೆಂದು.

ಆದರೇನು ಮಾಡಲು ಸಾಧ್ಯ.

ಅಂದಿನಿಂದಲೂ ಆತನಿಗೆ ಜಗಾರಿನ್ ಲ್ಯಾಬೆಂದರೆ ಮೈಯೆಲ್ಲಾ ಉರಿ.

ಮಹೇಶ್ ಮತ್ತು ವಿಶ್ವನಾಥ್‌ರಿಗೆ ಪೂರ್ತಿ ಸಹಾಯವನ್ನು ಮಾಡಲು ಮನಃಸ್ಫೂರ್ತಿಯಿಂದ ಅಂಗೀಕರಿಸಿದ ವಾಂಜುಂಗ್.

ಅಕ್ಕ ತಮ್ಮರಿಬ್ಬರೂ ಒಂದು ಕೊಠಡಿಯಲ್ಲಿ.

ಹೊರಗಿನ ಕೊಠಡಿಯಲ್ಲಿ ಮಹೇಶ್ ಮತ್ತು ವಿಶ್ವನಾಥ್ ಮಲಗಿದರು.

ಅವರುಗಳು ನಿದ್ರಾ ಲೋಕಕ್ಕೆ ಜಾರುವಷ್ಟರಲ್ಲಿ ಸಮಯ ಒಂದು ಗಂಟೆ.

ವಿಪರೀತವಾಗಿ ಆಲಸಿಕೆಯಿಂದ ನಿದ್ರಾದೇವಿ ಬೇಗನೆ ಆವರಿಸಿದಳು ಮಹೇಶ್‌ಗೆ. ಆದರೆ ವಿಶ್ವನಾಥ್‌ಗೆ ಮಾತ್ರ ಮತ್ತಿನ್ನೂ ಸ್ವಲ್ಪ ಹೊತ್ತು ಎಚ್ಚರಿಕೆಯಿಂದ ಇರಲು ನಿರ್ಣಯಿಸಿಕೊಂಡು ಆ ಗಾಢ ಕತ್ತಲಲ್ಲಿಯೇ ಮಂಚದ ಮೇಲೆ ಎದ್ದು ಕುಳಿತುಕೊಂಡ.

ಸುಮಾರು ಒಂದು ಗಂಟೆ ಕಳೆದರೂ ಆತನು ಊಹಿಸಿದಂತಹ ದುರ್ಘಟನೆಗಳೇನೂ ಸಂಭವಿಸಲಿಲ್ಲ

ನಂತರ ಶಾಂತರೀತಿಯಲ್ಲಿ ನಿದ್ರಾದೇವಿ ಆವರಿಸಿದಳು.

○ ○ ● ●

ಗಾಢ ನಿದ್ರೆಯಲ್ಲಿರುವ ಮಹೇಶ್‌ಗೆ ವಾಸನೆಯೊಂದು ಎಚ್ಚರಿಸಿತು.

ಚಟಕ್ಕನೆ ಕಣ್ಣು ತೆರೆದು ನೋಡಿದ.

ಕಣ್ಣಿಗೇನೂ ತೋರುತ್ತಿಲ್ಲ ಕಪ್ಪು ಕತ್ತಲಾವರಿಸಿದೆ.

ಕಣ್ಣುಗಳೆರಡನ್ನೂ ಅಗಲಿಸಿ, ಮತ್ತೊಂದು ಬಾರಿ ವಾಸನೆ ನೋಡಿದ.

ಸಂದೇಹವೇ ಇಲ್ಲ!

ಅದು ಪೆಟ್ರೋಲ್ ವಾಸನೆ.

ಎಲ್ಲಿಂದ ಬರುತ್ತಿದೆ

ಜೀಪಿನಿಂದಿರಬಹುದೆ ?

"ಉಹುಂ....ಇಲ್ಲ !"

ಇಲ್ಲೇ ಹತ್ತಿರದಲ್ಲೇ.

ಅಪಾಯದ ಗಂಟೆ ನೊಳಗುತ್ತಿದೆ ಆತನ ಸಿಕ್ತ್ ಸೆನ್ಸ್.

ಟೈಮನ್ನು ನೋಡಿಕೊಂಡ.

ರೇಡಿಯಂ ಡಯಲ್ ಬೆಳಗಿನ ಜಾವ ಮೂರು ನಲವತ್ತು ತೋರಿಸುತ್ತಿದೆ.

ಮೆಲ್ಲನೆ ಕೈಗಳನ್ನು ಚಾಚಿ ಪಕ್ಕದಲ್ಲೇ ಇದ್ದ ವಿಶ್ವನಾಥ್‌ನನ್ನು ಎಚ್ಚರಿಸಿದ.

"ಐ ಗಾಟ್ ಇಟ್...."

ಎಂದು ಮೆಲ್ಲನೆ ಮುಲುಗಿದ ವಿಶ್ವನಾಥ್

ಯಾರು ಮಾಡಿರುತ್ತಾರೆ ಈ ಕೆಲಸವನ್ನು ?

ವ್ಯಾಂಗ್ ಇರಬಹುದೇ ?

ಆಕೆಯ ತಮ್ಮನಾದ ವಾಂಚುಂಗ್ ಇರಬಹುದೇ ?

ಇವರಿಬ್ಬರೂ ಏನಾದರು ?

ಚಟಕ್ಕನೆ ಎದ್ದು ನಿಂತುಕೊಂಡರಿಬ್ಬರೂ ಇಬ್ಬರ ಮನದಲ್ಲೂ ಒಂದೇ ರೀತಿಯ ಪ್ರಶ್ನೆಗಳು ಕಾಡತೊಡಗಿದವು.

ಆ ಕಪ್ಪು ಕತ್ತಲೆಯಲ್ಲೇ ಬಾಗಿಲ ಬಳಿಗೆ ನಡೆದು ಬಂದು ತಮ್ಮ ಬಲವನ್ನೆಲ್ಲಾ ಬಿಟ್ಟು ಎಳೆದರು.

ಹೊರಗಡೆಯಿಂದ ಬೋಲ್ಟನ್ನು ಜಡಿದಿರುವುದರಿಂದ ಅದು ಬರಲಿಲ್ಲ.

ಅದೇ ಕ್ಷಣದಲ್ಲಿ ಹಿಂದೆ ಶಬ್ದವಾಯಿತು.

ಗಿರಕ್ಕನೆ ಹಿಂದಿರುಗಿದರಿಬ್ಬರೂ.

"ಏನು ? ಏನೀ ವಾಸನೆ ?"

ಕಂಗಲಾಗಿ ಕೇಳುತ್ತಿದ್ದಾಳೆ ವ್ಯಾಂಗ್.

ಒಂದೇ ಜಂಪ್‌ನಲ್ಲಿ ಆಕೆಯ ಹತ್ತಿರ ಸಮೀಪಿಸಿ ಚಟಕ್ಕನೆ ಆಕೆಯ ಬಾಯಿಯನ್ನು ಮುಚ್ಚಿದ ಮಹೇಶ

ಬಿಡಿಸಿಕೊಳ್ಳಲು ಕೊಸರಾಡಿದಳು ವ್ಯಾಂಗ್.

"ಹುಷ್ ! ಮನೆ ಪೂರಾ ಪೆಟ್ರೋಲನ್ನು ಚೆಲ್ಲಿದ್ದಾರೆ. ಅಪ್ಪಿತಪ್ಪಿಯೂ ಸಹ ಬೆಂಕಿಯನ್ನು ಹಚ್ಚಿಸಲೋಗಬೇಡಿ"

ಆಕೆಗೆ ಮಾತ್ರ ಕೇಳಿಸುವಂತೆ ಹೇಳಿದ ಮಹೇಶ.

ವ್ಯಾಂಗ್ ಅದುರಿಬಿದ್ದಳು

"ಯಾರು....?"

ಮಹೇಶ ಆಕೆಯ ಬಾಯಿಂದ ತನ್ನ ಕೈಯನ್ನು ತೆಗೆಯುತ್ತಲೇ ಪ್ರಶ್ನಿಸಿದಳು ತನ್ನ ಒಣಗುತ್ತಿರುವ ಕಂಠದಿಂದ

"ಗೊತ್ತಿಲ್ಲ, ಅಂದ ಹಾಗೆ ನಿನ್ನ ತಮ್ಮನೆಲ್ಲಿ ?"

"ಇನ್ನೂ ನಿದ್ರಾವಸ್ಥೆಯಲ್ಲಿದ್ದಾನೆ"

"ತಕ್ಷಣವೇ ಅತನನ್ನು ಎಚ್ಚರಿಸು. ಇಲ್ಲಿಂದ ನಾವು ಹೊರಬೀಳಬೇಕು ಹಿಂಬದಿಯಿಂದೇನಾದರೂ ದಾರಿಯಿದೆಯೇ ?"

"ಹೌದು....ಇದೆ"

ಎಂದಳು ವ್ಯಾಂಗ್ ಮುಂದಕ್ಕೆ ಹೋಗುತ್ತಾ.

ಆ ಸಮಯದಲ್ಲೇ ವಾಂಜುಂಗ್ ಅವರನ್ನು ಸೇರಿಕೊಂಡ

"ನಾವುಗಳು ಎಚ್ಚರಿಕೆಯಲ್ಲಿ ಇದ್ದೀವೆಂದು ಹೊರಗಿನವರಿಗೆ ತಿಳಿಯಕೂಡದು ನಾವು ಹೊರಗಡಿ ಇಟ್ಟ ಕ್ಷಣದಲ್ಲೇ ನಮ್ಮನ್ನು ಶೂಟ್ ಮಾಡಿಬಿಡುತ್ತಾರೆ"

"ಹಾಗಾದ್ರೆ ಈಗ ಏನ್ಮಾಡೋದು ?"

ವಾಂಜುಂಗ್ ಕೇಳಿದ.

"ನಡೆಯಿರಿ, ಮೊದಲು ನೀವು ದಾರಿ ಕ್ರಮಿಸಿ. ನಿಮ್ಮ ಹಿಂದೆ ನಾವು ಬರುತ್ತೇವೆ. ಒಂದು ಚೂರೂ ಶಬ್ದವಾಗಬಾರದು"

ಎಂದು ಎಚ್ಚರಿಸಿದ ವಿಶ್ವನಾಥ್.

ಆತನ ತಲೆಯಲ್ಲಿ ಅನೇಕ ಆಲೋಚನೆಗಳು ಗಿರ್ರನೆ ತಿರುಗುತ್ತಿವೆ.

ಶತ್ರುಗಳ ಕಣ್ಣಿಗೆ ನಾವು ತೋರಿದೆವಾ ?

ಈ ಮೊದಲೇ ಅವರ್‍ಯಾಕೆ ನಮ್ಮನ್ನು ಅಟ್ಯಾಕ್ ಮಾಡಲಿಲ್ಲ ?

ಜಗಾರಿನ್ ಲ್ಯಾಬ್‌ಗೆ ಹೋಗುತ್ತಿರುವೆವೆಂದು ಚೈನೀಸ್ ಅದನ್ನು ಗ್ರಹಿಸಿ ತಮ್ಮನ್ನು ಕೊಲ್ಲಲು ಬಂದಿರಬಹುದೇ ?

ಅಷ್ಟರಲ್ಲೇ ಠಂಗನೆ ಯಾವುದೋ ಗ್ಲಾಸ್ ಕೆಳಗೆ ಬಿದ್ದಂತಹ ಶಬ್ದವಾಯಿತು.

ನಿಶ್ಶಬ್ದವಾಗಿರುವ ಆ ಮನೆಯಲ್ಲಿ ಪ್ರತಿಧ್ವನಿಸಿತು ಆ ಶಬ್ದ.

ಉಸಿರು ಕಟ್ಟಿದಂತಾಯಿತು ಆ ನಾಲ್ವರಿಗೂ.

ಅದೇ ಕ್ಷಣದಲ್ಲಿ ಯಾವುದೋ ಬೆಂಕಿಉಂಡೆಯೊಂದು ಅವರ ಮನೆಯ ಮೇಲೆ ಬಿದ್ದಿತು.

ಭಗ್ಗನೆ ಹೊತ್ತಿಕೊಂಡಿತು ಆ ಮನೆ.

ಕಿಟಾರನೆಂದು ಕಿರುಚಿದಳು ವ್ಯಾಂಗ್.

ಹತ್ತಿರದಲ್ಲಿರುವ ಬಾಗಿಲನ್ನು ಇರುವ ಬಲವನ್ನೆಲ್ಲಾ ಬಿಟ್ಟು ಅದು ಒಡೆಯುವಂತೆ ಮಾಡಿದರು ಮಹೇಶ್, ವಿಶ್ವನಾಥರಿಬ್ಬರು.

ಭಗ ಭಗನೆ ಉರಿಯುತ್ತಿರುವ ಮನೆಯ ಬೆಳಕಿನಲ್ಲಿ ಹೊರಗಿನ ಖಾಲಿ ಪ್ರದೇಶ ತೋರಿತು.

ಅದೇ ಕ್ಷಣದಲ್ಲಿ ಕೋಲಾಹಲ ಶುರುವಾಯಿತು ಆ ಬೀದಿಯ ಪೂರಾ.

ಆ ಮನೆಯನ್ನು ಹೊಂದಿಕೊಂಡಂತೆ ಯಾವುದೊಂದು ಮನೆಯೂ ಇಲ್ಲದಿರುವುದರಿಂದ ಶತ್ರುಗಳಿಗೆ ಕೆಲಸ ಬಹಳ ಸುಲಭವಾಯಿತು.

ಅವರ ಕಾಲ್ಗಳು ಹೊರಗಡಿಯಿಟ್ಟ ಮರುಕ್ಷಣದಲ್ಲೇ –

"ಸ್ಟಾಪ್ ದೇರ್ ! ಡೋಂಟ್ ಮೂವ್...."

ಕರ್ಕಶವಾದ ಧ್ವನಿಯೊಂದು ಕೇಳಿಸಿತು.

ಇನ್ನು ತಾವು ಬಂಧಿತರಾಗುತ್ತೇವೆಂದು ವಿಶ್ವನಾಥ್‌ಗೆ ತಿಳಿಯಿತು.

ಆದರೆ ವಿಧಿಯಿಲ್ಲ....!

ಹೊರಗೆ ಬಂದಂತಹ ನಾಲ್ವರನ್ನೂ ಚೈನಾ ಸೈನಿಕರು ಸುತ್ತುವರೆದರು

ಸುಮಾರು ಹತ್ತು ಜನ ಸೈನಿಕರಿದ್ದರು.

ಮನೆ ಮಾತ್ರ ಅಗ್ನಿದೇವನಿಗೆ ಆಹುತಿಯಾಗಿದೆ.

# 15

ಗೂಡ್ಸ್ ಡೆಲಿವರಿ ವ್ಯಾನ್‌ನಲ್ಲಿ ಎದುರುಬದುರಾಗಿ ಕುಳಿತಿದ್ದಾರೆ ಮಹೇಶ್ ಮತ್ತು ವಿಶ್ವನಾಥರು.

ಅವರಿಬ್ಬರ ಪಕ್ಕದಲ್ಲೇ ವ್ಯಾಂಗ್ ಮತ್ತು ಆಕೆಯ ತಮ್ಮನಾದ ವಾಂಚುಂಗ್ ಕುಳಿತಿದ್ದಾರೆ.

ಶರವೇಗದಲ್ಲಿ ಸಾಗುತ್ತಿದೆ ಮಿಲಿಟರಿ ವ್ಯಾನ್.

ವ್ಯಾನ್ ಮೂವ್ ಆಗುತ್ತಿದ್ದಂತೆಯೇ ಒಬ್ಬರಿಗೊಬ್ಬರು ಕಣ್ಣಿನಲ್ಲೇ ಮಾತನಾಡಲ ಶುರುಮಾಡಿದರು.

ಚೈನಾ ಸೈನಿಕರು ಬಂಧಿಸಿದ್ದರಿಂದ ಮೌನ ವ್ರತವನ್ನು ಪ್ರಾರಂಭಿಸಿದರು ಮಹೇಶ್ ಮತ್ತು ವಿಶ್ವನಾಥರಿಬ್ಬರೂ

ಗ್ರೂಪ್ ಲೀಡರ್ ಕೇಳಿದ ಪ್ರಶ್ನೆಗಳಿಗೆ ಅವರ ಮೌನವೇ ಉತ್ತರ.

ಆತನಿಗೆ ಪಿತ್ಥ ನೆತ್ತಿಗೇರಿತು

ಅವರಿಬ್ಬರನ್ನೂ ನೋಡಿ ವ್ಯಾಂಗ್, ವಾಂಚುಂಗ್ ಸಹ ಮೌನ ತಾಳಿದರು

ಇದರಿಂದ ಅಗ್ನಿಗೆ ಆಜ್ಯ ಸುರಿದಂತೆ ಆಗಿದೆ

ಆತನ ಕೋಪ ದುಪ್ಪಟ್ಟಾಯಿತು.

ಆತನ ಕೈಯಲ್ಲಿದ್ದಂತಹ ರಿವಾಲ್ವರ್‌ನ ಹಿಂಬದಿ ನಾಲ್ವರ ಹೊಟ್ಟೆಯ ಮೇಲೆ, ಭುಜ ಸ್ಕಂದಗಳ ಮೇಲೆ ಮುತ್ತಿಕ್ಕಿದವು.

ಅವರಿಬ್ಬರಿಗೂ ಗೊತ್ತು ಇವರಿಂದ ತಪ್ಪಿಸಿಕೊಳ್ಳುವುದು ಅಷ್ಟು ಸುಲಭ ವಾದ ಕೆಲಸವಲ್ಲವೆಂದು.

ಆದರೆ ವ್ಯಾಂಗಳ ವಿಷಯ ?

ಹೊರಗಿನ ಕಾಂತಿ ಕೊಂಚ ಮಾತ್ರವೂ ಒಳಗೆ ಬರಲಿಲ್ಲ. ಬರಲವಕಾಶ ವಿಲ್ಲ.

ಬೆಳಗಿನ ಜಾವದಂತೆ ತೋರುತ್ತಿದೆ.

ಟೈಮನ್ನು ನೋಡಿಕೊಳ್ಳಲು ಅವರಲ್ಲಿದ್ದ ಗಡಿಯಾರವನ್ನೂ ಸಹ ಮಿಲಿಟರಿ ಸೈನಿಕರ ವಶಪಡಿಸಿಕೊಂಡಿದ್ದಾರೆ.

ವ್ಯಾಂಗ್‌ಳ ತಲೆ ಮಹೇಶನ ಭುಜದ ಮೇಲೆ ನೀರಸದಿಂದ ವಾಲಿದೆ.

ವಾಂಜುಂಗ್‌ನ ಪರಿಸ್ಥಿತಿಯೂ ಅದೇ ರೀತಿಯದಾಗಿದೆ.

'ಟಕ್ ಟಕ್' ಎನ್ನುತ್ತಾ ಬೂಟಿನಿಂದ ವ್ಯಾನ್ ಪ್ಲೋರಿನ ಮೇಲೆ ಶಬ್ದ ಮಾಡಿದ ವಿಶ್ವನಾಥ್.

ಏನನ್ನೋ ಹೇಳತೊಡಗಿದ್ದಾನೆ ಆತ.

ಕಿವಿಗಳನ್ನು ನಿಮಿರಿಸಿಕೊಂಡ ಮಹೇಶ.

ಟಕ್ ಟಕ್....ಟಕಾಟಕ್....

ಐದಾರು ನಿಮಿಷಗಳವರೆವಿಗೆ ಸಾಗಿತು ಆ ಶಬ್ದ.

ವಿಶ್ವನಾಥ್‌ನ ಪ್ಲಾನ್ ಪೂರ್ತಿಯಾಗಿ ಅರ್ಥವಾಗಿದೆ ಮಹೇಶನಿಗೆ.

ಸಾಧ್ಯವಾದರೆ ವ್ಯಾಂಗ್ ಮತ್ತು ವಾಂಜುಂಗರನ್ನು ಬಿಡಿಸಿಕೊಂಡು ತಮ್ಮಗಳ ಕಾರ್ಯವನ್ನು ಪೂರೈಸಿಕೊಳ್ಳಬೇಕು.

ಹೌದು....!

ಅದೇ ಅಂತಿಮ ನಿರ್ಣಯ !

ತಾವು ಬಂದದ್ದು ಇದಕ್ಕಾಗಿ ಅಲ್ಲವೇ ಅಲ್ಲ.

ಸೆಂಟಿಮೆಂಟ್‌ಗಳನ್ನಿರಿಸಿಕೊಂಡರೆ ಕೆಲಸಗಳ್ಯಾವುದೂ ಮುಂದುವರೆಯದು.

ಸುಮಾರು ಅರ್ಧ ಗಂಟೆ ಕಳೆದಿದೆ.

ಈ ಅರ್ಧ ಗಂಟೆ ಪೂರಾ ಎರಡು ಮೂರು ವಾಹನಗಳು ಬರುವುದನ್ನು ಗಮನಿಸಿದರು.

ಮಹೇಶ್ ವ್ಯಾಂಗ್‌ಳನ್ನು ಪಕ್ಕದಲ್ಲಿ ಮಲಗಿಸಿ ಹಿಂಬದಿಯ ಬಾಗಿಲ ಸಂದಿಯಲ್ಲಿ ಒಂಟಿ ಕಣ್ಣಿನಿಂದ ನೋಡಿದ

ಅತ್ತಿತ್ತ ದಟ್ಟವಾಗಿ ಬೆಳೆದಿರುವ ವೃಕ್ಷಗಳ ಮಧ್ಯೆ ಕಪ್ಪನೆಯ ಟಾರ್ ರೋಡಿನ ಮೇಲೆ ಸಾಗುತ್ತಿದೆ ಮಿಲಿಟರಿ ವ್ಯಾನ್

ಅಂದರೆ ತಮ್ಮನ್ನು ಷಾಂಗ್ರಿ ಅಡವಿಯಲ್ಲಿರುವ ಸೆಕ್ಯೂರಿಟಿ ಕ್ಯಾಂಪ್‌ಗೆ ಕರೆದುಕೊಂಡು ಹೋಗುತ್ತಿದ್ದಾರೆ.

ಆತ ಹಿಂತಿರುಗಿ ವಿಶ್ವನಾಥ್‌ನ ಕಿವಿಯಲ್ಲಿ ಈ ವಿಷಯವನ್ನು ಅರುಹಿದ.

ವಾಂಜುಂಗ್ ಎಚ್ಚರಿಕೆಯಿಂದ ಉಳಿದಿದ್ದು ಇವರಿಬ್ಬರ ವ್ಯವಹಾರವನ್ನು ಗಮನಿಸುತ್ತಲೇ ಕುಳಿತಿದ್ದಾನೆ.

ವಿಶ್ವನಾಥ್‌ನ ಸನ್ನೆಯೊಂದಿಗೆ ಮಹೇಶ ಮುಂದಕ್ಕೆ ಬಂದು ಡ್ರೈವರ್ ಹತ್ತಿರವಿರುವ ಪೆನ್‌ಹೋಲ್‌ನ ಮೇಲೆ ದಬದಬನೆ ಹೊಡೆದ.

"ಏನಾಯ್ತು ?"

ಹೋಲ್‌ನ ಬಾಗಿಲನ್ನು ತೆರೆದು ಕೋಪದಿಂದ ಪ್ರಶ್ನಿಸಿದ ಡ್ರೈವರ್.

"ಇಲ್ಲಿ ಇವಳಿಗೆ ಪ್ರಜ್ಞೆ ತಪ್ಪಿದೆ. ಒಂದು ಚೂರೂ ಗಾಳಿಯಿಲ್ಲ. ಇನ್ನು ಸ್ವಲ್ಪ ಹೊತ್ತಿನಲ್ಲಿ ಉಸಿರಾಡಲು ಗಾಳಿ ಸಿಗದೆ ಇದ್ದರೆ ಆಕೆ ಸಾಯುವುದಂತೂ ಗ್ಯಾರಂಟಿ"

ಆತುರಾತುರದಿಂದ ನುಡಿದ ಮಹೇಶ.

ನಿರ್ಲಕ್ಷ್ಯದಿಂದ ಬಾಗಿಲನ್ನು ಹಾಕಲೋದ ಆ ಡ್ರೈವರ್.

ಆ ಸಮಯದಲ್ಲೇ ತನಗೆ ಬೇಕಾದ್ದನ್ನು ನೋಡಿಬಿಟ್ಟ ಮಹೇಶ.

ಗ್ರೂಪ್ ಲೀಡರ್ ಮತ್ತು ಆತನ ಅನುಚರರು ಮುಂದಿರುವ ಚಿಕ್ಕ ಟ್ರಕ್ಕಿನಲ್ಲಿ ಟೆನ್ಷನ್‌ನಿಂದ ಸಾಗಿ ಹೋಗುತ್ತಿದ್ದಾರೆ.

"ಸರಿ ಹಾಗಾದ್ರೆ....ಆಕೆ ಸತ್ತರೆ ಸಂಶಯ ಬರುವುದು ನಿನ್ನ ಮೇಲೆಯೇ. ಆಕೆಗೇನಾದರೂ ಆಯಿತೆಂದರೆ ಗ್ರೂಪ್ ಲೀಡರ್ ನಿನ್ನ ಮೇಲೆ ಕೋಪಿಸಿಕೊಳ್ಳುತ್ತಾನೆ"

ಬಹಳ ಸಿಂಪಲ್ಲಾಗಿ ಹೇಳಿ ತನ್ನ ಸೀಟಿನಲ್ಲಿ ಬಂದು ಕುಳಿತುಕೊಂಡ ಮಹೇಶ.

ಡ್ರೈವರ್ ಈಗ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದಾನೆ.

ಎರಡು ನಿಮಿಷಗಳ ನಂತರ ವ್ಯಾನಿನ ಹಾರನ್ನನ್ನು ಎರಡು ಮೂರು ಬಾರಿ ಒತ್ತಿ ವ್ಯಾನನ್ನು ನಿಲ್ಲಿಸಿದ

ಮುಂದೆ ಸಾಗಿ ಹೋಗುತ್ತಿರುವ ಟ್ರಕ್ ಸಹ ನಿಂತಿತು

ಗ್ರೂಪ್ ಲೀಡರ್‌ಗೆ ವಿಷಯ ಗೊತ್ತಾಯ್ತು

"ಆಕೆಯನ್ನು ಹೊರಗೆ ಎಳೆದು ತನ್ನಿ"

ಆರ್ಡರ್ ಜಾರಿ ಮಾಡಿದನಾತ

ಬ್ಯಾಕ್ ಡೋರ್‌ಗೆ ಎಡಬಲಕ್ಕೆ ಒಬ್ಬೊಬ್ಬರು ರೆಡಿಯಾಗಿ ನಿಂತಿದ್ದಾರೆ.

ಸಬ್ ಮೆಷಿನ್ ಗನ್‌ನೊಂದಿಗೆ ಇಬ್ಬರು ಸೆಂಟ್ರಿಗಳು ಹಿಂಬದಿಯ ಬಾಗಿಲನ್ನು ತೆರೆಯಲು ಅಣಿಯಾದರು

ಇನ್ನೇನು ತೆರೆಯಬೇಕೆನ್ನುವಷ್ಟರಲ್ಲಿ ಭಳ್ಳನೆ ಬ್ಯಾಕ್ ಡೋರ್ ತನ್ನಷ್ಟಕ್ಕೆ ತಾನೇ ತೆರೆದುಕೊಂಡಿತು.

ಮುಖ ಚೆಲ್ಲಾಚೆದುರಾದಂತೆ ನಾಲ್ಕು ದಿಕ್ಕುಗಳು ತತ್ತರಿಸುವಂತೆ ಕಿರುಚಿದರು.

ಈ ಅನಿರೀಕ್ಷಿತ ಘಟನೆಯಿಂದ ಗ್ರೂಪ್ ಲೀಡರ್ ತತ್ತರಿಸಿ ಹೋದ

ಆತ ಮುಂದಕ್ಕೆ ಬರುವಷ್ಟರಲ್ಲಿಯೇ ವಿಶ್ವನಾಥ್, ಮಹೇಶ್‌ರಿಬ್ಬರೂ ಎಗರಿ ಹೊರಕ್ಕೆ ಜಂಪ್ ಮಾಡಿ ಅಲ್ಲಿ ನಿಂತಿರುವ ಇಬ್ಬರು ಸೈನಿಕರ ಕೈಯಲ್ಲಿದ್ದ ಗನ್ನನ್ನು ಕಿತ್ತುಕೊಂಡು ದೂರದಲ್ಲಿ ನಿಂತಿರುವ ಸೈನಿಕರೆಡೆಗೆ ಗುರಿ ನೋಡಿ ಟ್ರಿಗ್ಗರನ್ನು ಅದುಮಿದರು

"ಗಜ್....ಜ್....ಗಜ್"

ಎನ್ನುತ್ತಾ ಅರಣ್ಯ ಪ್ರಾಂತ ಪ್ರತಿಧ್ವನಿಸುವಂತೆ ಅರ್ಧ ನಿಮಿಷಗಳ ಕಾಲ ಗನ್ಸ್ ಮೊಳಗಿದವು

ಅಲರ್ಟಾಗಿ ಇಲ್ಲದಿದ್ದುದರಿಂದ ಚೈನಾ ಮಿಲಿಟರಿ ಪೌರರು ಅವರುಗಳ ಗುಂಡುಗಳಿಗೆ ಬಲಿಯಾಗಿ ಸಾವನ್ನಪ್ಪಿದರು.

ಗ್ರೂಪ್ ಲೀಡರ್‌ನ ಮುಖವಂತೂ ವರ್ಣಿಸಲಸಾಧ್ಯ.

ಮುಖವೆಲ್ಲಾ ಜಜ್ಜಿ ಹೋಗಿದೆ. ಗುರುತಿಸಲಸಾಧ್ಯ.

"ಗುಡ್ ಷಾಟ್ ಮಹೇಶ್! ಹರಿಯಪ್, ಇವರುಗಳ ಶವಗಳನ್ನು ವ್ಯಾನಿನಲ್ಲಿ ಲೋಡ್ ಮಾಡುವ ಬಾ"

ಎಂದನು ವಿಶ್ವನಾಥ್

ವಾಂಜುಂಗ್, ವಿಶ್ವನಾಥರಿಬ್ಬರೂ ಸೇರಿಕೊಂಡು ಚಕಚಕನೆ ಶವಗಳೆಲ್ಲವನ್ನು ವ್ಯಾನಿನೊಳಗೆ ಸೇರಿಸಿದರು

ಈ ಅಲ್ಪ ಸಮಯದಲ್ಲಿ ಮಹೇಶ್ ಗ್ರೂಪ್ ಲೀಡರ್ ಹತ್ತಿರ ಹೋಗಿ ಐಡೆಂಟಿಟಿ ಕಾರ್ಡನ್ನು ಸ್ವಾಧೀನಪಡಿಸಿಕೊಂಡ

ವ್ಯಾನನ್ನು ಅಡವಿಯೆಡೆಗೆ ಒಯ್ದು ಎ.

ಸುಮಾರು ಅರ್ಧ ಫರ್ಲಾಂಗಿನಷ್ಟು ದೂರದಲ್ಲಿರುವ ಒಂದು ಮರದ ಪೊದೆಯ ಮಧ್ಯೆ ನಿಲ್ಲಿಸಿ ಹಿಂತಿರುಗಿದ ವಿಶ್ವನಾಥ್.

ಟ್ರಕ್ಕಿನಲ್ಲಿ ಮಿಕ್ಕ ಮೂವರೂ ರೆಡಿಯಾಗಿದ್ದಾರೆ.

ವಿಶ್ವನಾಥ್ ಫ್ರಂಟ್ ಸೀಟ್‌ನಲ್ಲಿ ಹತ್ತಿ ಕುಳಿತುಕೊಳ್ಳುತ್ತಿದ್ದಂತೆಯೇ ಟ್ರಕ್ಕನ್ನು ಮುಂದಕ್ಕೆ ಚಲಾಯಿಸಿದ ಮಹೇಶ.

# 16

"ವ್ಯಾನನ್ನು ಇಲ್ಲಿಯೇ ನಿಲ್ಲಿಸಿ"

ಎಂದನು ವಾಂಜುಂಗ್.

ಆತನ ಮಾತಿನಂತೆ ವ್ಯಾನನ್ನು ನಿಲ್ಲಿಸಿದ ಮಹೇಶ.

"ಇನ್ನು ಕೆಲವೇ ದೂರದಲ್ಲಿ ಜಗಾರಿನ್ ಲ್ಯಾಬ್ಸ್‌ನ ಭವನ ತೋರಿ ಬರುತ್ತಿದೆ. ಅಲ್ಲಿಗೆ ಈ ವ್ಯಾನಿನ ಸಮೇತ ಹೋಗಬಲ್ಲೆವೆ"

ಎಂದು ಪ್ರಶ್ನಿಸಿದನಾತ

"ಸರಿ ಹಾಗಾದ್ರೆ, ನೀನು ಮತ್ತು ವ್ಯಾಂಗ್ ಇಲ್ಲೇ ಉಳಿಯಿರಿ ಈಗ ನೀವು ಏನು ಮಾಡುತ್ತೀರೆಂದರೆ...."

ಎಂದು ಅವರುಗಳು ಮಾಡುವ ಕೆಲಸವನ್ನು ವಿವರವಾಗಿ ಹೇಳಿದ ಮಹೇಶ.

ವಾಂಜುಂಗ್, ವ್ಯಾಂಗ್‌ರಿಬ್ಬರೂ ತಲೆಯಲ್ಲಾಡಿಸಿ ಸೈನಿಕರ ಹತ್ತಿರ ಕಲೆಕ್ಟ್ ಮಾಡಿದ ಗನ್ಸ್‌ನೊಂದಿಗೆ ಜರಜರನೆ ಓಡಿಹೋಗಿ ಮರಗಳ ಮರೆಯಲ್ಲಿ ಮರೆಯಾದರು.

ಫ್ರಂಟ್ ಸೀಟಿನಲ್ಲಿ ಡ್ರೈವಿಂಗ್ ಮಾಡುತ್ತಿರುವ ಮಹೇಶ್‌ನ ಪಕ್ಕದಲ್ಲೇ ಕುಳಿತಿದ್ದಾನೆ ವಿಶ್ವನಾಥ್.

ಆತನ ಎಡಗೈಯ ಬಳಿ ಯಾವ ಕ್ಷಣದಲ್ಲಾದರೂ ಮೇಲಕ್ಕೇಳಲು ಮೆಷಿನ್‌ಗನ್ ಸಿದ್ಧವಾಗಿದೆ

ಅದರ ಟ್ರಿಗ್ಗರಿನ ಮೇಲೆ ಬೆರಳಿರಿಸಿ, ಅದರ ಬಟ್ ಮೇಲೆ ಹಸ್ತವನ್ನಿರಿಸಿ ಪೂರ್ಣ ಸಿದ್ಧತೆಯಲ್ಲಿದ್ದಾನೆ ವಿಶ್ವನಾಥ್.

ಏನಾದರೂ ಅಪಾಯ ಎದುರಾದರೆ ಸಾಕು ತತ್‌ಕ್ಷಣವೇ ವಿಂಡೋ ದಲ್ಲಿ ಬ್ಯಾರೆಲ್ಲನ್ನು ತೂರಿಸಿ ಟ್ರಿಗ್ಗರನ್ನು ಅದುಮಿದರೆ ಸಾಕು.

ವ್ಯಾನಿನ ಚಕ್ರಗಳು ನಿಧಾನವಾಗಿ ತಿರುಗಲು ಪ್ರಾರಂಭಿಸಿದವು

"ಇವರುಗಳು ನಮಗಾಗಿ ಬಂದಿರುವುದೆಂದು ಸೆಕ್ಯೂರಿಟಿಗೆ ತಿಳಿದಿದೆಯೋನೋ...."

ತನ್ನೊಳಗಿದ್ದ ಸಂದೇಹವನ್ನು ಹೊರಗೆಡವಿದ ಮಹೇಶ.

"ಇದ್ದರೂ ಇರಬಹುದು ಶತ್ರುಗಳು ಬರುತ್ತಾರೆಂದು ಅರಿತು ಸಿದ್ಧತೆಯಲ್ಲಿದ್ದರೆ ನಮ್ಮ ಕೆಲಸ ಇನ್ನೂ ಸಲೀಸು"

ಉತ್ತರಿಸಿದ ವಿಶ್ವನಾಥ್.

ಕೆಲವು ಸಮಯಗಳಲ್ಲಿ ಹೋ ರೋಡಿನ ಒಂದು ಬದಿಯಲ್ಲಿ ಚಿಕ್ಕ ನೇಮ್ ಬೋರ್ಡ್ ತೋರಿ ಬಂತು ಅದರಲ್ಲಿನ ಅಕ್ಷರಗಳು ಚೈನಾ ಭಾಷೆಯಲ್ಲಿದೆ.

"ಜಗಾರಿನ್ ಲ್ಯಾಬರೇಟರಿಸ್. ಪ್ರಾಹಿಬಿಟೆಡ್ ಏರಿಯಾ...."

ಮತ್ತಿನ್ನು ಅರ್ಧ ಫರ್ಲಾಂಗ್ ದೂರ ಹೋದ ನಂತರ ಜಗಾರಿನ್ ಲ್ಯಾಬ್ಸ್‌ನ ಮೈದಾನ ಹತ್ತಿರವಾಯಿತು.

ಸುತ್ತಲೂ ಐರನ್ ಫೆನ್ಸಿಂಗ್ ದಟ್ಟವಾಗಿದೆ.

ಎಂಟ್ರೆನ್ಸ್‌ನಲ್ಲಿ ಬಾಗಿಲಿಗೆ ಅತ್ತಿತ್ತ ಎರಡು ಮರದ ಉದ್ದನೆಯ ಪೆಟ್ಟಿಗೆಗಳಿವೆ. ಅವು ಸೆಂಟ್ರಿಗಳಿಗೆ.

ಒಳಗೆ ಫೆನ್ಸಿಂಗ್‌ಗೆ ಅತುಕೊಂಡೇ ಒಂದು ಚಿಕ್ಕ ಕೊಠಡಿಯಿದೆ.

ಬಹುಶಃ ಅದು ಸೆಕ್ಯೂರಿಟಿ ಕಂಟ್ರೋಲ್‌ದಾಗಿರಬಹುದೆಂದು ಊಹಿಸಿದರು.

ಆ ಐರನ್ ಫೆನ್ಸಿಂಗ್ ಇರುವ ಜಾಗದಿಂದ ಸುಮಾರುನೂರೈವತ್ತು ಹೆಜ್ಜೆಗಳ ದೂರದಲ್ಲಿ ತೋರುತ್ತಿದೆ ಲ್ಯಾಬ್‌ಗೆ ಸಂಬಂಧಿಸಿದಂತಹ ಭವನ.

ಅಲ್ಲಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳು ಕೈಯಲ್ಲಿ ಗನ್ಸ್‌ನೊಂದಿಗೆ ಅತ್ತಿತ್ತ ತಿರುಗುವುದು ತೋರಿಬಂತು ಮಹೇಶ್ ಮತ್ತು ವಿಶ್ವನಾಥ್‌ರಿಗೆ

ಆ ಟ್ರಕ್ಕು ನಿಧಾನವಾಗಿ ಬಂದು ಐರನ್ ಫೆನ್ಸಿಂಗ್ ಹತ್ತಿರವಿರುವ ಸೆಂಟ್ರಿ ಬಾಕ್ಸ್‌ಗಳ ಎಂಟ್ರೆನ್ಸ್ ವೇ ಹತ್ತಿರ ನಿಂತಿತು

ಸೆಂಟ್ರಿಯೊಬ್ಬ ಗನ್ನನ್ನು ಪೊಜಿಷನ್‌ನಲ್ಲಿ ಇರಿಸಿಕೊಂಡು ಟ್ರಕ್ಕಿನ ಹತ್ತಿರ ಬಂದ

ತಲೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಹಿಂದಕ್ಕೆ ವಾಲಿಸಿಕೊಂಡು ತನ್ನಲ್ಲಿರುವ ಐಡೆಂಟಿಟಿ ಪೇಪರ್ಸನ್ನು ಆತನಿಗೊಪ್ಪಿಸಿದ ಮಹೇಶ.

ಮುಖಕ್ಕೆ ಮೇಕಪ್ ಮಾಡಿಕೊಳ್ಳಲು ಅವಕಾಶವಿಲ್ಲ.

ಹಾಗೇನಾದರೂ ಸಮಯವಿದ್ದಿತೇ ಆದರೆ ಆ ಗ್ರೂಪ್ ಲೀಡರಿನ ಹಾಗೆ ಮೇಕಪ್ ಮಾಡಿಕೊಂಡು ಬರುತ್ತಿದ್ದ.

ಕ್ಯಾಮುಯಲ್ಲಾಗಿ ನೋಡಿ ಪೇಪರ್ಸನ್ನು ಹಿಂತಿರುಗಿಸಿದ ಆ ಸೆಂಟ್ರಿ.

ಆ ಐರನ್ ಗೇಟನ್ನು ತೆರೆಯಲೆಂಬಂತೆ ಸನ್ನೆ ಮಾಡಿದ.

ನಿಮಿಷಗಳ ತರುವಾಯ ಯಥೇಚ್ಛವಾಗಿ ಒಳಗೆ ಪ್ರವೇಶಿಸಿದ ಮಹೇಶ್ ಮತ್ತು ವಿಶ್ವನಾಥರಿಬ್ಬರೂ.

o • • o

ವಿಶ್ವನಾಥ್, ಮಹೇಶ್ ಪ್ರಯಾಣಿಸುತ್ತಿರುವ ಟ್ರಕ್ಕು ಮುಂದಕ್ಕೆ ಸಾಗುತ್ತಿರುವಂತೆಯೇ ನಿಧಾನವಾಗಿ ರೋಡಿಗೆ ಒಂದು ಬದಿಯಲ್ಲಿರುವ ಮತ್ತೊಂದು ಮರದ ಹಿಂಬದಿಯನ್ನು ಸೇರಿಕೊಂಡರು ವಾಂಜುಂಗ್ ಮತ್ತು ವ್ಯಾಂಗ್.

ಆ ಸಮಯದಲ್ಲಿ ಅವರಲ್ಲಿ ಯಾವುದೋ ಹಠ ಮನೆಮಾಡಿಕೊಂಡಿದೆ.

ಎಲ್ಲಿಲ್ಲದ ಆತ್ಮವಿಶ್ವಾಸ ಅವರುಗಳ ಮುಖದಲ್ಲಿ ತಾಂಡವಾಡುತ್ತಿದೆ.

"ಡಿಯರ್ ಬ್ರದರ್, ಇವರುಗಳು ಒಳಗೆ ಹೋದರು. ಇನ್ನು ಕಾಲು ಗಂಟೆಗಳಲ್ಲಿಯೇ ಹೊರಗೆ ಬರುತ್ತಾರೆ ನೀನು ರೋಡಿಗೆ ಆ ಬದಿಯಲ್ಲಿ ನಿಲ್ಲು"

ಎಂದು ಆದೇಶಿಸಿದಳು ವ್ಯಾಂಗ್.

ಸರಿಯೆಂಬಂತೆ ತಲೆಯಲ್ಲಾಡಿಸುತ್ತಾ ಮುಂದಕ್ಕೆ ನಡೆಯಲನುವಾದ

ಅದೇ ಸಮಯದಲ್ಲಿ !

"ಹ್ಯಾಂಡ್ಸಪ್...."

ಗದ್ದರಿಸಿದ ಧ್ವನಿಯೊಂದು ಕೇಳಿಬಂತು ಅವರ ಹಿಂದಿನಿಂದ.

ಭಯಭೀತರಾಗಿ ಇಬ್ಬರೂ ಅಲ್ಲಿಯೇ ನಿಂತರು.

"ಯಾರು ನೀವು ? ಇಲ್ಲೇನು ಮಾಡುತ್ತಿರುವಿರಿ ?"

ಅಧಿಕಾರಯುತವಾದ ಧ್ವನಿಯೊಂದು ಪ್ರಶ್ನಿಸಿತು.

ಒಂದಿನಿತೂ ಮಿಸುಕಾಡಲಿಲ್ಲ ವ್ಯಾಂಗ್.

"ಏಯ್ ಹುಡುಗಿ, ಮೊದಲು ಇತ್ತ ತಿರುಗು"

ಎಂದು ಅಜ್ಞಾಪಿಸಿದ.

ಆ ರೀತಿಯ ಅಜ್ಞೆಗಾಗಿಯೇ ಎದುರು ನೋಡುತ್ತಿದ್ದಳಾಕೆ.

ರಿವ್ವನೆ ಹಿಂದಕ್ಕೆ ತಿರುಗಿದಳು.

ಹಾಗೆ ಹಿಂದಕ್ಕೆ ತಿರುಗುತ್ತಲೇ ಗನ್ನನ್ನು ಬಲವಾಗಿ ಎತ್ತಿ ಹಿಡಿದು ಕೋಲನ್ನು ತಿರುಗಿಸಿದ ಹಾಗೆ ತಿರುಗಿಸಿದಳು.

ಆಕೆಯ ಊಹೆ ಸರಿಯಾದದ್ದೆ.

ಹಿಂಬದಿಯಲ್ಲಿ ಬೆದರಿಸಿದವನು ಒಬ್ಬನೇ.

ವ್ಯಾಂಗ್ ಚಂಗನೆ ಹಾಗೆ ತಿರುಗಿದರಿಂದ ಗನ್ ಆತನ ಕುತ್ತಿಗೆಯನ್ನು ಸ್ಪರ್ಶಿಸಿತು.

ಕಣ್ಣು ಮಸುಕಾದಂತೆನಿಸಿತು.

ಅಸ್ಪಷ್ಟದಿಂದ ಚಿಕ್ಕ ಕೂಗೊಂದು ಆತನಿಂದ ಹೊರಟಿತು.

ವ್ಯಾಂಗ್ ಮುಂದಕ್ಕೆ ಬಾಗಿ ಆತನ ಬಾಯನ್ನು ಮುಚ್ಚಬೇಕೆಂದು ಪ್ರಯತ್ನಿಸಿದಳು.

ಆಕೆಯ ಪ್ರಯತ್ನ ಫಲಿಸುವ ಮೊದಲೇ ಆತ ಗಟ್ಟಿಯಾಗಿ ಅರಚಿಕೊಂಡ.

ಗನ್ ಬಟನ್‌ನ ಸಹಾಯದಿಂದ ಆತನ ತಲೆಯ ಮೇಲೆ ಮೊಟಕಿದಳು.

ಟಪ್‌ನೆಂದು ಶಬ್ದ ಹೊರಬಂತು.

ರಕ್ತ ಚಿಮ್ಮಿತು !

ವ್ಯಾಂಗ್‌ಳಿಗೆ ಈ ದೃಶ್ಯದಿಂದ ಭಯವೇನೂ ಆಗಲಿಲ್ಲ. ಬದಲಾಗಿ ಒಬ್ಬ ಸೈನಿಕನ ಮೇಲಾದರೂ ನನ್ನ ಸೇಡನ್ನು ತೀರಿಸಿಕೊಂಡೆನಲ್ಲಾ ಎಂಬ ಸಂತೋಷದ ಛಾಯೆ ಆಕೆಯಲ್ಲಿ ತೋರಿತು.

ತೃಪ್ತಿ ತಂದುಕೊಟ್ಟಿತು ಆಕೆಗೆ.

ಶ

ವ್ಯಾಂಗ್ ಮಿಸುಕಲಾಡುವಷ್ಟರಲ್ಲೇ ಆಕೆಯನ್ನು ಐದಾರು ಜನ ಮಿಲಿಟರಿ ಸೈನಿಕರು ಸುತ್ತುವರಿದರು.

ಬಹುಶಃ ಎಲ್ಲರೂ ಅಡವಿಯೊಳಗೆ ಕಾವಲು ಕಾಯುತ್ತಿದ್ದಿರಬಹುದು.

ಡೇಂಜರ್ ಟ್ರ್ಯಾಪ್‌ನಲ್ಲಿ ಸಿಲುಕಿಕೊಂಡಿದ್ದಾಳೆ ವ್ಯಾಂಗ್.

ವಾಂಜುಂಗ್ ಸುಮ್ಮನೆ ನಿಂತುಕೊಂಡಿದ್ದಾನೆ.

ಇದಕ್ಕಿದ್ದಂತೆಯೇ ಗನ್ನನ್ನು ಎತ್ತಿ ಟ್ರಿಗ್ಗರನ್ನು ಅದುಮಿದಳು ವ್ಯಾಂಗ್.

"ಗಜ್....ಗಜ್....ಜ್....ಜ್...."

ಎನ್ನುತ್ತಾ ಅರಣ್ಯವನ್ನು ಪ್ರತಿಧ್ವನಿಸುವಂತೆ ಮಾಡಿತು ಆ ಶಬ್ದ

ತನ್ನ ಅಕ್ಕಳ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ವಾಂಜುಂಗ್ ಸಹ ಗನ್ನನ್ನು ಗುರಿ ನೋಡಿ ಟ್ರಿಗ್ಗರನ್ನು ಅದುಮಿದ.

ಆ ಮರುಕ್ಷಣವೇ ಆಹಾಕಾರದಿಂದ ತುಂಬಿ ಹೋಯಿತು ಅರಣ್ಯ ಪ್ರಾಂತ.

"ಬ್ರದರ್, ರನ್ ಅಪ್....ಜಗಾರಿನ್ ಲ್ಯಾಬ್ಸ್ ಇಂದಿಗೇ, ಇಲ್ಲಿಗೆ ಧ್ವಂಸ ಆಗಬೇಕು"

ಎಂದು ಹೇಳಿದಳು ಆಕೆ.

ಅದೇ ಸಮಯದಲ್ಲಿ ಹೊರಗೆ ರೋಡಿನಲ್ಲಿ ಸೆಂಟ್ರಿಯ ಬೂಟಿನ ಶಬ್ದ ಕೇಳಿಬಂತು.

ಚಟಕ್ಕನೆ ಅವರೆಡೆಗೆ ಗನ್ನನ್ನು ತಿರುಗಿಸಿ ಟ್ರಿಗ್ಗರನ್ನು ಒತ್ತಿದಳು ವ್ಯಾಂಗ್.

ಓಡೋಡಿ ಬರುತ್ತಿದ್ದವರು ಬರುತ್ತಿದ್ದಂತೆಯೇ ಪ್ರಾಣ ಬಿಡುತ್ತಾ ಕೆಳಗುರುಳಿದರು.

ಒಂದೇ ಜಿಗಿತದಲ್ಲಿ ಐರನ್ ಗೇಟನ್ನು ಸಮಿಪಿಸಿ ಅದನ್ನು ತೆರೆದು ಒಳಗೆ ನುಗ್ಗಿದಳು ವ್ಯಾಂಗ್.

ಆ ಸಮಯದಲ್ಲಿ ಆಕೆಗೆ ಅಡ್ಡ ಬಂದವರ ಶರೀರಗಳು ರಂಧ್ರಗಳಾಗುತ್ತಿವೆ.

ಬಹಳಷ್ಟು ಜನ ಸಾವನ್ನಪ್ಪಿದರು.

• ० • •

ಟ್ರಕ್ಕನ್ನು ಒಂದೆಡೆ ಪಾರ್ಕ್ ಮಾಡಿ ಇಬ್ಬರೂ ನಿಧಾನವಾಗಿ ನಡೆಯ ಆರಂಭಿಸಿದರು.

ತಮ್ಮಗಳ ಕೈಯಲ್ಲಿ ಗನ್ಸ್ ಇದ್ದಿತೆಂದರೆ ಅವರುಗಳಿಗೆ ಅನುಮಾನ ಬರುವುದೆಂದು ಅವುಗಳನ್ನು ಟ್ರಕ್ಕಿನ ಸೀಟಿನ ಕೆಳಗೆ ಅವಿತಿಟ್ಟರು.

ಜೇಬಿನಲ್ಲಿರುವ ರಿವಾಲ್ವರ್ಸ್‌ನ ನಳಿಗೆಯ ಮೇಲೆ ಅವರ ಬೆರಳುಗಳು ಭದ್ರವಾಗಿ ಹಿಡಿದಿವೆ.

ಬಿಲ್ಡಿಂಗ್‌ನ ಮೇಲೆ ನೇಮ್ ಬೋರ್ಡ್ ಇದೆ

ಸಾಲಾಗಿ ಒಂದೊಂದನ್ನೇ ನೋಡುತ್ತಾ ಮುಂದಕ್ಕೆ ನಡೆಯುತ್ತಿದ್ದಾರೆ ಮಹೇಶ್ ಮತ್ತು ವಿಶ್ವನಾಥ್.

ಅಡ್ಮಿನಿಸ್ಟ್ರೇಷನ್ !

ರೆಕಾರ್ಡ್ ರೂಮ್ !

ಮೆಸ್ !

ಮೊದಲಾದವುಗಳನ್ನು ದಾಟಿ ಬಿಲ್ಡಿಂಗ್‌ನ ಹಿಂಬದಿಯನ್ನು ಸೇರಿಕೊಂಡರು.

ಅಲ್ಲಿ ಚಿಕ್ಕ ರೂಮೊಂದಿದೆ.

ಹೊರಗೆ ಕೆಂಪನೆಯ ಬೋರ್ಡ್ ನೇತಾಡುತ್ತಿದೆ.

ಪವರ್ ರೂಮ್....!

"ಅದೇ ಪವರ್ ರೂಮ್"

ಇಬ್ಬರೂ ಕತ್ತರಿಸಿ ಅದರೆಡೆಗೆ ನೋಡಿದರು

ನೋಡುತ್ತಲೇ ಅದನ್ನು ಸಮೀಪಿಸಿದರು.

ಅದೇ ಸಮಯದಲ್ಲಿ ಹೊರಗಿನಿಂದ ಮೆಷಿನ್‌ಗನ್ನಿನ ಶಬ್ದ ಕೇಳಿ ಸ್ತಂಭೀಭೂತರಾಗಿ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು ಮಹೇಶ್ ಮತ್ತು ವಿಶ್ವನಾಥ್

ವ್ಯಾಂಗ್ ಮತ್ತು ವಾಂಚುಂಗರಿಗೆ ಯಾವುದೋ ಅಪಾಯ ಸಂಭವಿಸಿದಂತಿದೆ. ತಾವುಗಳು ಮುಂದುವರಿಯಬೇಕು

ಪವರ್ ರೂಮಿನ ಹತ್ತಿರ ಕಾವಲು ಕಾಯುತ್ತಿದ್ದಂತಹ ಸೆಂಟ್ರಿಗಳು ಅನುಮಾನದಿಂದ ಇವರೆಡೆಗೆ ನೋಡುತ್ತಿದ್ದಾರೆ

"ಕಾಮ್ರೇಡ್, ಹೊರಗೆ ಶತ್ರುಗಳು ಧಾಳಿ ಮಾಡುತ್ತಿದ್ದಾರೆ. ಬನ್ನಿ ಅವರಿಗೆ ಬುದ್ಧಿ ಹೇಳುವಾ!"

ಆತುರಾತುರದಿಂದ ನುಡಿದ ಬ್ರಿಗೇಡಿಯರ್ ವಿಶ್ವನಾಥ್.

ಆದರೂ ಅವರುಗಳು ಒಂದಿಂಚೂ ಕದಲಲಿಲ್ಲ.

ಸ್ಟ್ರಿಕ್ಟ್ ಡಿಸಿಪ್ಲಿನ್ ಮೈಯಿನ್‌ಟೈನ್ ಮಾಡುತ್ತಿರಬಹುದಲ್ಲಿ.

ಅದೇ ಸಮಯದಲ್ಲಿ ಅಲಾರಂ ಜೊರ್ರನೆ ಶಬ್ದ ಮಾಡಿತು.

ಇನ್ನವರು ಸುಮ್ಮನಾಗಲಿಲ್ಲ.

"ನೀವೂ ಬನ್ನಿ...."

ಎನ್ನುತ್ತಲೇ ಗೇಟನೆಡೆಗೆ ದೌಡಾಯಿಸಿದರು

ಅವರುಗಳನ್ನು ಕೆಲವು ಗಜಗಳವರೆವಿಗೆ ಅನುಸರಿಸಿ ಚಂಗನೆ ಹಿಂದಕ್ಕೆ ತಿರುಗಿದರು ಮಹೇಶ ಮತ್ತು ವಿಶ್ವನಾಥರಿಬ್ಬರೂ.

"ಮಹೇಶ್, ಅವರ ಕಥೆಯನ್ನು ನಾನು ನೋಡಿಕೊಳ್ಳುತ್ತೇನೆ. ನೀನು ಲ್ಯಾಬನ್ನು ಗಮನಿಸಿಕೋ...."

ಮಹೇಶ್ ಆತನನ್ನು ಬಿಟ್ಟು ಲ್ಯಾಬ್‌ನೆಡೆಗೆ ಓಡಿಹೋದ

ವಿಶ್ವನಾಥ್ ಪವರ್ ರೂಮಿನೊಳಗೆ ಹೋದ.

ಆ ಸಮಯದಲ್ಲಿ ಜಗಾರಿನ್ ಲ್ಯಾಬ್ಸ್ ಪೂರಾ ಆಹಾಕಾರದಿಂದ ಕೂಡಿದೆ.

ಎಲ್ಲೆಂದರಲ್ಲಿ ಓಡತೊಡಗಿದ್ದಾರೆ ಸೈನಿಕರು ಮತ್ತು ಸೈಂಟಿಸ್ಟ್‌ಗಳು.

ಮಹೇಶ್‌ಗೆ ವಾಂಜುಂಗ್ ಹೇಳಿದ ಮಾತುಗಳು ಜ್ಞಾಪಕಕ್ಕೆ ಬರತೊಡಗಿದೆ.

ಆತನಿಗೆ ಅಡ್ಡ ಬರುತ್ತಿರುವ ಜನರನ್ನು ತಳ್ಳಿಕೊಂಡು ಮುಂದಕ್ಕೆ ಸಾಗಿ ಹೋಗುತ್ತಿದ್ದಾನೆ ಮಹೇಶ್.

ಕಟ್ಟ ಕಡೆಗೆ ಆತನಿಗೆ ಬೇಕಾದಂತಹ ರೂಮ್ ದೊರಕಿತು.

"ಅಂಡರ್ ಗ್ರೌಂಡ್ ಲ್ಯಾಬ್....ಸ್ಟ್ರಿಕ್ಟ್ಲಿ ಪ್ರೊಹಿಬಿಟೆಡ್!"

ಬಲವಾದ ಸ್ಟೀಲ್ ಬೋರ್ಡೊಂದು ಅಂಟಿಸಲ್ಪಟ್ಟಿದೆ ಅಲ್ಲಿ.

ಆ ಸ್ಟೀಲ್ ಡೋರಿನ ಹೊರಗಡೆ ಚಿಕ್ಕ ವ್ಹೀಲ್ ಒಂದಿದೆ.

ಮಹೇಶ್ ತನ್ನ ವಾಚನ್ನು ನೋಡಿಕೊಂಡ.

ಸರಿಯಾಗಿ. ಮಧ್ಯಾಹ್ನದ ಸಮಯ ಹನ್ನೊಂದು ಗಂಟೆ, ಹತ್ತು ಸೆಕೆಂಡು....

ಅದೇ ಸಮಯದಲ್ಲಿ ಪವರ್ ಕಟ್ ಆಯಿತು.

ಮಹೇಶ ಉತ್ಸಾಹದಿಂದ ಸ್ಟೀಲ್ ಡೋರಿಗಿರುವ ವ್ಹೀಲನ್ನು ಬಲವಾಗಿ ತಿರುಗಿಸಿದ.

ಲಾಕ್ ಅನ್‌ಲಾಕಾಗಿ ಡೋರ್ ತೆರೆದುಕೊಂಡಿತು.

ನಂತರ ಉತ್ಸಾಹದಿಂದ ಒಳಗೆ ಹೋಗತೊಡಗಿದ.

ಅದೇ ಸಮಯದಲ್ಲಿ ಹಿಂದಿನಿಂದ ಕರ್ಕಶವಾದ ಧ್ವನಿಯೊಂದು ಕೇಳಿಸಿತು.

"ಏಯ್, ಯಾರು ನೀನು ? ಅದನ್ನೇತಕ್ಕೆ ತೆರೆದೆ ?"

ಕೊಂಚ ಮಾತ್ರವೂ ಅಕ್ಷೇಪಣೆಯೆತ್ತಲಿಲ್ಲ ಮಹೇಶ್.

ನಿಂತಲ್ಲೇ ನೆಲಕ್ಕೆ ಕಿಸ್ ಕೊಟ್ಟು ಗಿರ್ರನೆ ಗಾಳಿಯಲ್ಲಿ ತಿರುಗಿ ಒಂದೇ ಒಂದು ಬಲವಾದ ತೋಫಾಗಿರಿ ಪಾಟನ್ನು ಆತನಿಗೆ ಕೊಟ್ಟ.

ಆತ ಅದನ್ನು ರಿಸೀವ್ ಮಾಡಿಕೊಂಡು ಧಡಾರನೆ ಕೆಳಗೆ ಬಿದ್ದ.

ಗನ್ ಒಂದು ಕಡೆ ಬಿದ್ದಿತು.

ಮಹೇಶ್ ಆ ಗನ್ನನ್ನು ತೆಗೆದುಕೊಂಡು ಆತನಿಗೇ ಗುರಿ ಮಾಡಿ ಟ್ರಿಗ್ಗರನ್ನು ಅದುಮಲು ರೆಡಿಯಾದ.

ಅಷ್ಟರಲ್ಲಿ ಅವನ ಮನಸ್ಸಿಗೆ ಏನು ಹೊಳೆಯಿತೋ ಸುಮ್ಮನಾದ.

ಆತನನ್ನು ಶೂಟ್ ಮಾಡಿ ಇತರರ ಕಾನ್ಸನ್‌ಟ್ರೇಷನ್‌ನನ್ನು ತನ್ನೆಡೆಗೆ ಡೈವರ್ಟ್ ಮಾಡಿಕೊಳ್ಳಲು ಇಷ್ಟವಿರಲಿಲ್ಲ ಆತನಿಗೆ.

ಆದುದರಿಂದಲೇ ಗನ್ನನ್ನು ಪಕ್ಕಕ್ಕೆ ತಳ್ಳಿ ಭರ್ರನೆ ಜಾರಿ ಆತನ ಮುಖ ಅಪ್ಪಚ್ಚಿಯಾಗುವಂತೆ ತನ್ನ ಬೂಟು ಕಾಲಿನಿಂದ ಮುತ್ತಿಕ್ಕಿದ.

ತನ್ನೆರಡೂ ಕೈಗಳಿಂದ ಮುಖವನ್ನು ಅದುಮಿ ಹಿಡಿದುಕೊಂಡ ಆ ಸೈನಿಕ.

ಕೈಯಲ್ಲಿನ ಗನ್ ಬಟ್‌ನೊಂದಿಗೆ ಸೈನಿಕನ ಕುತ್ತಿಗೆಯ ಮೇಲೆ ಬಿಗಿದ.

ತಲೆಯನ್ನು ಪಕ್ಕಕ್ಕೆ ವಾಲಿಸಿದ ಆ ಅಮಾಯಕ ಸೈನಿಕ.

ಚಟಕ್ಕನೆ ಅಂಡರ್‌ಗ್ರೌಂಡಿನ ಲ್ಯಾಬಿನೊಳಗೆ ಪ್ರವೇಶಿಸತೊಡಗಿದ ಮಹೇಶ.

ಹೊರಗಡೆಯಿಂದ ಗನ್ಸ್‌ಗಳ ಶಬ್ದಗಳು ಕೇಳಿಬರುತ್ತಿವೆ.

ಪವರ್ ಕಟ್ ಆದರೂ ಸಹ ಎಮರ್ಜೆನ್ಸಿ ಬ್ಯಾಟರಿ ವರ್ಕ್ ಮಾಡು ತ್ತಿದೆ ಆ ಲ್ಯಾಬ್‌ನಲ್ಲಿ.

ಒಳಗಡೆ ಲೈಟುಗಳು ಉರಿಯುತ್ತಿವೆ.

ಆ ಕೊಠಡಿ ಪೂರಾ ಸ್ಟೀಲ್‌ನಿಂದ ಮಾಡಲ್ಪಟ್ಟಿದೆ.

ಒಂದೆಡೆ ಸ್ಟೀಲ್ ವಾಲ್ ಇದೆ.

ಅದಕ್ಕೊಂದು ಚಿಕ್ಕ ವ್ಹೀಲ್ ಇದೆ.

ಅದರ ಪಕ್ಕದಲ್ಲೇ ನಂಬರ್‌ಗಳಿರುವ ಚಿಕ್ಕ ಬಟನ್ಸ್‌ಗಳಿವೆ.

ಆ ಲಾಕ್ ಕಾಂಬಿನೇಷನ್‌ನ ನಂಬರ್ಸನ್ನು ಅದುಮಿ ವ್ಹೀಲನ್ನು ತಿರು ಗಿಸಿದರೇನೆ ಅನ್‌ಲಾಕ್ ಆಗಿ ಸ್ಟೀಲ್ ವಾಲ್ಸ್ ತೆರೆದುಕೊಳ್ಳುತ್ತದೆ.

ಮಹೇಶ್‌ಗೆ ಆಗಲಿ, ವಾಂಜುಂಗ್‌ಗೆ ಆಗಲಿ ಆ ಕಾಂಬಿನೇಷನ್ ಗೊತ್ತಿಲ್ಲ.

ಗನ್ನನ್ನು ಪಕ್ಕದಲ್ಲೇ ಇರಿಸಿದ.

ನಂಬರ್ಸನ್ನು ತಾನು ಊಹಿಸಿದ ಕಾಂಬಿನೇಷನ್‌ನಲ್ಲಿ ಒತ್ತುತ್ತಾ ಶತ ಪ್ರಯತ್ನ ಪಡುತ್ತಿದ್ದ ಮಹೇಶ.

• • • •

ಪವರ್ ರೂಮಿನ ಬಳಿ ನಿಂತು ಸುತ್ತಲೂ ನೋಡಿದ ವಿಶ್ವನಾಥ್.

ಗುಂಪು ಗುಂಪಾಗಿ ಓಡತೊಡಗುತ್ತಿರುವ ಸೈನಿಕರು ಕಂಡುಬಂದರು.

ಒಂದೆಡೆ ಆಹಾರಂನ ಅರಚಾಟ.

ಯಾವುದೇನೇ ಆದರೂ ಆಕ್ಷನ್ ತೆಗೆದುಕೊಳ್ಳುವುದು ಆತನಿಗೆ ಹಿಡಿಸ ಲಿಲ್ಲ.

ಪವರ್ ಇಲ್ಲದಿದ್ದರೆ ಸೇಫ್ಟಿ ವಾಲ್ಸ್ ತೆರೆಯುವುದು ಬಹಳ ಸುಲಭ ವೆಂದು ವಾಂಜುಂಗ್ ಹೇಳಿದ್ದ.

ಇಷ್ಟರಲ್ಲೇ ಆತನ ಎಡಗಡೆಯಿಂದ ಗನ್ ಬುಲೆಟ್ಸ್ ಉಗುಳುವ ಶಬ್ದ ಕೇಳಿಬಂತು.

ಚಟಕ್ಕನೆ ಮೆಷಿನ್‌ಗನ್ನನ್ನು ಆ ಶಬ್ದ ಬಂದೆಡೆಗೆ ಗುರಿ ಹಿಡಿದ.

ಮುಂದೆ ಮುಂದೆ ವ್ಯಾಂಗ್ ಓಡುತ್ತಿದ್ದಾಳೆ. ಆಕೆಯ ಹಿಂಬದಿಯಲ್ಲೇ ವಾಂಜಾಂಗ್ ಬರುತ್ತಿದ್ದಾನೆ

"ಮೈ ಗಾಡ್ ! ವ್ಹಾಟ್ ಎ ಫೂಲಿಷ್‌ನೆಸ್ ?"

ತನ್ನಲ್ಲೇ ಅಂದುಕೊಂಡ ವಿಶ್ವನಾಥ್.

ಮೆಷಿನ್ ಗನ್‌ಗೆ ಸಿಲುಕಿಕೊಳ್ಳದೇ ಪವರ್ ರೂಮನ್ನು ಸೇರಿಕೊಂಡ ಳಾಕೆ.

ಅಲ್ಲಿದ್ದಂತಹ ವಿಶ್ವನಾಥನನ್ನು ನೋಡಿ ಹುಸಿನಗೆ ಬೀರಿದಳು.

ಅತಿಯಾದ ಆಯಾಸದಿಂದ ಆಕೆಯ ಎದೆ ಏರಿಳಿಯುತ್ತಿದೆ.

"ಬಹಳ ತೊಂದರೆ ಪಡುತ್ತಿದ್ದೀಯಾ....ಏನಾಯ್ತು ?"

ವಿಚಾರಿಸಿದ ವಿಶ್ವನಾಥ್.

ಆಕೆ ಅದಕ್ಕೆ ಉತ್ತರಿಸುವಷ್ಟರಲ್ಲೇ 'ಧನಾ ಧನ್' ಎನ್ನುತ್ತಾ ಶೂಟ್ ಮಾಡುತ್ತಾ ಪವರ್ ರೂಮನ್ನು ಧಾಳಿ ಮಾಡಿದರು ಸೈನಿಕರು.

ವಿಶ್ವನಾಥ್ ಅಲ್ಲಿರುವ ವಿಷಯ ಅವರುಗಳಿಗೆ ಗೊತ್ತಿಲ್ಲ.

ಬ್ರಿಗೇಡಿಯರ್ ವಿಶ್ವನಾಥ್ ಸರಿಯಾದ ಗುರಿನೋಡಿ ಟ್ರಿಗ್ಗರನ್ನು ಅದುಮಿದ

ಗಿರ‍್ರನೆ ತಿರುಗಿತು ಮ್ಯಾಗಜೈನ್.

"ಗಜ್....ಜ್....ಜ್....ಜ್....ಗಜ್"

ಎನ್ನುತ್ತಾ ಮೆಷಿನ್ ಗನ್ ಬೆಂಕಿಯನ್ನುಗುಳಿತು.

ಧಡ್‌ಧಡಾರನೆ ಸಾಲಾಗಿ ನೆಲಕ್ಕುರಗಿದರು ಸೈನಿಕರು.

"ಮಹೇಶ್ ಎಲ್ಲಿ ?"

ವ್ಯಾಂಗ್ ಪ್ರಶ್ನಿಸಿದಳು.

ಆಕೆಯೂ ಸುಮ್ಮನೆ ಕೂರದೆ ಗನ್‌ನೊಂದಿಗೆ ಆಟವಾಡುತ್ತಿದ್ದಳು.

ಕೊಂಚ ಯೋಚಿಸಿ ಟೈಮನ್ನು ನೋಡಿಕೊಂಡ ವಿಶ್ವನಾಥ್.

ಮಹೇಶ್ ಹೋಗಿ ಈಗಾಗಲೇ ಇಪ್ಪತ್ತು ನಿಮಿಷಗಳ ಮೇಲಾಗಿದೆ.

ಅಲ್ಲೇನಾಗಿರಬಹುದು ?

ವಾಲ್ವನ್ನು ತೆರೆಯಲು ಸಾಧ್ಯವಾಯಿತೇ ?

ಇಷ್ಟೊತ್ತಿಗಾಗಲೇ ಇಲ್ಲಿನ ವ್ಯವಹಾರದ ಬಗ್ಗೆ ದೇಶ ಪೂರಾ ತಿಳಿದಿರುತ್ತದೆ.

ಎಲ್ಲಿಯುಂದರಲ್ಲೀ ಸೈನಿಕರು ಬ್ಲಾಕ್ ಮಾಡುತ್ತಾರೆ.

ಮೊದಲೇ ಇವರುಗಳು ಟೆಲಿಫೋನ್ ಲೈನ್‌ಗಳನ್ನು ಕಟ್ ಮಾಡಿಯಾಗಿದೆ.

ಆದರೂ ಅವರಲ್ಲಿ ವೈರ್‌ಲೆಸ್ ಇರಲಾರದೆ ?

ವಿಶ್ವನಾಥ್ ಆಲೋಚಿಸುತ್ತಿರುವಂತೆಯೇ ಯಾರೋ ಗ್ರೆನೇಡ್ ಎಸೆದಂತೆ ತೋರುತ್ತಿ.

ಪವರ್ ರೂಮ್ ಎಂಟ್ರೆನ್ಸ್‌ಗೆ ಐದಡಿ ದೂರದಲ್ಲಿ ಬಿದ್ದು ಭಯಂಕರವಾಗಿ ಸ್ಫೋಟಿಸಿತು.

ಬಿಲ್ಡಿಂಗ್ ಶೇಕಾದಂತಾಯಿತು.

ಕಿವಿಗಳು ಮುಚ್ಚಿಕೊಂಡಂತಾಯಿತು.

ಎರಡು ಮೂರು ಕ್ಷಣಗಳವರೆವಿಗೆ ಕಣ್ಣ ಮುಂದೆ ಏನು ನಡೆಯುತ್ತದೆಂದು ತೋರುತ್ತಿಲ್ಲ.

ಶತ್ರುಗಳು ಪವರ್ ರೂಮಿನಲ್ಲಿ ಅವಿತುಕೊಂಡಿರುವರೆಂದು ಮಿಕ್ಕವರಿಗೂ ವರ್ತಮಾನ ತಲುಪಿದುದರಿಂದ ಸೈನಿಕರು ಗುಂಪು ಗುಂಪಾಗಿ ಬಂದು ಸುತ್ತುವರೆದರು

ಸುತ್ತಲೂ ಸುತ್ತುವರೆದಿರುವ ಶತ್ರುಗಳನ್ನು ನೋಡುತ್ತಿರುವಂತೆಯೇ ವ್ಯಾಂಗ್ ಮತ್ತು ವಾಂಜುಂಗ್ ಧೃತಿಗೆಡದೆ ಮೆಷಿನ್‌ಗನ್‌ನ ಪವರ್ ಆನ್ ಮಾಡಿ ಶೂಟ್ ಮಾಡಲು ಶುರು ಮಾಡಿದರು.

ಆದಾಗಲೇ ಪವರ್ ರೂಮಿನ ಗೋಡೆ ಅಲ್ಲಲ್ಲಿ ಬುಲೆಟ್ಸ್‌ಗೆ ಆಹುತಿಯಾಗಿದೆ

ಇದಕ್ಕಿದ್ದಂತೆಯೇ ವ್ಯಾಂಗ್ ಅದುರಿಬಿದ್ದಳು.

ಏಕೆಂದರೆ ಮೆಷಿನ್ ಗನ್ನಿನ ಕ್ಲಿಪ್ ಕಂಪ್ಲೀಟ್ ಕ್ಲೋಸ್ ಆಗಿದೆ.

ಭಯದಿಂದ ವಿಶ್ವನಾಥನೆಡೆಗೆ ನೋಡಿದಳು.

"ನನ್ನ ಪರಿಸ್ಥಿತಿಯೂ ಅದೇ !"

ಎನ್ನುವಂತೆ ನೋಡಿದನಾತ.

ಮೊಟ್ಟ ಮೊದಲ ಬಾರಿಗೆ ಭಯಪಾವರಿಸಿತು ಆಕೆಯಲ್ಲಿ.

ತನ್ನ ತಮ್ಮನಾದ ವಾಂಜುಂಗ್‌ನ ಹತ್ತಿರ ಸಹ ಬುಲೆಟ್ಸ್ ಖಾಲಿಯಾಗುತ್ತಿದೆ.

ವಿಶ್ವನಾಥನ ದೃಷ್ಟಿ ಟೈಮಿನ ಕಡೆ ಹರಿಯಿತು.

ಮಹೇಶ್ ಹೋಗಿ ಸುಮಾರು ಹೊತ್ತು ಆಗಿದೆ

ಆತ ತನ್ನ ಕರ್ತವ್ಯದಲ್ಲಿ ಸಕ್ಸಸ್ ಆದರೆ ?

ತಮ್ಮ ಭವಿಷ್ಯ, ನಮ್ಮ ದೇಶದ ಭವಿಷ್ಯ ಈಗ ಆತನ ಕೈಯ್ಯಲ್ಲಿದೆ !

"ಧಡಾರ್...."

ಎಂದು ಮತ್ತೊಂದು ಗ್ರೆನೇಡ್ ಅವರ ಕಣ್ಣ ಮುಂದೆ ಸ್ಫೋಟಿಸಿತು.

ಪವರ್ ರೂಮನ್ನು ನಾಶ ಮಾಡಿ, ಶತ್ರುಗಳನ್ನು. ನಾಶ ಮಾಡಲು ಅವರಿಗೆ ಇಷ್ಟವಿಲ್ಲ.

ಇದರಿಂದ ನಷ್ಟವಾಗುವುದು ಅವರಿಗೇನೆ.

ತಮ್ಮನ್ನು ಭಯಪಡಿಸಿ ಇಲ್ಲಿಂದ ಹೊರಗೆಳೆಯಲು ಪ್ರಯತ್ನಿಸುತ್ತಿದ್ದಾರೆ.

ಸರಿಯಾಗಿ ಅದೇ ಕ್ಷಣದಲ್ಲಿ ಚೈನಾ ಮಿಲಿಟರಿ ಟ್ರಕ್ಕೊಂದು ಅವರೆಡೆಗೆ ವಿಪರೀತ ವೇಗದಿಂದ ಬಂದಿತು.

ಎಲ್ಲರೂ ಆಶ್ಚರ್ಯ ಚಕಿತರಾದರು.

ಅಷ್ಟರಲ್ಲೇ ಚೇತರಿಸಿಕೊಂಡು ಗನ್ನನ್ನು ಅದರೆಡೆಗೆ ಗುರಿ ಮಾಡಿದರು.

ಟ್ರಕ್ಕಿನ ಒಳಗಿರುವ ಮಹೇಶ್ ನಿಲ್ಲಿಂಬಂತೆ ಸನ್ನೆ ಮಾಡಿ ಟ್ರಕ್ಕನ್ನು ಸ್ಪೀಡಾಗಿ ಓಡಿಸಿಕೊಂಡು ಹೋಗಿ ಪವರ್ ರೂಮಿಗೆ ಗುದ್ದಿದ.

ಫಟ್ ಫಟಾರೆಂದು ಉರುಳಿದವು ಇಟ್ಟಿಗೆ ಗೋಡೆ.

ಆತನ ಉದ್ದೇಶವೇನೆಂದು ಮಿಕ್ಕವರಿಗೆ ಅರ್ಥವಾಯಿತು.

ಷೂಟ್ ಮಾಡುವುದನ್ನು ನಿಲ್ಲಿಸಿ, ವಿನೋದವನ್ನು ನೋಡತೊಡಗಿದರು.

ಮಹೇಶ್ ಟ್ರಕ್ಕನ್ನು ಹಿಂದಕ್ಕೆ ತಿರುಗಿಸಿ, ಹಿಂಭಾಗ ಅಲ್ಲಿ ಸೇರುವಂತೆ ವೇಗವಾಗಿ ಓಡಿಸಿದ.

ಅತನನ್ನು ದೂರದಿಂದ ನೋಡುತ್ತಲೇ ಗುರುತು ಹಿಡಿದಿದ್ದು ವಿಶ್ವನಾಥ್ ಒಬ್ಬನೇ.

"ಬಾಸ್ಟರ್ಡ್, ನಮ್ಮನ್ನು ಸಮಾಧಿ ಮಾಡಬೇಕೆಂದು ನೋಡು ತ್ತಿದ್ದಾನೆ!"

ಕೋಪದಿಂದ ಉಸುರಿದಳು ವ್ಯಾಂಗ್.

ನಿಟ್ಟುಸಿರೊಂದನ್ನು ಹೊರಬಿಟ್ಟು ನಗತೊಡಗಿದ ಬ್ರಿಗೇಡಿಯರ್ ವಿಶ್ವನಾಥ್.

"ನಾವು ಅದರ ಸಹಾಯದಿಂದಲೇ ಈಗ ತಪ್ಪಿಸಿಕೊಳ್ಳಹೋಗುತ್ತಿದ್ದೇವೆ"

ಇದನ್ನು ಕೇಳುತ್ತಲೇ ಅವಮಾನದಿಂದ ತಲೆ ಕೆಳಗೆ ಮಾಡಿದಳಾಕೆ.

ಟ್ರಕ್ಕು ಹಿಂದಕ್ಕೆ ಬಂದು ಗೋಡೆಗೆ ಗುದ್ದಿಕೊಂಡು ಹಾಗೆಯೇ ನಿಂತಿತು.

ಗೇರನ್ನು ಚೇಂಜ್ ಮಾಡಿ ಮುಂದಕ್ಕೆ ಓಡಿಸಲು ಎರಡೇ ಎರಡು ಸೆಕೆಂಡ್ ಸಾಕು ಮಹೇಶನಿಗೆ.

ಅದೇ ಕ್ಷಣದಲ್ಲಿ ವ್ಯಾಂಗ್, ವಾಂಚುಂಗ್, ವಿಶ್ವನಾಥರೆಲ್ಲರೂ ಚಟಕ್ಕನೆ ಎಗರಿ ಟ್ರಕ್ಕಿನ ರಿಯರ್ ಸೈಡಿನೊಳಗೆ ಜಂಪ್ ಮಾಡುವುದನ್ನು ಯಾರೂ ಗಮನಿಸಲಿಲ್ಲ.

ರಿವ್ವನೆ ಮುಂದಕ್ಕೆ ಸಾಗಿ ಹೋಯಿತು ಆ ಟ್ರಕ್....!

ಮತ್ತೆ ಹಿಂದಕ್ಕೆ ತಿರುಗಿ ಬರುತ್ತದೆಂದು ಕಾಯುತ್ತಿದ್ದ ಸೈನಿಕರಿಗೆ ನಿರಾಸೆ ಕಾದಿತ್ತು.

ಅದು ಮುಂದಕ್ಕೆ ಸಾಗಿ ಹೋಗುತ್ತಿರುವುದನ್ನು ಕಂಡು ಮೂಕ ವಿಸ್ಮಿತರಾದರು ಚೈನಾ ಮಿಲಿಟರಿ ಸೈನಿಕರು.

"ನಿಲ್ಲಿಸಿ....ಅದನ್ನು ನಿಲ್ಲಿಸಿ"

ಗಟ್ಟಿಯಾಗಿ ಅರಚತೊಡಗಿದರು ಚೈನಾ ಮಿಲಿಟರಿ ಅಧಿಕಾರಿಗಳು

ಅಷ್ಟರಲ್ಲಾಗಲೇ ಅದು ಮುಂದಿರುವ ಐರನ್ನು ಗೇಟನ್ನು ಛೇಧಿಸಿ ಕೊಂಡು ರೋಡನ್ನು ತಲುಪಿತು

ಮತ್ತಿನ್ನು ಕೊಂಚ ದೂರ ಹೋಯಿತೋ ಇಲ್ಲವೋ ಚಕಚಕನೆ ಮಿಲಿಟರಿ ಟ್ರಕ್ಕಿನಲ್ಲಿ ಅದನ್ನು ಹಿಂಬಾಲಿಸಿದರು ಸೈನಿಕರು.

ಅದೇ ಸಮಯದಲ್ಲಿ ಮುಂದಿರುವ ಬಿಲ್ಡಿಂಗ್ ಭೂಕಂಪವಾದಂತೆ ಹೇರಾಯಿತು

ಡೈನಾಮೆಟ್ ಸ್ಫೋಟದಿಂದ ಹಾಗಾಯಿತು !

ಮರುಕ್ಷಣದಿಂದಲೇ ಬಿಲ್ಡಿಂಗ್ ನುಚ್ಚು ನೂರಾಗಿ ಎಲ್ಲಾ ಕಡೆ ಚದುರಿತು.

ಬೆಂಕಿಯ ಜ್ವಾಲೆ ಆಕಾಶದೆತ್ತರಕ್ಕೆಗರಿತು.

ಆ ಶಬ್ದದೊಂದಿಗೆ ಮಿಲಿಟರಿ ಸೈನಿಕರ ಆಹಾಹಾರ ಅಸ್ಪಷ್ಟವಾಗಿ ಕೇಳಿಸತೊಡಗಿತು.

# 17

ಮೊದ ಮೊದಲು ತತ್ತರಿಸಿ ಹೋದ.

ಅದನ್ನು ನಂಬಲಾರದವನಂತೆ ನೋಡಿದ.

ಹುಚ್ಚು ಹಿಡಿದವನಂತೆ ತನ್ನ ಕೂದಲನ್ನು ಕಿತ್ತುಕೊಳ್ಳತೊಡಗಿದ.

ಶತಪಥ ಅತ್ತಿತ್ತ ತಿರುಗತೊಡಗಿದ.

ಈಗ ಹೆಂಡ ಕುಡಿದ ಕೋತಿಯಂತಾಗಿದ್ದಾನೆ ಮೇಜರ್ ತ್ಯಾಂಗ್ ಚೇನ್.

ಕೋಪದಿಂದ ತನ್ನ ಹಣೆಯನ್ನು ಚಚ್ಚಿಕೊಂಡ.

"ಇದೆಲ್ಲಾ ಆ ಕೈಥಾನ ಪ್ಲಾನ್. ನನಗ್ಗೊತ್ತು ಇದು ಆತನದೇ ಪ್ರೀಪ್ಲಾನ್ ಎಂದು. ಆತನನ್ನು ಕೊಲ್ಲಿ, ಹಿಡಿದು ಕೊಲ್ಲಿ, ನಿಮ್ಮಲ್ಲಿರುವ ಬುಲೆಟ್ಸ್‌ಗಳನ್ನು ಆತನ ದೇಹದೊಳಗೆ ತೂರಿಸಿ"

ಅರಚುತ್ತಾ ಆದೇಶಿಸಿದ ತನ್ನ ಜೂನಿಯರ್ಸ್‌ಗೆ.

ಅದೇ ಸಮಯದಲ್ಲಿ ಸ್ಯಾತಾ ಅಲ್ಲಿಗೆ ಪ್ರವೇಶಿಸಿದಳು.

ಆತ ಹೇಳಿದ ಮಾತುಗಳೆಲ್ಲವನ್ನು ಆಲಿಸಿದಳು

"ಆತ ನಮ್ಮ ಕಣ್ಣಿಗೆ ಮಣ್ಣೆರಚಿ ತಪ್ಪಿಸಿಕೊಂಡು ಓಡಿಹೋದ"

ಅಷ್ಟೇ ಡೀಸೆಂಟಾಗಿ ನುಡಿದಳು ಸ್ಯಾತಾ.

"ಅಯ್ಯೋ...."

ಮತ್ತಷ್ಟು ಉದ್ರೇಕಿತನಾದ ತ್ಯಾಂಗ್‌ಚೇನ್.

ಸ್ವಲ್ಪ ಸಮಯದಲ್ಲೇ ಶಾಂತಿ ತಾಳಿದ ತ್ಯಾಂಗ್‌ಚೇನ್.

ಒಂದು ಕುರ್ಚಿಯಲ್ಲಿ ಕುಳಿತುಕೊಂಡು ಟೀಯನ್ನು ಕಪ್‌ನಲ್ಲಿ ಸುರಿದುಕೊಂಡ.

ಸ್ಯಾತಾಳೆಡೆಗೆ ತಲೆಯೆತ್ತಿ ಸಹ ನೋಡಲಿಲ್ಲ.

ಆತ ಯಾವ ರೀತಿಯಾದ ಮಾನಸಿಕ ಚಿತ್ರವಧೆಯನ್ನು ಅನುಭವಿಸುತ್ತಿದ್ದಾನೆಂದು ಆಕೆಗೆ ಚೆನ್ನಾಗಿ ಗೊತ್ತು

ಮೌನವಾಗಿ ಹೊರಗೆ ಬಂದು ಜೀಪನ್ನು ಹತ್ತಿದಳು

ಡ್ರೈವರ್ ಮುಂದೆ ಬಂದ

"ಈಗ ಬೇಕಾಗಿಲ್ಲ, ನಾನೊಬ್ಬಳೇ ಹೋಗುತ್ತೇನೆ"

ಮುಕ್ತ ಕಂಠದಿಂದ ಹೇಳಿ, ಜೀಪನ್ನು ಸ್ಟಾರ್ಟ್ ಮಾಡಿ ಮುಂದಕ್ಕೆ ಚಲಾಯಿಸಿದಳು.

ಆಕೆಗೆ ಕೋಪ ಬಂದಿರಬಹುದೆಂದು ಅವರುಗಳು ಗ್ರಹಿಸಿದರು.

# 18

ದೂರದಲ್ಲಿ ಬೆಳ್ಳಗೆ ಮಂಜಿನ ಬೆಟ್ಟ ಪ್ರತ್ಯಕ್ಷವಾಗುತ್ತಿದೆ.

ಅಷ್ಟರವರೆವಿಗೂ ದ್ರವಿಸುತ್ತಿರುವ ಮಂಜು ನಿಂತಿದೆ.

ವಿಪರೀತವಾಗಿ ನಡೆದೂ ನಡೆದೂ ಅಲಸಿಹೋಗಿದ್ದಾರೆ ಮಹೇಶ್, ವಿಶ್ವನಾಥ್, ವಾಂಜುಂಗ್ ಮತ್ತು ವ್ಯಾಂಗ್‌ರು.

ಈಗ ಸಮಯ ರಾತ್ರಿಯಾಗಿದೆ.

ಹಾದಿ ಮಧ್ಯ ಟ್ರಕ್ಕನ್ನು ಬಿಟ್ಟು, ಸೈನಿಕರಿಂದ ತಪ್ಪಿಸಿಕೊಂಡು ಬರುವಷ್ಟರಲ್ಲಿ ಇಷ್ಟು ಸಮಯ ಹಿಡಿಯಿತು.

ಆದರೂ ಅವರುಗಳು ನಡಿಗೆಯನ್ನು ನಿಲ್ಲಿಸಲಿಲ್ಲ.

ರಾತ್ರಿಯಾದರೂ ನಡೆಯುತ್ತಲೇ ಇದ್ದಾರೆ.

ವಾಂಜುಂಗ್, ವ್ಯಾಂಗ್‌ರಿಗೆ ಪ್ರಾಕ್ಟೀಸ್ ಇಲ್ಲದ್ದರಿಂದ ಬಹಳವಾಗಿ ಬಳಲಿದ್ದಾರೆ.

ಅಲ್ಲಲ್ಲಿ ವಿಶ್ರಾಂತಿ ಪಡೆದುಕೊಂಡು ಮತ್ತೆ ಮುಂದಕ್ಕೆ ಸಾಗುತ್ತಿದ್ದಾರೆ.

ಜೇಬಿನಿಂದ ಮ್ಯಾಪನ್ನು ಹೊರಗೆ ತೆಗೆದು ಒಂದು ಬಾರಿ ಪೆನ್‌ಟಾರ್ಚಿನ ಬೆಳಕಿನಲ್ಲಿ ಪರಿಶೀಲಿಸಿದ ವಿಶ್ವನಾಥ್.

"ರೈಟ್....ನಮ್ಮ ಪೀಕನ್ನು ಸಮೀಪಿಸಿದೆವು"

ಎನ್ನುತ್ತಾ ಮತ್ತಷ್ಟು ಮುಂದಕ್ಕೆ ಸಾಗುವಷ್ಟರಲ್ಲಿ ಚಿಕ್ಕ ಗುಹೆಯಂತಿರುವ ಖಾಲಿ ಪ್ರದೇಶ ತೋರಿಬಂತು

ನಾಲ್ವರೂ ಅದರೊಳಗೆ ಪ್ರವೇಶಿಸಿದರು

ವಾಂಜುಂಗ್, ವ್ಯಾಂಗರು ತುಪಕ್ಕನೆ ಕೆಳಗುರುಳಿದರು.

ಅವರೆಡೆಗೆ ನೋಡುತ್ತಾ ಉಸುರಿದ ಮಹೇಶ್–

"ವ್ಯಾಂಗ್, ನಿಮ್ಮ ಸಹಾಯ ಒಂದಿಲ್ಲದಿದ್ದರೆ ಈ ಕೆಲಸ ಪೂರ್ತಿಯಾಗುತ್ತಿರಲಿಲ್ಲ. ನಿಮ್ಮ ಮನೆಯ ಹತ್ತಿರ ನಿಮ್ಮನ್ನು ಡ್ರಾಪ್ ಮಾಡುತ್ತೇನೆ"

"ಬೇಡ....ಬೇಕಾಗಿಲ್ಲ"

ಕರಗಳಲ್ಲಿ ತುಂಬಿ ಬಂದ ನೀರನ್ನು ಒರೆಸಿಕೊಳ್ಳದೆ ಹೇಳಿದಳು ವ್ಯಾಂಗ್–

"ಇಷ್ಟೊತ್ತಿಗಾಗಲೇ ನಮ್ಮ ತಂದೆ ತಾಯಿಯನ್ನು ಬಂಧಿಸಿರುತ್ತಾರೆ. ನಮ್ಮ ಇರುವಿಕೆಯನ್ನು ತಿಳಿಸೆಂದು ಹಿಂಸೆ ಮಾಡಿ ಕೊಂದು ಹಾಕಿದರೂ ಇದ್ದಿರಬಹುದು ನಾವೂ ನಿಮ್ಮೊಂದಿಗೆ ಬರುತ್ತೇವೆ ನಿಮಗೆ ಅಭ್ಯಂತರವಾದರೆ ಇಲ್ಲೇ ನಮ್ಮ ಪ್ರಾಣವನ್ನು...."

"ಓಹ್....ಷಟಪ್"

ಅರಚಿದ ವಿಶ್ವನಾಥ್.

"ನಿಮಗೆ ನಮ್ಮೊಂದಿಗೆ ಬರಲು ಇಷ್ಟವಾದರೆ ಬರಬಹುದು ನಮ್ಮ ದೇಶದಲ್ಲೇ ಯಾವುದಾದರೊಂದು ಏರ್ಪಾಟು ಮಾಡುವಾ!"

ಅದೇ ಕ್ಷಣದಲ್ಲಿ ಗುಹೆಯ ಮುಂದೆ ಸಣ್ಣ ಶಬ್ದವಾಯಿತು.

ಚಟಕ್ಕನೆ ರಿವಾಲ್ವರ್ ಗುಹೆಯ ಎಂಟ್ರೆನ್ಸ್‌ಗೆ ಫೇಸ್ ಮಾಡಿತು

ಎರಡು ನಿಮಿಷಗಳ ತರುವಾಯ ಸ್ವಾತಿ ಒಳಗೆ ಪ್ರವೇಶಿಸಿದಳು

"ಓಹ್....ನೀನಾ...."

ಎನ್ನುತ್ತಾ ರಿವಾಲ್ವರನ್ನು ಒಳಗಿರಿಸಿದ ಮಹೇಶ

"ನೀವು ಹೊರಡಲು ರೆಡಿಯಾಗಿದ್ದೀರಾ? ಇವರ್‍ಯಾರು?"

ಅವರುಗಳೆಡೆಗೆ ಮುಖ ಮಾಡಿ ಪ್ರಶ್ನಿಸಿದಳು ಸ್ವಾತಿ

ವ್ಯಾಂಗ್ ಮತ್ತು ವಾಂಜುಂಗ್‌ರ ಪರಿಚಯ ಮಾಡಿಸಿ ಅವರುಗಳು ಹೇಗೆ ಸಿಕ್ಕಿದರು, ಅವರಿಂದ ಉಪಕಾರವಾದುದ್ದನ್ನು ವಿವರಿಸಿದರು ಮಹೇಶ್ ಮತ್ತು ವಿಶ್ವನಾಥ್.

"ತ್ಯಾಂಗ್‌ಚೀನ್ ಅಲ್ಲಿ ತಲೆ ಚಚ್ಚಿಕೊಳ್ಳುತ್ತಿದ್ದಾನೆ. ಪಾಪ ಅತ

ಆಪೂಯಿಕನ್ನಾರನ್ನೋ ಕ್ಸೈಫಾ ಎಂದು ಭಾವಿಸಿ ಆತನನ್ನು ಕೊಲ್ಲಲು ನೋಡುತ್ತಿದ್ದಾನೆ ಆ ಕ್ಸೈಫಾ ನಾನೇ ಎಂದು ತಿಳಿದರೆ ಆತನ ಮುಖ ಹೇಗಿರುತ್ತೋ ಹೇಳಲಸಾಧ್ಯ"

ಎಂದು ಹೇಳಿದಳು ಸ್ವಾತಾ.

ನ್ಯಾಂಗ್ ವಾಂಜುಂಗ್‌ರಿಗೆ ಈ ಮಾತು ಸ್ವಲ್ಪ ಮಾತ್ರ ಅರ್ಥವಾಯಿತು. ಸ್ವಲ್ಪ ಅರ್ಥವಾಗದೇ ಉಳಿಯಿತು.

"ಈಗ ಸಧ್ಯಕ್ಕೆ ಎಲ್ಲಾ ರೋಡ್‌ಗಳನ್ನು ಬ್ಲಾಕ್ ಮಾಡಿಸಿದ್ದಾರೆ. ಬಾರ್ಡರ್‌ನ ಹತ್ತಿರವೂ ಸಹ ಸೆಕ್ಯೂರಿಟಿ ಬಹಳ ಸ್ಟ್ರಿಕ್ಟಾಗಿ ಇದೆ"

"ಹಾಗಾದರೆ ಬೇರೆ ಮಾರ್ಗ ಇಲ್ಲವೇ ?"

"ಯಾಕಿಲ್ಲ ? ಅತ್ಯಂತ ರಹಸ್ಯವಾದ ಮಾರ್ಗವೊಂದಿದೆ ಆದರೆ ಅದು ಸುತ್ತು ಬಳಸುವಿಕೆ ಜಾಸ್ತಿ. ಆದರೆ ಅದನ್ನು ಬಿಟ್ಟರೆ ಬೇರೆ ದಾರಿಯಿಲ್ಲ"

ಹೌದೆಂಬಂತೆ ತಲೆಯಾಡಿಸಿದ ಮಹೇಶ್.

ಬೆಳಬೆಳಗಾಗುತ್ತಲೇ ಐವರು ನಡೆಯುತ್ತಾ ಒಂದು ಚಿಕ್ಕ ಶಿಖರದ ಬಳಿ ಸೇರಿಕೊಂಡರು.

"ಗುಡ್ ಲಕ್ ಜಂಟಲ್ ಮೆನ್ ! ಅಲ್ಲಿ ತೋರುವ ಬೆಟ್ಟವನ್ನು ಹತ್ತಿ ಆ ಕಡೆಗೆ ಇಳಿದರೆ ಖಠ್ಮಂಡುವಿಗೆ ಹೋಗುವ ದಾರಿ ಸಿಗುತ್ತೆ ನಾನು ಹೇಳಿದ ಗುರುತುಗಳನ್ನು ಜ್ಞಾಪಕವಿರಿಸಿಕೊಂಡಿರುವಿರಿ ತಾನೇ ?"

ಎಂದಳು ಸ್ವಾತಾ.

ಇದೆಯೆಂಬಂತೆ ತಲೆಯಾಡಿಸಿ ಮುಂದಕ್ಕೆ ನಡೆದರು ಆ ನಾಲ್ವರು.

ಅವರುಗಳು ಕಣ್ಮರೆಯಾಗುವವರೆವಿಗೂ ಅಲ್ಲೇ ಇದ್ದು ತಾನು ತನ್ನ ದಾರಿಗೆ ಹಿಂತಿರುಗಿದಳು ಸ್ವಾತಾ.

—x ಮುಗಿಯಿತು x—